ಹತ್ತನೇ ವರ್ಷದ
ಮೊದಲ ಸಂಚಿಕೆ

# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಫೆಬ್ರುವರಿ, ೨೦೨೧ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೧೦ ಸಂಚಿಕೆ: ೧

ಚಂದಾ ರೂ. ೧೫೦/- (೨೦೨೧ರ ಜನವರಿಯಿಂದ ಸೆಪ್ಟಂಬರ್‌ವರೆಗೆ) ಸಂಸ್ಥೆಗಳಿಗೆ ರೂ. ೨೫೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಇತ್ತೀಚೆಗೆ ಬಳ್ಳಾರಿಯ ಲೋಹಿಯಾ ಪ್ರಕಾಶನದ ಗೆಳೆಯ ಸಿ. ಚನ್ನಬಸವಣ್ಣ ಅವರು ಕರೆ ಮಾಡಿ, ಅಂದು ತಾವು ಭಾಗವಹಿಸಿದ್ದ ಸಾರ್ವಜನಿಕ ಸಭೆಯೊಂದರಲ್ಲಿ ರಾಜ್ಯವನ್ನು ಇಂದು ಸರ್ವನಾಶದೆಡೆಗೆ ತಳ್ಳುತ್ತಿರುವ ಶಕ್ತಿಗಳ ಪಟ್ಟಿಯಲ್ಲಿ ರಾಜಕಾರಣಿಗಳು ಮೂರನೇ ಸ್ಥಾನದಲ್ಲಿದ್ದು ಅವರಿಗಿಂತ ಮುಂಚಿನ ಎರಡು ಸ್ಥಾನಗಳಲ್ಲಿ ಮಠಾಧೀಶರು ಮತ್ತು ಸಾಹಿತಿಗಳಿದ್ದಾರೆ ಎಂದು ಹೇಳಿದ್ದಾಗಿ ತಿಳಿಸಿದರು. ರಾಜ್ಯದಲ್ಲಿನ ಇಂದಿನ ದಿನನಿತ್ಯದ ಪರಿಸ್ಥಿತಿಯನ್ನು ನೋಡಿದಾಗ ಅವರ ಮಾತನ್ನು ಯಾರಾದರೂ ಒಪ್ಪದೇ ಇರಲು ಸಾಧ್ಯವಿಲ್ಲ. ಆದರೆ ಈ ಪಟ್ಟಿಗೆ ರಾಜಾಕಾರಣಿಗಳಿಗೆ ಮುನ್ನ ಟಿವಿ ಪತ್ರಕರ್ತರು ಮತ್ತು ಮತದಾರರನ್ನು ಸೇರಿಸಬೇಕೆಂಬುದು ನನ್ನ ಅಭಿಪ್ರಾಯವಾಗಿತ್ತು. ಅದೇನೇ ಇರಲಿ ಸದ್ಯಕ್ಕೆ ನಮ್ಮ ತುರ್ತು ಗಮನ ಸೆಳೆಯುವಂತಿರುವವರು ಮಠಾಧೀಶರು ಮತ್ತು ಮತದಾರರು, ಅವರ ನೇರ ಕಾರ್ಯಾಚರಣೆಗಳಿಂದಾಗಿ ಎನ್ನಬಹುದು.

ನಮ್ಮ ಈ ಪಟ್ಟಿ ಆಯಾ ಗುಂಪಿನ ಪ್ರತಿಯೊಬ್ಬರಿಗೂ ಅನ್ವಯವಾಗಲಾರದಾದರೂ, ಇಂದಿನ ರಾಜ್ಯದ ಸಾರ್ವಜನಿಕ ಜೀವನದಲ್ಲಿ ಇವರೆಲ್ಲ ತಮ್ಮ ಪಾಲಿನ ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುವ ರೀತಿ ನೋಡಿದರೆ, ಇದು ಅವರಲ್ಲಿ ಬಹುಪಾಲು ಜನರಿಗೆ ಅನ್ವಯವಾಗುತ್ತದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಕಾವಿ ಎಂಬುದು ಸರ್ವಸಂಗ ಪರಿತ್ಯಾಗದ, ಅಧ್ಯಾತ್ಮದ ಸಂಕೇತ. ಆದರೆ ಇಂದು ಅಧ್ಯಾತ್ಮ ಹಾಳಾಗಿ ಹೋಗಲಿ, ಧರ್ಮದ ಗೋಜಿಗೂ ಹೋಗದೆ ಜಾತಿಗಳನ್ನು ಪ್ರತಿನಿಧಿಸುತ್ತಾ ಈ ಕಾವಿಧಾರಿ ಸ್ವಾಮಿಗಳು ಆ ಜಾತಿಗಳ ಹಿತಾಸಕ್ತಿಗಳಿಗಾಗಿ ಬೀದಿಗಿಳಿದು ರಾಜಕಾರಣವನ್ನು ನಿಯಂತ್ರಿಸಲು ಹೊರಟಿರುವ ಪರಿ ನೋಡಿದರೆ, ಅವರು ಆಡುತ್ತಿರುವ ಮಾತುಗಳನ್ನು ಗಮನಿಸಿದರೆ ಆಯಾ ಜಾತಿಗಳಲ್ಲಿರುವ ಮರ್ಯಾದಸ್ಥ ಜನರೇ ನಾಚಿಕೆ ಪಡುವಂತಾಗಿದೆ,. ಯಾಕೆಂದರೆ ಈ ಮಠಾಧೀಶರು ತಿಳಿದಂತೆ ಮನುಷ್ಯ ಯಾವಾಗಲೂ ಜಾತಿಯೊಳಗೇ ಇದ್ದು ಚಿಂತಿಸುವುದಿಲ್ಲ. ಏಕೆಂದರೆ ಮೊದಲು ಅವನು ಮನುಷ್ಯ. ಆಮೇಲೆ ಅವನ ಜಾತಿ ಅಷ್ಟೆ. ಈ ಸಾಮಾನ್ಯ ವಿವೇಕವೂ ತಂತಮ್ಮ ಜಾತಿ ಜನರ ಮೀಸಲಾತಿಯ ಪರಿವರ್ತನೆಗೋ, ಹೆಚ್ಚಳಕ್ಕೋ, ಒಳಗೊಳ್ಳುವಿಕೆಗೋ ಬೀದಿಗಿಳಿದಿರುವ ಸ್ವಾಮೀಜಿಗಳಿಗೆ ತಿಳಿಯಲಾಗದಿದ್ದರೆ ಅದಕ್ಕೆ ಅವರು ಸುತ್ತಿಕೊಂಡಿರುವ ಕಾವಿಯ ಮಾಯೆಯೇ ಕಾರಣವಾಗಿದೆ ಎನ್ನಬಹುದು.

ಮೊದಲಾಗಿ ಸಾರ್ವಜನಿಕ ರಂಗದಲ್ಲಿ ಉದ್ಯೋಗಗಳೇ ಮಾಯವಾಗುತ್ತಿರುವಾಗ ಈ ಕಾವಿಧಾರಿಗಳಿಗೆ ಮೀಸಲಾತಿಯ ಟಡಿಣ ವಿಂಗಡಣೆ ಅಥವಾ ಪಾಲು ಹೆಚ್ಚಿದರೆ ಅವರ ಜಾತಿಗಳ ಜನರ ಸಬಲೀಕರಣವಾಗುತ್ತದೆ ಎಂದು ಹೇಗೆ ತೀರ್ಮಾನಿಸಿದ್ದಾರೋ ಗೊತ್ತಾಗದು. ಮೊದಲು ಅವರು ಸಾರ್ವಜನಿಕ ರಂಗದಲ್ಲಿ ಉದ್ಯೋಗಗಳು ಮಾಯವಾಗುತ್ತಿರುವ ರಾಜಕೀಯ ನೀತಿಯ ಬಗ್ಗೆ ಪರ್ಯಾಲೋಚಿಸಬೇಕಿದೆ. ಹಾಗೂ ಈಗ ಸಾರ್ವಜನಿಕ ರಂಗದ ಉದ್ಯೋಗಗಳಲ್ಲಿರುವ ತಂತಮ್ಮ ಜಾತಿಗಳ ಜನ ಇಂದು ದಿನನಿತ್ಯವೂ ವರದಿಯಾಗುತ್ತಿರುವ ಬೃಹತ್ ಸರ್ಕಾರಿ ಭ್ರಷ್ಟಾಚಾರ ಮತ್ತು ಸಾರ್ವಜನಿಕ ಸಂಪತ್ತಿನ ಲೂಟಿಯಲ್ಲಿ ಭಾಗಿಯಾಗುತ್ತಿರುವ ಬಗ್ಗೆ ಯೋಚಿಸಿ ಪರಿಹಾರಗಳ ಬಗ್ಗೆ ಚರ್ಚಿಸಬೇಕು. ಆಗ ಅದು ಸಾರ್ವಜನಿಕ ಹಿತಾಸಕ್ತಿಯ ಕೆಲಸವಾಗುತ್ತದೆ. ಆಗ ಅವರು ಒಂದು ಜಾತಿಯಲ್ಲಿದ್ದರೂ, ಎಲ್ಲ ಜಾತಿಗಳ ಜನರ ಗೌರವಕ್ಕೆ ಪಾತ್ರರಾಗುವ, ಎಲ್ಲರ ಬೆಂಬಲಕ್ಕೆ ಅರ್ಹರಾಗುವ ಧಾರ್ಮಿಕ ನೆಲೆಯ 'ಗುರು'ವೆನಿಸಿಕೊಳ್ಳುತ್ತಾರೆ. ಇನ್ನು ಅಧ್ಯಾತ್ಮ ಆಮೇಲಿನ ವಿಷಯ. ಅಲ್ಲಿಯವರೆಗೆ ಇವರೆಲ್ಲ ಕಾವಿಯುಟ್ಟ ಪುಢಾರಿ ಮಾತ್ರ ಎನಿಸಿಕೊಳ್ಳುತ್ತಾರೆ. ಹಾಗಾಗಿ ಇವರು ಈಗ ಕೇವಲ ಅರೆಜೀವವೇ ಆಗಿ ಹೋಗಿರುವ ಮೀಸಲಾತಿ ಕಾರ್ಯಕ್ರಮವನ್ನು ಸದ್ಯಕ್ಕೆ ಅದು ಇರುವಂತೆಯೇ ಪುನರುಜ್ಜೀವನಗೊಳಿಸಲು ಹೋರಾಡುವುದೆಂದರೆ ಅದು ಸದ್ಯದ ದುಷ್ಟ ಮತ್ತು ಭ್ರಷ್ಟ ವ್ಯವಸ್ಥೆಯನ್ನು ಪೋಷಿಸಿ ಅದರಲ್ಲಿ ಪಾಲುದಾರರಾದಂತೆಯೇ ಸರಿ.

ಬಹುಶಃ ನಮ್ಮ ಸಮಾಜಕ್ಕೆ ತಕ್ಕ 'ಗುರು'ಗಳನ್ನೇ ನಾವು ಪಡೆಯುತ್ತೇವೆ. ಈ ಸಂಬಂಧವಾಗಿಯೇ ಮತದಾರ ಸಮೂಹದ ಅವನತಿಯನ್ನು ನಾವು ಚರ್ಚಿಸಬೇಕಿದೆ. ದೊಡ್ಡ ಚುನಾವಣೆ-ಉಪಚುನಾವಣೆಗಳ ಮಾತು ಇರಲಿ, ಅವನ್ನು ಬಹುಪಾಲು ಹೊರಗಿನವರು ನಿಯಂತ್ರಿಸುತ್ತಾರೆ. ಆದರೆ ಮೊನ್ನೆಯ ಗ್ರಾಮ ಪಂಚಾಯ್ತಿ ಚುನಾವಣೆಗಳು ನಡೆದ ರೀತಿ ನೋಡಿದರೆ ಗಾಬರಿಯಾಗುತ್ತದೆ. ಒಂದು ಮತ ಒಂದರಿಂದ ಎರಡೂವರೆ ಸಾವಿರ ರೂಪಾಯಿಗಳ ಬೆಲೆಗೆ ಮಾರಾಟವಾದ ಈ ಚುನಾವಣೆಗಳಲ್ಲಿ ಕೆಲವು ಸ್ಥಾನಗಳು 'ಅವಿರೋಧ' ವಾಗಿ ಕೋಟಿ ಕೋಟಿ ರೂಪಾಯಿಗಳಿಗೆ ಹರಾಜಾದ ರೀತಿ ನಮ್ಮ ಪ್ರಜಾಪ್ರಭುತ್ವ ತನ್ನ ಅವನತಿಯ ಕೊನೆಯ ಘಟ್ಟವನ್ನು ಮುಟ್ಟಿರುವ ಸೂಚನೆ ನೀಡುತ್ತದೆ. ಪ್ರಜಾಪ್ರಭುತ್ವದ ಬುಡವನ್ನು ಭದ್ರಪಡಿಸುವ ನಮ್ಮ ಪ್ರಯತ್ನಗಳೆಲ್ಲ ಅವು ಗೆದ್ದಲು ಹಿಡಿಯುವಲ್ಲಿಯೇ ಪರ್ಯವಸಾನವಾಗುತ್ತಿರುವುದೇತಕ್ಕೆ ಎಂದು ನಾವಿಂದು ಗಂಭೀರವಾಗಿ ಯೋಚಿಸಬೇಕಿದೆ. ಗ್ರಾಮೀಣ ಬಡತನ, ನಿರುದ್ಯೋಗ ಸಮಸ್ಯೆಗಳಿಗೆ ಒಂದು ಮಟ್ಟಿಗಿನ ಅಪೂರ್ವ ಪರಿಹಾರವೆಂದು ನಾವು ಸೈದ್ಧಾಂತಿಕವಾಗಿ ಪ್ರತಿಪಾದಿಸಿ ಸುಖಿಸುತ್ತಿರುವ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೋಟ್ಯಾಂತರ ರೂಪಾಯಿಗಳ ಅನುದಾನವೇ ಈ ಹರಾಜುಗಳಿಗೆ ಕಾರಣವಾಗಿದೆ ಎಂದರೆ ಏನು ಮಾಡುವುದು. ನಾವು ನಮ್ಮ ಪ್ರಜಾಪ್ರಭುತ್ವದ ಕಳಸಗಳಂತಿರುವ ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗಗಳ ಅವನತಿಯ ಬಗ್ಗೆ ಚಿಂತಿಸುತ್ತಿದ್ದೇವೆ. ಆದರೆ ಅಡಿಪಾಯವೇ ಗೆದ್ದಲು ಹಿಡಿದಿರುವಾಗ ಇದರ ರಿಪೇರಿ ಎಲ್ಲಿಂದ ಆರಂಭವಾಗಬೇಕು? ಮೇಲಿನಿಂದ ಇಳಿದು ಬಂದಿರುವ ಈ ಅವನತಿ ಈ ದೇಶವನ್ನು ಗಾಂಧಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನೂ ಅಪ್ರಸ್ತುತಗೊಳಿಸಿರುವಂತಿದೆ.

ಹಾಗೆ ನೋಡಿದರೆ ಜಗತ್ತಿನಾದ್ಯಂತವೇ ಈ ಪ್ರಜಾಪ್ರಭುತ್ವ ಆಡಳಿತ ಪದ್ಧತಿಯೇ ತನ್ನೆಲ್ಲ ಕ್ರಿಯಾಶೀಲತೆಯನ್ನು ಖಾಲಿ ಮಾಡಿಕೊಂಡು ಕುಸಿಯುತ್ತಿರುವ ಸೂಚನೆಗಳು ಕಂಡು ಬರುತ್ತಿವೆ. ಮೊನ್ನೆ ಪ್ರಜಾಪ್ರಭುತ್ವದ ಆದರ್ಶ ಮಾದರಿಯಂತಿರುವ ಅಮೇರಿಕಾದ ಪ್ರಜಾಪ್ರಭುತ್ವದ ಗುಡಿ ಎನಿಸಿರುವ 'ಕ್ಯಾಪಿಟಲ್ ಹಿಲ್'ನಲ್ಲಿ ಅಲ್ಲಿನ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋತ ಅಭ್ಯರ್ಥಿ ಡೊನಾಲ್ಡ್ ಟ್ರಂಪ್‌ನ ಪ್ರಚೋದನೆಗೊಳಗಾಗಿ ಆತನ ಬೆಂಬಲಿಗರಿಂದ ನಡೆದ ಹಿಂಸಾತ್ಮಕ ದಾಳಿ ಮತ್ತು ದಾಂಧಲೆಗಳು ಇದಕ್ಕೆ ಸಾಕ್ಷಿಯಂತಿವೆ. ಆದರೂ ಅಲ್ಲಿ ಪರಿಸ್ಥಿತಿ ಪೂರಾ ಹದಗೆಟ್ಟಂತಿಲ್ಲ ಎಂಬುದು ಈಗ ಅಧಿಕಾರ ವಹಿಸಿಕೊಂಡಿರುವ ಡೆಮೋಕ್ರಾಟಿಕ್ ಪಕ್ಷದ ಜೋ ಬೈಡನ್ ಟ್ರಂಪ್‌ನ ಹುಚ್ಚು ಆಡಳಿತದ ಹಲವು-ವಿಶ್ವಘಾತುಕ ನಿರ್ಧಾರಗಳನ್ನು ಹಿಂತೆಗೆದುಕೊಂಡಿರುವುದು ಮತ್ತು ನಾಗರಿಕ ಹಕ್ಕುಗಳ ದಿಟ್ಟ ವಕ್ತಾರಿಕೆಯನ್ನು ವಹಿಸಿ ಕೊಂಡಿರುವುದು ಒಂಚೂರಾದರೂ ಆಸೆ ಹುಟ್ಟಿಸುವಂತಿದೆ. ಅದೇನೇ ಇರಲಿ, ಪ್ರಜಾಪ್ರಭುತ್ವ ವ್ಯವಸ್ಥೆಗಳು ಚುನಾವಣೆಗಳ ಮೂಲಕವೇ ಸರ್ವಾಧಿಕಾರಗಳಾಗಿ ಮಾರ್ಪಾಡಾಗುತ್ತಿರುವ ಹಲವು ಉದಾಹರಣೆಗಳಿರುವ ಇಂದಿನ ಪರಿಸ್ಥಿತಿಯಲ್ಲಿ ಸದ್ಯದ ಪ್ರಜಾಪ್ರಭುತ್ವದ ಮಾದರಿಯ ಬಗ್ಗೆಯೇ ಪುನರಾಲೋಚಿಸುವ ಅಗತ್ಯವಿದೆ ಎನ್ನಿಸದಿರದು.

ಈ ಎಲ್ಲ ನಾಜೂಕಿನ ಪರಿಸ್ಥಿತಿಯಲ್ಲಿ ನಮ್ಮಲ್ಲಿ ಬಹು ನಿರೀಕ್ಷೆ ಹುಟ್ಟಿಸಿದ್ದ ದೆಹಲಿಯ ರೈತ ಪ್ರತಿಭಟನೆ, ಅದರ ನಾಯಕತ್ವ ತನ್ನ ಅತಿ ವಿಶ್ವಾಸದ ಉನ್ಮಾದದಲ್ಲಿ (ಹೊರಗಿನ ತಂಟೆಕೋರ ರೈತಗುಂಪೊಂದು ದೆಹಲಿ ನಗರ ಮತ್ತು ಕೆಂಪು ಕೋಟೆ ಪ್ರವೇಶಿಸಿ ದಾಂಧಲೆ ನಡಸಬಹುದಾದ) ಒಳಸಂಚನ್ನು ಕಾಣಲಾಗದ ಕುರುಡಿಗೆ ಒಳಗಾಗಿ ಕೈಗೊಂಡ ತನ್ನ ನಿರ್ವಹಣಾ ಶಕ್ತಿಯನ್ನು ಮೀರಿದ ನಿರ್ಧಾರದಿಂದಾಗಿ ಆಘಾತಕ್ಕೊಳಗಾಗಿದೆ. ಹೋರಾಟವನ್ನು ಕೃಷಿ ಕಾಯ್ದೆಗಳ ವಿರುದ್ಧವಾಗಿ ಆರಂಭಿಸಲಾಗಿತ್ತಾದರೂ ಅದನ್ನು ಇಲ್ಲಿನ ಬದುಕಿನ ಮೂಲ ಮಾದರಿಗೆ ಆಧಾರವಾಗಿರುವ ಕೃಷಿ ಸಂಸ್ಕೃತಿಯನ್ನೇ ನಾಶ ಮಾಡಿ ಅದನ್ನು ಒಂದು ಜಾಗತಿಕ ಲಾಭೋದ್ಯಮದ ಭಾಗವಾಗಿ ಮಾಡಿರುವ ಬಂಡವಾಳಶಾಹಿ ಹುನ್ನಾರವನ್ನಾಗಿ ಗ್ರಹಿಸಿ ವಿಸ್ತರಿಸದಿದ್ದುದೇ ಇದರ ನಾಯಕತ್ವದ ಕುರುಡಿಗೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಆದರೆ ಎಲ್ಲ ಆಸೆ ಕೈಬಿಡಬೇಕಿಲ್ಲ. ೭೦ ದಿನಗಳ ಕಾಲದ, ಮತ್ತು ೭೦ ಜನ ರೈತರ ಬಲಿದಾನ ಕಂಡ ಶಾಂತಿಯುತ ಮತ್ತು ಶಿಸ್ತುಬದ್ಧ ಚಳುವಳಿಯ ಆಂತರಿಕ ಶಕ್ತಿಯ ಬಲವೇನೂ ಎಲ್ಲೂ ಕಳೆದುಹೋಗುವುದಿಲ್ಲ.

ಈ ಮಧ್ಯೆ ನಮ್ಮ-ನಿಮ್ಮ ಪತ್ರಿಕೆ ಹತ್ತನೇ ವರ್ಷಕ್ಕೆ ಕಾಲಿಟ್ಟಿದೆ. ಈ ಸಂದರ್ಭದಲ್ಲಿ ಶುಭಾಶಯ ಕೋರಿರುವ ಎಲ್ಲರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

–ಸಂಪಾದಕ

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಜನವರಿ ಸಂಚಿಕೆ ಅತ್ಯುತ್ತಮ ಗುಣಮಟ್ಟದ ಲೇಖನಗಳಿಂದ ಕೂಡಿದ ಒಂದು ಅದ್ಭುತ ಸಂಚಿಕೆ. ನಿಮಗೆ ಅಭಿನಂದನೆಗಳು,

**–ಪ್ರೊ. ಜಿ.ಕೆ. ಗೋವಿಂದರಾವ್,** ಬೆಂಗಳೂರು

ಈ ತಿಂಗಳ ಸಂಪಾದಕೀಯ ನಿಮ್ಮ ಅತ್ಯುತ್ತಮ ಬರಹಗಳಲ್ಲಿ ಒಂದು.

**–ಓ.ಎಲ್. ನಾಗಭೂಷಣಸ್ವಾಮಿ,** ಮೈಸೂರು

ಅಬ್ಬಬ್ಬಾ ಎಷ್ಟು ಅದ್ಭುತ ನಿಮ್ಮ ಸಂಪಾದಕೀಯ! ಏನು ಮೊನಚು, ಎಷ್ಟು ತೀಕ್ಷ್ಣ, ಹೊಸ ಅರಿವು!! Superb ಸರ್. ಹಾಗೇನೇ ಕೊನೆಯ ಪುಟದಲ್ಲಿ ರಮಣ ಮಹರ್ಷಿಗಳ ಸಂದೇಶ ಎಷ್ಟು ಸುಂದರ.

**–ಜಯವಂತ ಕಾಮತ್,** ಬೆಂಗಳೂರು

ಜನವರಿ ಸಂಚಿಕೆ ಓದಿದೆ. ಸಂಪಾದಕರ ಟಿಪ್ಪಣಿ ಅರ್ಥಪೂರ್ಣವಾಗಿದೆ. ಏನಾದರೂ ಮಾಡಿ ಯಾವುದಾದರೂ ಅಡ್ಡದಾರಿ ಹಿಡಿದು ಅಧಿಕಾರ ಪಡೆಯುವುದೇ ಪರಮಗುರಿ ಎಂದು ನಂಬಿರುವ ಮಂದಿಗೆ ನೀವು ಬರೆದಿರುವ ವಾಸ್ತವ ಅರ್ಥವಾಗುವುದಿಲ್ಲ.

**–ಡಾ.ಕೆ ಎಸ್ ಗಂಗಾಧರ,** ಶಿವಮೊಗ್ಗ

ಜನವರಿ ಸಂಪಾದಕೀಯದಲ್ಲಿ ಕಾಂಗ್ರೆಸ್ ಪಕ್ಷದ ದುಃಸ್ಥಿತಿಯ ಬಗ್ಗೆ ವಿಷಾದದಿಂದ ಬರೆದಿರುವ ನಿಮ್ಮ ಮಾತುಗಳನ್ನು ನಿಜಗೊಳಿಸುವಂತೆ ನಮ್ಮ ಶಿಕಾರಿಪುರದಲ್ಲಿನ ಇತ್ತೀಚಿನ ಪುರಸಭಾ ಚುನಾವಣೆಗಳಲ್ಲಿ ಜನ ಅಧಿಕಾರದ ಚುಕ್ಕಾಣಿ ಹಿಡಿಯುವಷ್ಟು ಸ್ಥಾನಗಳನ್ನು ನೀಡಿದರೂ, ಆ ಪಕ್ಷದ ಕೆಲವರು ಮಾರಾಟವಾಗಿ ಬಿಜೆಪಿ ಅಧಿಕಾರಕ್ಕೇರಲು ಕಾರಣರಾಗಿದ್ದಾರೆ. ಖಂಡಿತ ಇದೊಂದು ಪಕ್ಷವಲ್ಲ. ಮಾರುಕಟ್ಟೆ ಸರಕು.

**–ಎಂ. ರಾಜಶೇಖರ ಶಿಕಾರಿಪುರ,** ಉಡುಪಿ

'ಭಂಗಗೊಳ್ಳುತ್ತಿರುವ ಒಕ್ಕೂಟ ರಾಷ್ಟ್ರ ತತ್ವ'ಎಂಬ ಎ. ನಾರಾಯಣ ಅವರ ಲೇಖನ ರಾಷ್ಟ್ರೀಯತೆ ಕುರಿತಂತೆ ಇತ್ತೀಚೆಗೆ ಚಲಾವಣೆಗೆ ತರುತ್ತಿರುವ ಹೊಸ ಸಂಕಥನಗಳ ಹಿನ್ನೆಲೆಯಲ್ಲಿ ಹಲವು ಗಂಭೀರ ಪ್ರಶ್ನೆಗಳನ್ನು ಎತ್ತುತ್ತದೆ. ಸ್ಥಳೀಯವಾದ ಮತ್ತು ಪ್ರಾದೇಶಿಕವಾದ ಎಲ್ಲವನ್ನೂ ರಾಷ್ಟ್ರದ ಐಕ್ಯತೆಯ ಹೆಸರಿನಲ್ಲಿ ದಮನ ಮಾಡುವ ಪ್ರಯತ್ನಗಳು ಹೆಚ್ಚುತ್ತಿರುವುದು ನಿಜವಾಗಿಯೂ ಆತಂಕದ ವಿಷಯ. ಈ ಬಗ್ಗೆ ಇಂದು ವ್ಯಾಪಕ ಚರ್ಚೆಯಾಗಬೇಕಿದೆ, ಸ್ಥಳೀಯ ಭಾಷೆ, ಸಂಸ್ಕೃತಿಗಳ ಸಂರಕ್ಷಣೆಯೇ ರಾಷ್ಟ್ರದ ಐಕ್ಯತೆಯ ನಿಜವಾದ ಪ್ರಯತ್ನಗಳು ಎಂಬ ಅರಿವನ್ನು ಜನರಲ್ಲಿ ಮನದಟ್ಟು ಮಾಡಬೇಕಿದೆ,

ಸಮಕಾಲೀನ ಮಹತ್ವದ ಇಂಗ್ಲಿಷ್ ಪುಸ್ತಕಗಳನ್ನೂ ಪರಿಚಯಿಸುವ ನಿಮ್ಮ ಪ್ರಯತ್ನ ಪತ್ರಿಕೆಗೊಂದು ಹೊಸ ಆಯಾಮ, ಮೌಲಿಕತೆ ನೀಡಿದೆ. ಧರ್ಮವಿಚಾರ ಪುಟದಲ್ಲಿನ 'ವಿವೇಕಾನಂದವಾಣಿ'ಯಡಿ ಪ್ರಕಟವಾಗಿರುವ ಆಯ್ದ ಭಾಗಗಳಲ್ಲಿ ಕಂಡು ಬರುವ ಧರ್ಮ ವಿಮರ್ಶೆ ವಿವೇಕಾನಂದರ ತೀಕ್ಷ್ಣಮತಿಗೆ ಉದಾಹರಣೆಗಳಂತಿವೆ.

**–ಆರ್. ತಿಪ್ಪೇಸ್ವಾಮಿ,** ತಿಪಟೂರು

ಜನವರಿ ಸಂಚಿಕೆಯಲ್ಲಿನ ಬೇಂದ್ರೆ ನೆನಪು ಹಂಪನಾ ಅವರ ವಿಶಿಷ್ಟ ಛಾಪಿನೊಂದಿಗೆ ಮೂಡಿಬಂದಿದೆ. ಬಸ್ಸಿನಲ್ಲಿ ಬೇಂದ್ರೆಯವರು ಬಂದು ನವ ವಧೂವರರ ಮಧ್ಯೆ ಕೂತ ಸಂಗತಿ ಇಡೀ ಬರಹಕ್ಕೆ ಕಿರೀಟವಿಟ್ಟಂತಿದ್ದು ಬೇಂದ್ರೆಯವರ ರಸಿಕತೆಯನ್ನು ಆಪ್ತವಾಗಿ ಹಿಡಿದಿಡುತ್ತದೆ. ಇನ್ನು ಜಿ. ಬ್ರಹ್ಮಪ್ಪನವರನ್ನು ಕುರಿತ ';ಕನ್ನಡದ ಬ್ರಹ್ಮ ಪುರಾಣ'ದ ಪ್ರಸಂಗಗಳಂತೂ ನನ್ನನ್ನು ನಗೆಗಡಲಿನಲ್ಲಿ ತೇಲಿಸಿ, ಅವನ್ನು ನಾನು ನನ್ನ ಗೆಳೆಯರೊಂದಿಗೆ ಹಂಚಿಕೊಳ್ಳುತ್ತಾ ಖುಷಿಪಡುತ್ತಿದ್ದೇನೆ. ಆ ಹಳೆಯ ಕಾಲ ಎಷ್ಟು ಆಹ್ಲಾದಕರವಾಗಿತ್ತು!

ರಾಜ್‌ಕುಮಾರ್ ಬಗ್ಗೆ ನೀವು ಬರೆದ ಟಿಪ್ಪಣಿಯಲ್ಲಿ ಮಾತುಗಳನ್ನು ಗಮನಿಸಬೇಕಾದವರು ಗಮನಿಸಿದರೆ ಒಳ್ಳೆಯದು.

**–ಡಾ.ಎಂ.ಸಿ. ನಾಗರಾಜಮೂರ್ತಿ,** ಮೈಸೂರು

ಕನ್ನಡ ಬ್ರಹ್ಮಲೋಕದ ಹಾಸ್ಯಪ್ರಸಂಗಗಳನ್ನು ಓದಿ ನಕ್ಕೂ ನಕ್ಕೂ ಸಾಕಾಯಿತು. 'ಹೊಸ ಮನುಷ್ಯ;'ನೂ ನಗಲಾರಂಭಿಸಿರುವುದು ಸಂತೋಷದ ಸುದ್ದಿ.

**–ಕೆ, ರಾಜೇಶ್ವರಿ,** ತುಮಕೂರು

ಜನವರಿ ತಿಂಗಳ ಸಂಚಿಕೆಯಲ್ಲಿ ಫ್ರಾನ್ಸ್‌ನ ಅಧ್ಯಕ್ಷ ಇಮ್ಯಾನುಯಲ್ ಮೆಕ್ರಾನ್ ಅವರು ಮುಂದಿಟ್ಟ ಸೆಕ್ಯುಲರಿಸಂನ ಹೊಸ ಸಂಕಥನವನ್ನು ಚರ್ಚಿಸುವ ಟಿ.ಅವಿನಾಶ್ ಅವರಲೇಖನವು ನಾಲ್ಕು ಮುಖ್ಯ ಪ್ರಶ್ನೆಗಳನ್ನು ಕೇಳುತ್ತದೆ. ಅವುಗಳಲ್ಲಿ ಮೂರು ಮುಸ್ಲಿಂ ಮೂಲಭೂತವಾದಕ್ಕೆ ಸಂಬಂಧಿಸಿದ್ದು, ಮಿಕ್ಕೊಂದು ಪ್ರಶ್ನೆ ಭಾರತೀಯ ಪರಿಸರದಲ್ಲಿ ಸೆಕ್ಯುಲರಿಸಂನ ಮರುವ್ಯಾಖ್ಯಾನಕ್ಕೆ ಸಂಬಂಧಿಸಿದ್ದಾಗಿದೆ.

ಮುಸ್ಲಿಂ ಮೂಲಭೂತವಾದವನ್ನು ವಿಶ್ಲೇಷಿಸುತ್ತ, 'ಸಣ್ಣ ಪುಟ್ಟ ವಿದ್ಯಮಾನಗಳಿಗೂ ಸಹ ಬರ್ಬರ ಹಿಂಸಾತ್ಮಕ ಧಾರ್ಮಿಕ ನೆಲೆಯ ಪ್ರತಿಕ್ರಿಯೆಗಳಿಗೆ ಇರುವ ಸೆಲೆ ಯಾವುದು'

(೧೧ನೇ ಪುಟಕ್ಕೆ

## ಹತ್ತನೇ ವರ್ಷಕ್ಕೆ ಶುಭಾಶಯಗಳು

ದಶಕದ ಹೊಸ್ತಿನಲ್ಲಿರುವ 'ಹೊಸ ಮನುಷ್ಯ' ಮಾಧ್ಯಮಗಳ ಸಾಮಾಜಿಕ ಹೊಣೆ ಮತ್ತು ನೈತಿಕ ಪ್ರಜ್ಞೆಗೆ ಒಂದು ಜೀವಂತ ನಿದರ್ಶನ. ಸತ್ಯ ಎಷ್ಟೇ ಕಹಿಯಾದರೂ ಹೇಳಬಲ್ಲ ನಿಷ್ಠುರ ಧೋರಣೆ, ಸಾಮಾಜಿಕ ನ್ಯಾಯ ಪರ ನಿಲುವು, ಹತ್ತು ಹಲವು ವಿಚಾರಗಳನ್ನು ಕುರಿತ ವೈವಿಧ್ಯಮಯ ಚರ್ಚೆ, ವಿಶ್ಲೇಷಣೆಗಳು, ಈ ಎಲ್ಲದರ ಸಮ್ಮಿಳನವಾಗಿರುವ 'ಹೊಸ ಮನುಷ್ಯ' 'ಯಾವತ್ತೂ ಆತ್ಮೀಯ ಮತ್ತು ಸ್ವಾಗತಾರ್ಹ. ಶುಭ ಹಾರೈಕೆಗಳು.

**–ಪ್ರೊ.ಹೆಚ್.ಎಸ್. ಈಶ್ವರ,** ಬೆಂಗಳೂರು

ಅರ್ಧ ಶತಮಾನದ ಹಿಂದೆ ನಮ್ಮ ಮನೆಗೆ ಪ್ರಖರ ರಾಷ್ಟ್ರವಾದಿಯೊಬ್ಬರು ಸಂಪಾದಿಸುತ್ತಿದ್ದ ಪುಟ್ಟ ಪಾಕ್ಷಿಕವೊಂದು ಬರುತ್ತಿತ್ತು. ಮಿನೂ ಮಸಾನಿ, ಅಶೋಕ ಮೆಹ್ತಾ, ಮುಲ್ಕ್‌ರಾಜ್ ಆನಂದ್, ರಫೀಕ್ ಅಹ್ಮದ್ ಕಿದ್ವಾಯಿರಂತಹ ಮೇಧಾವಿ ಲೇಖಕರು ಅದಕ್ಕೆ ಬರೆಯುತ್ತಿದ್ದರು. ಅದರ ಭಾಷೆ, ಅರವಿಂದರು, ಗೋಕಾಕರ ಭಾಷೆಯಂತೆಯೇ ಕ್ಲಿಷ್ಟವಾಗಿರುತ್ತಿತ್ತು. ಆದರೆ ಲೇಖಗಳ ಗುಣಮಟ್ಟ ಮಾತ್ರ ಉತ್ಕೃಷ್ಟವಾಗಿರುತ್ತಿತ್ತು. 'ಹೊಸ ಮನುಷ್ಯ: ನೋಡಿದಾಗಲೆಲ್ಲ ಆ ಪತ್ರಿಕೆ ನೆನಪಿಗೆ ಬರುತ್ತದೆ. ನಿಮ್ಮ ಪತ್ರಿಕೆ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸುತ್ತೇನೆ ಮತ್ತು ಯಾರಿಗಾದರೂ ನನಗೆ ಮರೆತು ಹೋಗಿರುವ ಆ ಪತ್ರಿಕೆಯ ಹೆಸರು ನೆನಪಿದ್ದರೆ ತಿಳಿಸಿ ಎಂದು ಕೋರುವೆ,

**–ಪ್ರಕಾಶ ಪರ್ವತೀಕರ್,** ತಿರುಪ್ಪೂರು (ತಮಿಳ್ನಾಡು)

ಈ ದುರಿತ ಕಾಲದಲ್ಲಿ ಹ್ಯಾಂಡ್ ಸ್ಯಾನಿಟೈಸರ್ ನನ್ನ ಬಹಿರಂಗ ಶುದ್ಧಿಗಾಗಿ ಇದ್ದರೆ, 'ಹೊಸ ಮನುಷ್ಯ' ಇರುವುದು ನನ್ನ ಅಂತರಂಗ ಶುದ್ಧಿಗಾಗಿ.

**–ನಿತ್ಯಾನಂದ ಬಿ. ಶೆಟ್ಟಿ,** ತುಮಕೂರು

ಪ್ರವಾಹದ ವಿರುದ್ಧ ಹುರುಪು ಕಳೆದುಕೊಳ್ಳದೆ ಈಜುತ್ತಾ ಸಾಗುತ್ತಿರುವ 'ಹೊಸ ಮನುಷ್ಯ'ನಿಗೆ, ಅದರ ಸಂಪಾದಕರಿಗೆ ಆಸ್ಥೆ ಮತ್ತು ಶ್ರದ್ಧೆಗಳಿಗೆ ದಶಕದ ಹೊಸ್ತಿಲಿನಲ್ಲಿರುವ ಈ ಸಂದರ್ಭದಲ್ಲಿ ಶುಭ ಹಾರೈಕೆಗಳು.

**–ವಿಜಯೇಂದ್ರ ಪಾಟೀಲ,** ಗೋಕಾಕ

ಹೊಸ ಮನುಷ್ಯ ಪತ್ರಿಕೆ ಇರುವುದರಿಂದ ನಮ್ಮಂತಹ ಯುವಕರು ಇನ್ನೂ ಜೀವಂತವಾಗಿ ಬದುಕಿನ ಬಗ್ಗೆ ಭರವಸೆ ಇಟ್ಟುಕೊಂಡು ಬದುಕುತ್ತಿದ್ದೇವೆ.

**–ಸಂಜಯ ಕುಮಾರ್,** ಬೊಕ್ಕೆಪುರ (ಚಾ.ಮರಾಜನಗರ ಜಿ.)

'ಹೊಸ ಮನುಷ್ಯ' ಗಾತ್ರದಲ್ಲಿ ಕಿರಿದಾದರೂ ಹಿರಿದಾದ ಅರಿವನ್ನು ಒಳಗೊಳಿಸಿಕೊಂಡ ವಿಭಿನ್ನವಾದ ಪತ್ರಿಕೆಯಾಗಿದೆ. ತೀಕ್ಷ್ಣವಾದ ಸಂಪಾದಕರ ಟಿಪ್ಪಣಿ, ಮತ್ತು ಸಾಹಿತ್ಯ, ಸಂಸ್ಕೃತಿ, ಸಮಕಾಲೀನ ಘಟನೆಗಳನ್ನು ವಿಭಿನ್ನ ದೃಷ್ಟಿಕೋನದಿಂದ ಮಂಡಿಸುವ ಲೇಖನಗಳನ್ನು ಒಳಗೊಂಡಿರುವ ಈ ಪತ್ರಿಕೆಗೆ ನಮ್ಮ ಶುಭಾಶಯಗಳು.

**–ಸುಧಾಕರ ದೇವಾಡಿಗ,** ಕೋಟೇಶ್ವರ

'ಹೊಸ ಮನುಷ್ಯ' ನಾನು ತುಂಬ ಇಷ್ಟ ಪಟ್ಟು ಓದುವ ಮಾಸಿಕ. ಅದರಲ್ಲೂ ಸಂಪಾದಕರ ಒಳನೋಟಗಳನ್ನು ಹೊಂದಿದ ಕಟು ವಿಮರ್ಶೆಯ ಆದರೆ ಪೂರ್ವಗ್ರಹ ಪೀಡಿತವಲ್ಲದ ಬರಹಗಳನ್ನು ತಪ್ಪದೇ ಓದುತ್ತೇನೆ. ಉಳಿದಂತೆ ವಿವಿಧ ವಿಚಾರ ಮಂಡನೆಯ ವೇದಿಕೆಯಾಗಿ ಪತ್ರಿಕೆ ಚೆನ್ನಾಗಿ ಮೂಡಿ ಬರುತ್ತಿದೆ. ಶುಭ ಹಾರೈಕೆಗಳು.

**–ಸನತ್ ಕುಮಾರ ಬೆಳಗಲಿ,** ಕಲಬುರಗಿ

ಹಿಂದೊಮ್ಮೆ ಓದುಗರೊಬ್ಬರು ಡಿವಿಸ್ಸೆನ್ ಯೂನಿವರ್ಸಿಟಿಯ ಬಗ್ಗೆ ಬರೆದಿದ್ದುದು ಈಗ ನೆನಪಾಗುತ್ತಿದೆ. ಇಂದು ನಮ್ಮ ರಾಜ್ಯದ ಯಾವ ವಿಶ್ವವಿದ್ಯಾನಿಲಯವೂ ತನ್ನ ಮುಖವಾಣಿಯಾಗಿ 'ಹೊಸ ಮನುಷ್ಯ'ದಂತಹ ಉತ್ಕೃಷ್ಟ ಗುಣಮಟ್ಟದ ಪತ್ರಿಕೆಯನ್ನು ಪ್ರಕಟಿಸುತ್ತಿಲ್ಲ ಎಂಬುದು ಸತ್ಯಸ್ಯ ಸತ್ಯ. ಶುಭಾಶಯಗಳು.

**–ಡಾ.ಆರ್. ಎಚ್. ವಿಶ್ವನಾಥ,** ಬೆಂಗಳೂರು

'ಹೊಸ ಮನುಷ್ಯ'ದ ಯಾವುದೇ ಸಂಚಿಕೆಯನ್ನೂ ಯಾವಾಗ ಕೈಗೆತ್ತಿಕೊಂಡರೂ, ಅಮ್ಮ ಕಟ್ಟಿಕೊಡುವ ಬುತ್ತಿಯಂತೆ ಹೊಟ್ಟೆಗೆ ತಂಪಾಗಿ ಏನೋ ಒಂದು ವಿವೇಕದ ಹೊಳಹು 'ಅಹುದು ಅಹುದು' ಎಂದು ಚಿಗುರೊಡೆಯುತ್ತದೆ. ಇದೊಂದು ಸಮಾಜವಾದದ ಅಪ್ಪಟ ಕೈ ದೀವಿಗೆ. ಹಾರ್ದಿಕ ಶುಭಾಶಯಗಳು.

**–ಆರ್. ಜ್ಯೋತಿ,** ಕಾರ್ಕಳ

'ಹೊಸ ಮನುಷ್ಯ' ಬಂದೊಡನೆ ನಾನು ಓದುವ 'ಸಂಪಾದಕರ ಟಿಪ್ಪಣಿಗಳಲ್ಲಿನ ಸತ್ಯದ ನಿರ್ಭೀತ ಮಂಡನೆ ಮತ್ತು ಸುಳ್ಳಿನ ನಿರ್ಭೀತ ಖಂಡನೆ ಬಸವಣ್ಣನವರ 'ದಾಕ್ಷಿಣ್ಯಪರ ನಾನಲ್ಲ' ವಚನ ನೆನಪಿಗೆ ತರುತ್ತದೆ. ಇದು ಹೀಗೇ ಮುಂದುವರೆಯಲಿ. ಶುಭ ಹಾರೈಕೆಗಳು.

**–ಪೌಳಿ ಶಂಕರಾನಂದಪ್ಪ,** ತುಮಕೂರು

ಪತ್ರಿಕೆಯಲ್ಲಿ ಬರುತ್ತಿರುವ ಲೇಖನಗಳು ತುಂಬ ಪ್ರಸ್ತುತವಾಗಿವೆ, ಸಮಾಜವಾದಿ ಧೋರಣೆಗೆ ನಿಷ್ಠೆ ಹೊಂದಿರುವ ಹೊಸ ಲೇಖಕರಿಂದ ಲೇಖನಗಳನ್ನು ಆಹ್ವಾನಿಸಿ ಪ್ರಕಟಿಸಿದರೆ ವಿಚಾರವಂತರ ಹೊಸ ಪಡೆಯೊಂದು ನಿರ್ಮಾಣವಾಗುತ್ತದೆ ಎಂದು ನನ್ನ ಅನಿಸಿಕೆ.

**–ಬಾಬು ಕೃ, ಕುಲಕರ್ಣಿ,** ಬೆಳಗಾವಿ

# ಮೀಸಲಾತಿ: ಒಂದು ಮರುಚಿಂತನೆ



**ರಾಜ್ಯದಲ್ಲಿ ಶಿಕ್ಷಣ ಮತ್ತು ಸರ್ಕಾರಿ/ಸಾರ್ವಜನಿಕ ಉದ್ಯೋಗ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣವನ್ನು ಅವುಗಳ ಜನಸಂಖ್ಯಾನುಸಾರ ಹೆಚ್ಚಿಸುವ ವಿಷಯ ಕುರಿತು ಅಧ್ಯಯನ ಮಾಡಿ ವರದಿ ನೀಡಲು ಈ ಹಿಂದಿನ ರಾಜ್ಯ ಸರ್ಕಾರ ನೇಮಿಸಿದ್ದ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಏಕ ಸದಸ್ಯ ಆಯೋಗ ಹಲವು ಸಾಹಿತಿ/ಚಿಂತಕರಿಗೆ ಅವರ ಅಭಿಪ್ರಾಯ ಕೋರಿ ಪತ್ರ ಬರೆದಿತ್ತು. ಅದಕ್ಕೆ ಉತ್ತರವಾಗಿ ಡಿ.ಎಸ್. ನಾಗಭೂಷಣ ಅವರು ಆಯೋಗಕ್ಕೆ ಬರೆದ ಪತ್ರ ಇದು. ಚಾರಿತ್ರಿಕ ಕಾರಣಗಳಿಂದಾಗಿ ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವ ಅವಕಾಶಗಳನ್ನು ಕಳೆದುಕೊಂಡಿದ್ದ ಸಮುದಾಯಗಳ ಸಬಲೀಕರಣದ ಮೂಲ ಉದ್ದೇಶದಿಂದ ಚಾಲ್ತಿಗೆ ಬಂದ ಮೀಸಲಾತಿ ಎಂಬ ಪರಿಕಲ್ಪನೆ ಇಂದು ದೇಶ ಅಭಿವೃದ್ಧಿ ಹೊಂದಿದಂತೆ ಅದರ ಫಲಗಳಲ್ಲಿನ ಹೆಚ್ಚಿನ ಪಾಲಿಗಾಗಿ ವ್ಯಕ್ತವಾಗುತ್ತಿರುವ ಹಪಾಹಪಿಯಾಗಿ ಮಾರ್ಪಾಡಾಗುತ್ತಿರುವ ಇಂದಿನ ದಿನಗಳಲ್ಲಿ ಪ್ರತಿ ಸಮುದಾಯವೂ ತನ್ನನ್ನು ಹೆಚ್ಚು ಹಿಂದುಳಿದಿರುವಂತೆ ಪ್ರತಿಬಿಂಬಿಸಿಕೊಳ್ಳಲು ನಡೆಸಿರುವ ವಿವಿಧ ರೀತಿಯ ಪ್ರಯತ್ನ ಮೀಸಲಾತಿ ಪರಿಕಲ್ಪನೆಯನ್ನು ಬುಡಮೇಲುಗೊಳಿಸುತ್ತಿರುವಂತೆ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಈ ಪತ್ರ ಕುತೂಹಲ ಹುಟ್ಟಿಸಬಹುದು. ಪ್ರತಿಕ್ರಿಯೆಗಳಿಗೆ ಸ್ವಾಗತ.ವಿದೆ.-ಸಂ.**

ದಿನಾಂಕ: ೪, ಡಿಸೆಂಬರ್, ೨೦೧೯

ಇವರಿಗೆ:
ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಆಯೋಗ
ನೃಪತುಂಗ ರಸ್ತೆ, **ಬೆಂಗಳೂರು**

ಮಾನ್ಯರೇ,

ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಶಿಕ್ಷಣ ಮತ್ತು ಸಾರ್ವಜನಿಕ ಉದ್ಯೋಗ ವಲಯಗಳಲ್ಲಿ ಅವುಗಳಿಗಿರುವ ಮೀಸಲಾತಿ ಪ್ರಮಾಣವನ್ನು ಅವುಗಳ ಸದ್ಯದ ಜನಸಂಖ್ಯಾ ಪ್ರಮಾಣಕ್ಕನುಸಾರವಾಗಿ ಹೆಚ್ಚಿಸುವ ವಿಷಯದ ಬಗ್ಗೆ ನನ್ನಿಂದ ಅಹವಾಲು ಪಡೆಯಲು ತಾವು ಬರೆದಿರುವ ೧೯-೧೧-೨೦೧೯ರ ಪತ್ರಕ್ಕಾಗಿ ವಂದನೆಗಳು.

ಈ ವಿಷಯಕ್ಕೆ ಸಂಬಂಧಿಸಿದ ನನ್ನ ಅಹವಾಲೆಂಬುದು ಏನಿಲ್ಲವಾದರೂ ಒಂದು ಅಭಿಪ್ರಾಯವನ್ನು ತಿಳಿಸಲು ಈ ಅವಕಾಶವನ್ನು ಬಳಸಿಕೊಳ್ಳಲು ಇಚ್ಛಿಸುತ್ತೇನೆ.

ನಮ್ಮ ಸಮಾಜದಲ್ಲಿನ ಪಾರಂಪರಿಕ ಜಾತಿ ಪದ್ಧತಿ ಮತ್ತು ಅದರ ಅತಿ ದುಷ್ಪಫಲವಾದ ಅಸ್ಪೃಶ್ಯತೆಯ ಕಾರಣದಿಂದಾಗಿ ಉಂಟಾಗಿದ್ದ ಅವಕಾಶಗಳ ತೀವ್ರ ಅಸಮಾನತೆ ಹಾಗೂ ಸಾಮಾಜಿಕ ಮತ್ತು ಆರ್ಥಿಕ ಅಸಮತೋಲನಗಳ ನಿವಾರಣೆಗಾಗಿ ಜಾತಿ ಆಧಾರಿತ/ಸಾಮಾಜಿಕ ಆಧಾರಗಳ ಮೀಸಲಾತಿ ಆರಂಭವಾಯಿತಷ್ಟೆ. ಹಾಗೇ, ನಮ್ಮ ಸಂವಿಧಾನದಲ್ಲಿ ಇದಕ್ಕಾಗಿ ಅಂದಿನ ಪರಿಸ್ಥಿತಿಯ ಅಂದಾಜಿನ ಪ್ರಕಾರ ಅವುಗಳ ಜನಸಂಖ್ಯಾಧಾರಿತ ಪ್ರಮಾಣನುಸಾರವಾಗಿ ಆ ಮೀಸಲಾತಿಯನ್ನು ನಿಗದಿಪಡಿಸಲಾತಷ್ಟೆ. ಆದರೆ ಈ ಸಾಂವಿಧಾನಿಕ ಮೀಸಲಾತಿಯ ವ್ಯವಸ್ಥೆ ಆರಂಭವಾದ ಸುಮಾರು ಏಳು ದಶಕಗಳ ನಂತರವೂ ಇದೇ ಚಿಂತನೆಯ ಆಧಾರದ ಮೇಲೆ ಮೀಸಲಾತಿಯ ಬಗ್ಗೆ ಆಲೋಚಿಸುವುದು ಎಂದರೆ ಈ ಏಳು ದಶಕಗಳಲ್ಲಿ ಅದರ ಉದ್ದೇಶ ಸಾಧನೆಗಳಿಗೆ ಸಂಬಂಧಪಟ್ಟಂತೆ ಆಗಿರುವ ಬೆಳವಣಿಗೆಗಳನ್ನು ಅಲಕ್ಷಿಸುವುದೆಂದೇ ಅರ್ಥ.

ಮೀಸಲಾತಿಯ ಘನ ಉದ್ದೇಶ ಪ್ರತಿ ಪ್ರಜೆ ಮತ್ತು ಸಮುದಾಯ ಉನ್ನತಿ/ಪ್ರಗತಿಯ ಸಮಾನ ಅವಕಾಶಗಳನ್ನು ಪಡೆಯುವಂತಹ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದಾಗಿತ್ತೇ ಹೊರತು ಅವರಿಗೆ ಅವರ ಜನಸಂಖ್ಯಾ ಪ್ರಮಾಣಾನುಸಾರ ಶಿಕ್ಷಣ ಮತ್ತು ಉದ್ಯೋಗಗಳ ಅಧಿಕೃತ ಗ್ಯಾರಂಟಿ ನೀಡುವುದಾಗಿರಲಿಲ್ಲ. ಆರಂಭದಲ್ಲಿ ಈ ಸಮುದಾಯಗಳ ಜನಸಂಖ್ಯೆಯನ್ನು ಮೀಸಲಾತಿ ಪ್ರಮಾಣ ನಿಗದಿ ಮಾಡಲು ಆಧಾರವನ್ನಾಗಿ ಮಾಡಿಕೊಂಡಿದ್ದರೆ ಅದು ಈ ಸಮುದಾಯಗಳು ಅಂದು ಎದುರಿಸುತ್ತಿದ್ದ ಅವಕಾಶಗಳ ತೀವ್ರ ಅಸಮಾನತೆಯನ್ನು ಸಮಾಜದ ಮುಖಕ್ಕೆ ಕನ್ನಡಿಯಂತೆ ಹಿಡಿಯಲು ರೂಪಿಸಿಕೊಂಡ ಒಂದು ಅಳತೆಯ ಹೆಗ್ಗುರುತಾಗಿತ್ತು. ಆದರೆ ಇಂದು ಪರಿಸ್ಥಿತಿ ಹಾಗಿಲ್ಲ. ಪರಿಶಿಷ್ಟ ಜಾತಿ-ಪಂಗಡಗಳ ಜನ ನಿರೀಕ್ಷಿಸಿದ ಪ್ರಮಾಣದಲ್ಲಿ ಸಮಾಜದ ಮುಖ್ಯ ಪ್ರವಾಹದೊಂದಿಗೆ ಲೀನವಾಗಿಲ್ಲದಿದ್ದರೂ, ಅವರೂ ಪ್ರಗತಿಶೀಲ ಸಮಾಜದ ಒಂದು ಗಣನೀಯ ಭಾಗವಂತೂ ಆಗಿರುವರು. ಹಾಗಾಗಿಯೇ ಇಂದೂ ಮೀಸಲಾತಿ ಅಗತ್ಯವಿದೆಯಾದರೂ, ಅದಕ್ಕಾಗಿ ಮಾಡಿಕೊಂಡ ಮೂಲ ಪರಿಗಣನೆಗಳು ಹಾಗೇ ಮುಂದುವರೆಯಬಾರದು ಎಂದು ಹೇಳಬೇಕಾಗುತ್ತದೆ.

ಮೀಸಲಾತಿಯ ಉದ್ದೇಶ ಶ್ರೇಣೀಕೃತ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಆಚರಣೆಗಳ ಕಾರಣದಿಂದಾಗಿ ಅಗತ್ಯವಾಯಿತು ಎಂದು ಹೇಳುವುದಾದರೆ, ಅದರ ಉದ್ದೇಶ ಅವನ್ನು ತೊಡೆದುಹಾಕುವುದೂ ಆಗಬೇಕಲ್ಲವೆ? ಆದರೆ ಈ ಉದ್ದೇಶ ಈಡೇರಿದೆಯೇ ಎಂದು ಕೇಳಿಕೊಂಡಾಗ ಗೊಂದಲದ ಉತ್ತರಗಳು ಸಿಗುತ್ತವೆ. ಜಾತಿ ಆಧಾರಿತ ಮೀಸಲಾತಿಯನ್ನು ಯಾವುದೇ ನೆಲೆಯಲ್ಲಿಯೂ ಪರಿಷ್ಕರಿಸದೆ ಮುಂದುವರೆಸಲಾಗುತ್ತಿರುವ ಸರ್ಕಾರದ ಕ್ರಮ ಮತ್ತು ಈಗ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣವನ್ನು ಅವುಗಳ ಈಗಿನ ಜನಸಂಖ್ಯಾ ಪ್ರಮಾಣಾನುಸಾರವಾಗಿ ಹೆಚ್ಚಿಸಬೇಕೆಂಬ ಅವುಗಳ ಬೇಡಿಕೆ ಹಾಗೂ ಈ ಬೇಡಿಕೆಯನ್ನು ಪರಿಶೀಲಿಸಲು ಸರ್ಕಾರ ಆಯೋಗವೊಂದನ್ನು ನೇಮಿಸಿರುವ ನಿರ್ಧಾರ ಕಳೆದ ಏಳು ದಶಕಗಳ ಮೀಸಲಾತಿ ಕಾರ್ಯಕ್ರಮ ನಮ್ಮ ಜಾತಿ ವ್ಯವಸ್ಥೆಯ ಶ್ರೇಣೀಕರಣ ಮತ್ತು ಅಸ್ಪೃಶ್ಯತೆಯ ಸಮಸ್ಯೆಯನ್ನು ಒಂದಿಷ್ಟೂ ಪರಿಹರಿಸಿಲ್ಲವೇನೋ ಎಂಬ ಸಂದೇಹವನ್ನುಂಟು ಮಾಡುವಂತಿದೆ. ಆದರೆ ಬರಿಗಣ್ಣಿಗೆ ಕಾಣುವಂತೆಯೇ, ಈ ಸಮಸ್ಯೆಗಳು ಪೂರ್ಣ ಪರಿಹಾರವಾಗಿದೆ ಎಂದು ಯಾರೂ ಹೇಳಲಾರರಾದರೂ, ಪರಿಸ್ಥಿತಿ ಗಣನೀಯವಾಗಿ ಬದಲಾಗಿದೆ ಎಂದು ಯಾವುದೇ ಹಿಂಜರಿಕೆ ಇಲ್ಲದೆ ಹೇಳುವಷ್ಟು ಚಿತ್ರ ಸ್ಪಷ್ಟವಾಗಿದೆ. ಇದು ಕೇವಲ ಅಭಿಪ್ರಾಯ ಅಥವಾ ದೃಷ್ಟಿ-ಕೋನ ಮಾತ್ರವಾಗಿರದೆ, ಅಂಕಿ ಅಂಶಗಳ ಮೂಲಕ ಸಾಬೀತು ಮಾಡಬಹುದಾದಷ್ಟು ದತ್ತಾಂಶಗಳು ಲಭ್ಯವಿವೆ. ಹಾಗಾಗಿ ಮೀಸಲಾತಿಯ ಆರಂಭದ ಆಧಾರಗಳನ್ನೇ ಈಗಲೂ ನಂಬಿ ಅವನ್ನು ಮುಂದುವರೆಸಬೇಕೆಂಬ ಬೇಡಿಕೆ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತಾ ಆಚರಣೆಗೆ ನೀಡುವ ಪರೋಕ್ಷ ಮಾನ್ಯತೆಯೇ ಆದೀತು. ಇಂದೂ ಹಲವೆಡೆ ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆ ಆಚರಣೆಯ ಹಲವು ಕ್ರೂರ ರೂಪಗಳು ಕಂಡುಬರುತ್ತಿದ್ದರೆ ಅದಕ್ಕೆ ಒಂದು ಮುಖ್ಯ ಕಾರಣ ಮೀಸಲಾತಿಯ ಈ ಸ್ಥಗಿತ ರೂಪದ ವಿಕ್ಷಿಪ್ತ ಪರಿಣಾಮಗಳೇ ಆಗಿದ್ದರೆ ಆಶ್ಚರ್ಯವಿಲ್ಲ. ನಮ್ಮ ಸಮಾಜದ ಪ್ರತಿ ಸಮುದಾಯವೂ ಮೀಸಲಾತಿಯೂ ಸೇರಿದಂತೆ ಸರ್ಕಾರದ ಹಲವು ಸೌಲಭ್ಯಗಳನ್ನು ಬಳಸಿಕೊಂಡು ತಾನು ಲೌಕಿಕವಾಗಿ ಹೆಚ್ಚು ಮುಂದುವರೆದಷ್ಟೂ

ಸರ್ಕಾರದ ಲೆಕ್ಕದಲ್ಲಿ ಹಿಂದುಳಿದಂತೆ ತೋರಿಸಲು ಹಾತೊರೆಯುವಂತಹ ಒಡಕು ಮನಸ್ಸಿಗೆ ತುತ್ತಾಗಿರಲೂ ಇದೇ ಕಾರಣವಾಗಿರುವಂತಿದೆ. ಪ್ರತಿ ಸಮುದಾಯವೂ ಒಂದಲ್ಲ ಒಂದು ಮಟ್ಟದಲ್ಲಿ ಆರ್ಥಿಕ ಅವಕಾಶಗಳ ಮೂಲಕ ಮೇಲೇರಿವೆಯಾದರೂ, ಹಳೆಯ ಶ್ರೇಣೀಕರಣ ಮತ್ತು ಅದರ ಆಚರಣಾ ರೂಪಗಳ ಮಾನ್ಯತೆ ಮುಂದುವರೆದೇ ಇದೆಯಲ್ಲದೆ ಪ್ರತಿ ಸಮುದಾಯದ ಸಬಲೀಕರಣವು ಈ ಶ್ರೇಣೀಕರಣದ ವ್ಯಕ್ತ ರೂಪಗಳನ್ನು ಬಿರುಸುಗೊಳಿಸಿದೆ. 'ಕೆಳಜಾತಿ'ಗಳಲ್ಲೂ ಕಂಡು ಬರುತ್ತಿರುವ ಮರ್ಯಾದಾ ಹತ್ಯೆಗಳು, ಜಾತಿ-ಉಪಜಾತಿಗಳ ಪರಸ್ಪರ ತೀವ್ರ ಪ್ರತ್ಯೇಕೀಕರಣ ಮತ್ತು ಈ ಪ್ರಕ್ರಿಯೆಯ ಸಾಧನವಾಗಿ ಮಠಗಳ ಸ್ಥಾಪನೆ ಹಾಗೂ ಅವುಗಳ ವರ್ತನೆ-ವ್ಯವವಹಾರಗಳ ಪರಿ ಇದರ ಸೂಚನೆಗಳೇ ಆಗಿವೆ. ಹಾಗಾಗಿ ಮೀಸಲಾತಿಯ ಫಲವಾದ ಉನ್ನತೀಕರಣವು ಸಮುದಾಯಗಳ ಹೊರ ರೂಪಗಳನ್ನು ಬದಲಿಸಿರಬಹುದೇ ಹೊರತು ಒಳರೂಪಗಳನ್ನಲ್ಲ; ಹಾಗೇ, ಸಮಾಜದಲ್ಲಿ ಒಟ್ಟಾರೆ ಅವಕಾಶಗಳ ಅಸಮಾನತೆಗಳನ್ನು ಸೃಷ್ಟಿಸಿದ ಅವುಗಳ ಮನೋರಂಗವನ್ನಲ್ಲ. ಮೀಸಲಾತಿ (ಭೌತಿಕ) ಉನ್ನತೀಕರಣದ ಹಪಾಹಪಿಯನ್ನು ಸೃಷ್ಟಿಸಿತೇ ಹೊರತು, ಸಹಬಾಳ್ವೆ-ಸೋದರತೆಗಳನ್ನಲ್ಲ. ಪರಿಶಿಷ್ಟ ಜಾತಿ-ಪಂಗಡಗಳೂ ಈ ಮಾತಿಗೆ ಹೊರತಾಗಿಲ್ಲ.

ಇಂತಹ ಆಘಾತಕರ ಪರಿಸ್ಥಿತಿ ಉಂಟಾಗಲು ಮುಖ್ಯ ಕಾರಣ ಅವಕಾಶಗಳ ಅಸಮಾನತೆ ಮತ್ತು ಅದರ ಹಿಂದಿನ ಸಾಮಾಜಿಕ ದಮನ ಮತ್ತು ಅವಮಾನಗಳ ಹಿಂದಿರುವ ಜಾತಿವ್ಯವಸ್ಥೆಯ ಎಲ್ಲ ಸಾರ್ವಜನಿಕ ರೂಪಗಳನ್ನು (ಅಸ್ಪೃಶ್ಯತಾ ಆಚರಣೆಯಂತೆಯೇ) ಅಮಾನ್ಯ ಮಾಡುವ, ಕನಿಷ್ಠ ಅವುಗಳ ವಿರುದ್ಧ ಜನಜಾಗೃತಿ ಉಂಟು ಮಾಡುವ ಒಂದು ಸಾಂಸ್ಕೃತಿಕ ಚಳುವಳಿಯ ಅಗತ್ಯವನ್ನು ಮನಗಾಣದಿದ್ದುದು. ಹಾಗಾಗಿ ಮೀಸಲಾತಿ ಎಂಬುದು ಸಾಮಾಜಿಕ ಸಮಾನತೆಯ ಒಂದು ಹೊರ ಪ್ರಯತ್ನ ಮಾತ್ರವಾಗಿದ್ದು ಅದು ತನ್ನ ಉದ್ದೇಶದಲ್ಲಿ ಭಾಗಶಃ ಮಾತ್ರ ಸಫಲವಾಗಿದೆ. ಈ ಅರೆಬರೆ ಸಫಲತೆ ಅರೆಬರೆ ವಿಫಲತೆಯೂ ಆಗಿ ಈ ಸಮುದಾಯಗಳಿಗೆ ಕಾಣತೊಡಗಿರಬಹುದಾಗಿದ್ದು, ಅದೇ ಮೀಸಲಾತಿ ಕಾರ್ಯಕ್ರಮವನ್ನು ಅದರ ಮೂಲ ರೂಪದಲ್ಲಿ ಸಾರಾಸಗಟಾಗಿ ಮುಂದುವರೆಸಬೇಕೆಂಬ ಬೇಡಿಕೆ ಹುಟ್ಟಲು, ಹೆಚ್ಚಲು ಕಾರಣವಾಗಿದೆ.

ಈ ಸಂಬಂಧವಾಗಿ ನಾನು ತಿಳಿಸಬಯಸುವ ಇನ್ನೂ ಮೂರು ಮುಖ್ಯ ಸಂಗತಿಗಳೆಂದರೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯಾ ಪ್ರಮಾಣ ಎಷ್ಟು ಹೆಚ್ಚಾಗಿದೆಯೋ ನನಗೆ ತಿಳಿಯದು. ಅದು ಇತರ ಸಮುದಾಯಗಳ ಏರಿಕೆಯ [ಪ್ರಮಾಣಕ್ಕಿಂತ ಹೆಚ್ಚಾಗಿದ್ದರೆ ಅದಕ್ಕೆ ಒಂದು ಕಾರಣ, ಸಾಮಾಜಿಕ ನ್ಯಾಯ ಎಂಬುದು

**(೧೧ನೇ ಪುಟಕ್ಕೆ**

ವಿಶೇಷ ಲೇಖನ-೧

# ಮಾಧ್ಯಮಗಳ ಉದ್ಯಮೀಕರಣ ಮತ್ತು ಪ್ರಜಾಪ್ರಭುತ್ವ

-ದಿನೇಶ್ ಅಮೀನ್‌ಮಟ್ಟು

ಸಾಮಾಜಿಕ ಸಂಬಂಧ ಮತ್ತು ಸಾಮಾಜಿಕ ಕಾರ್ಯ ಕ್ಷೇತ್ರಗಳ ಜನಮಾಧ್ಯಮವಾಗಿ ಹುಟ್ಟಿದ ಸಮೂಹ ಮಾಧ್ಯಮಗಳು ಇಂದು ಹೆಚ್ಚಿದ ಸಾಕ್ಷರತೆ ಮತ್ತು ತಂತ್ರಜ್ಞಾನವನ್ನು ಬಳಸಿಕೊಂಡು ಬೃಹತ್ ಲಾಭೋದ್ಯಮಗಳಾಗಿ ಬೆಳೆದು ನಿಂತು ತನ್ನ ಆರಂಭಿಕ ಸದುದ್ದೇಶಗಳನ್ನೇ ನಾಶ ಮಾಡುತ್ತಾ, ಅಂತಿಮವಾಗಿ ಪ್ರಜಾಪ್ರಭುತ್ವದ ರೀತಿ ನೀತಿಗಳಿಗೇ ಮಾರಕವಾಗುತ್ತಿರುವ ಪರಿಯನ್ನು ವಿವವರಿಸುವ ಲೇಖನವಿದು-ಸಂ.




**ಭಾ**ರತದ ಮಾಧ್ಯಮೋದ್ಯಮ 'ಎಚ್ಚಿಸಲು ಕಾಯುತ್ತಿರುವ ನಿದ್ದೆಯಲ್ಲಿರುವ ಹುಲಿ' ಎಂದು ಮಾಧ್ಯಮ ದೊರೆ ರೂಪರ್ಟ್ ಮುರ್ಡೋಕನ ಮಗ ಜೇಮ್ಸ್ ಮುರ್ಡೋಕ ಹತ್ತು ವರ್ಷಗಳ ಹಿಂದೆ ಮುಂಬೈನ ಉದ್ಯಮಿಗಳ ಸಮ್ಮೇಳನದಲ್ಲಿ ಹೇಳಿದ್ದ. 'ಜಗತ್ತಿನ ಮಾಧ್ಯಮಗಳಿಗೆ ವಯಸ್ಸಾಗುತ್ತಿದೆ, ಅವುಗಳು ಬಳಲಿಹೋಗಿವೆ. ಅಭಿವೃದ್ಧಿಯ ಪಥದಲ್ಲಿ ದಾಪುಗಾಲಿಟ್ಟು ಸಾಗುತ್ತಿರುವ ಈ ದೇಶದ ಸಾಮರ್ಥ್ಯವನ್ನು ಇಲ್ಲಿನ ಮಾಧ್ಯಮಗಳಿಗೆ ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ಭಾರತದಲ್ಲಿ ಲಭ್ಯ ಇರುವ ಮಾನವ ಸಂಪನ್ಮೂಲ ಮತ್ತು ಮಾರುಕಟ್ಟೆಯ ಸಾಧ್ಯತೆಯನ್ನು ಬಳಸಿಕೊಂಡರೆ ಒಂದು ಲಕ್ಷ ಕೋಟಿ ರೂಪಾಯಿ ವ್ಯವಹಾರದ ಮಾಧ್ಯಮ ಉದ್ಯಮ ಎಂಟರಿಂದ ಹತ್ತು ಪಟ್ಟು ಹೆಚ್ಚಾಗುವುದರಲ್ಲಿ ಅನುಮಾನ ಇಲ್ಲ" ಎಂದು ಆತ ಭವಿಷ್ಯ ನುಡಿದಿದ್ದ.

ಆತನ ಮಾತುಗಳಲ್ಲಿ ಉತ್ಪ್ರೇಕ್ಷೆ ಇರಲಿಲ್ಲ. ಜಗತ್ತಿನ ಯಾವುದೇ ದೇಶಗಳಿಗಿಂತ ಹೆಚ್ಚಿನ ಪತ್ರಿಕೆಗಳು ಮತ್ತು ಟಿವಿ ಚಾನೆಲ್‌ಗಳು ಭಾರತದಲ್ಲಿವೆ, ಇಲ್ಲಿ ಒಂದು ಲಕ್ಷಕ್ಕೂ ಹೆಚ್ಚು ನೋಂದಾಯಿತ ಪತ್ರಿಕೆಗಳಿವೆ, ಇವುಗಳ ಪ್ರತಿದಿನದ ಅಂದಾಜು ಪ್ರಸಾರ ಸಂಖ್ಯೆ ೨೪ ಕೋಟಿ ದಾಟಿದೆ, ೮೦೦ಕ್ಕೂ ಹೆಚ್ಚು ನ್ಯೂಸ್ ಚಾನೆಲ್‌ಗಳಿವೆ. ಜಗತ್ತಿನ ೧೦೦ ದೊಡ್ಡ ಪತ್ರಿಕೆಗಳಲ್ಲಿ ೨೦ ಭಾರತದಲ್ಲಿವೆ. ಪತ್ರಿಕೆಗಳ ಪ್ರಸಾರ ಸಂಖ್ಯೆಯಲ್ಲಿ ಹತ್ತು ವರ್ಷಗಳ ಹಿಂದೆಯೇ ಚೀನಾವನ್ನು ನಾವು ಹಿಂದಕ್ಕೆ ಹಾಕಿದ್ದೇವೆ. ಕೊರೊನಾ ಹಾವಳಿಗಿಂತ ಮೊದಲು ಭಾರತದ ಮುದ್ರಣ ಮಾಧ್ಯಮದ ಬೆಳವಣಿಗೆಯ ದರ ಶೇಕಡಾ ಎಂಟರ ಆಜುಬಾಜಿನಲ್ಲಿತ್ತು.

ಮಾಧ್ಯಮಗಳ ಇತಿಹಾಸ ಇತ್ತೀಚಿನದ್ದು. ಇದು ೧೬೦೫ರಲ್ಲಿ ಜಾನ್ ಕಾರ್ಲೋಸ್ ಪ್ರಾರಂಭಿಸಿದ "ದಿ ರಿಲೇಷನ್" ಎನ್ನುವ ವಾರಪತ್ರಿಕೆಯಿಂದ ಶುರುವಾಗಿರುವುದು. ಆ ಕಾಲದಿಂದ ಮಾಧ್ಯಮ ಕ್ಷೇತ್ರ ಬಹುದೂರ ಸಾಗಿ ಬಂದಿದೆ. ಹೆಚ್ಚುತ್ತಿರುವ ಸಾಕ್ಷರತೆ, ಮುದ್ರಣ ತಂತ್ರಜ್ಞಾನದ ಹೊಸ ಅವಿಷ್ಕಾರಗಳು, ಅಭಿವೃದ್ಧಿ ಹೊಂದುತ್ತಿರುವ ಸಂಪರ್ಕ ಮಾಧ್ಯಮಗಳು, ಬೆರಳ ತುದಿಯಲ್ಲಿ ಮಾಹಿತಿ ನೀಡುವ ಗೂಗಲ್‌ನಂತಹ ಸರ್ಚ್ ಎಂಜಿನ್‌ಗಳು, ಮಾಹಿತಿ ಹಕ್ಕಿನ ಕಾಯ್ದೆ, ಸಿವಿಲ್ ಸೊಸೈಟಿ ಚಳುವಳಿಗಳು, ಸ್ಟಿಂಗ್ ಆಪರೇಷನ್ ಸಾಧನಗಳು -ಇವೆಲ್ಲವುಗಳಿಂದಾಗಿ ತ್ವರಿತಗತಿಯಲ್ಲಿ ಬದಲಾವಣೆಗೊಳಗಾಗುತ್ತಿರುವ ಮಾಧ್ಯಮ ಕ್ಷೇತ್ರ ತನ್ನನ್ನು ತಾನೇ ಗುರುತುಹಿಡಿಯಲಾಗಷ್ಟು ಬದಲಾಗಿದೆ,ಬದಲಾಗುತ್ತಲೇ ಇದೆ.

ನ್ಯೂಸ್ ಚಾನೆಲ್‌ಗಳ ಪ್ರವೇಶದ ನಂತರ ಬದಲಾದ ರೂಪ-ವಿನ್ಯಾಸ-ಪ್ರಸಾರ ತಂತ್ರಗಳಿಂದಾಗಿ ಅಲ್ಲಿಯವರೆಗೆ ಅಪರಿಚಿತವಾಗಿದ್ದ ಅನಕ್ಷರಸ್ಥ ಲೋಕವನ್ನು ಕೂಡಾ ಮಾಧ್ಯಮ ತಲುಪಲು ಸಾಧ್ಯವಾಗಿದೆ. ಇದರ ಜೊತೆಗೆ ಬೃಹತ್ ಪ್ರಮಾಣದಲ್ಲಿ ನವಮಾಧ್ಯಮದ ಪ್ರವೇಶವಾಗಿವೆ. ಫೇಸ್ ಬುಕ್, ವಾಟ್ಸಪ್, ಟ್ವಿಟರ್, ಇನ್‌ಸ್ಟಾಗ್ರಾಂ ಹೀಗೆ ಅಂಗೈನಲ್ಲಿಯೇ ಸಾಲುಸಾಲು ಸುದ್ದಿ ಸಾಧನಗಳು. ಈ ಎಲ್ಲ ಬೆಳವಣಿಗೆಗಳಿಂದಾಗಿ ಸುದ್ದಿಯ ಬಳಕೆದಾರರಾದ ಓದುಗ-ವೀಕ್ಷಕ-ಕೇಳುಗರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಇವೆಲ್ಲವೂ ಮಾಧ್ಯಮ ಕ್ಷೇತ್ರ ಹೆಮ್ಮೆ ಪಡುವಂತಹ ಬೆಳವಣಿಗೆಗಳು

ಅಭಿವ್ಯಕ್ತಿ ಸ್ವಾತಂತ್ರ್ಯದ ಕೊರಳುಗಳಾದ ಮಾಧ್ಯಮ ಕ್ಷೇತ್ರ ಈ ರೀತಿ ಆಳ-ಅಗಲಕ್ಕೆ ಹರಡಿಕೊಂಡು ಬೆಳೆಯುತ್ತಿರುವ ಬಗ್ಗೆ ಸುದ್ದಿಯ ಬಳಕೆದಾರರಾದ ಓದುಗ-ವೀಕ್ಷಕ-ಕೇಳುಗರು ಹೆಮ್ಮೆ ಪಡಬೇಕಾಗಿತ್ತು. ಮಾಧ್ಯಮಲೋಕದ ವಿಸ್ತರಣೆಯಿಂದಾಗಿ ಪ್ರಜಾಪ್ರಭುತ್ವ ಇನ್ನಷ್ಟು ಬಲಿಷ್ಠವಾಯಿತು. ಶತಮಾನಗಳಿಂದ ಬಾಯಿ ಕಳೆದುಕೊಂಡಿದ್ದವರು ದನಿ ಪಡೆಯುವಂತಾಯಿತು ಎಂದೆಲ್ಲ ನಾವು ಬೀಗಬೇಕಾಗಿತ್ತಲ್ಲವೇ? ಆ ಸ್ಥಿತಿ ಈಗ ಇದೆಯೇ ಎನ್ನುವುದು ಪ್ರಶ್ನೆ.

ಈ ಅಭಿಪ್ರಾಯ ಸಂಗ್ರಹಿಸಲು ಬಹಳ ಕಷ್ಟಪಡಬೇಕಾಗಿಲ್ಲ ಬೀದಿಯಲ್ಲಿ ನಿಂತು ದಾರಿಹೋಕರನ್ನು ಪತ್ರಿಕೆಗಳು, ಚಾನೆಲ್‌ಗಳು ಮತ್ತು ಪತ್ರಕರ್ತರ ಬಗ್ಗೆ ಅಭಿಪ್ರಾಯ ಕೇಳಿದರೆ ಸಾಕು. ಛೀ, ಥೂ ಅನ್ನುವವರೇ ಹೆಚ್ಚು ಸಿಗಬಹುದು. ಅವರಿಗೆ ಪತ್ರಿಕೆಗಳ ಬಗ್ಗೆ ಕಡಿಮೆ ದೂರುಗಳಿರಬಹುದು, ನ್ಯೂಸ್ ಚಾನೆಲ್‌ಗಳ ಬಗ್ಗೆ ಹೆಚ್ಚಿರಬಹುದು, ಇಷ್ಟೇ ವ್ಯತ್ಯಾಸ. ಕಾರಣ ಸ್ಪಷ್ಟ: ಎಲ್ಲವನ್ನೂ ಪಡೆದುಕೊಂಡು ಬೆಳೆದ ಮಾಧ್ಯಮ ಕ್ಷೇತ್ರ ವಿಶ್ವಾಸಾರ್ಹತೆ ಎಂಬ ಆತ್ಮವನ್ನು ಕಳೆದುಕೊಂಡಿದೆ. ಒಂದು ಕಾಲದಲ್ಲಿ ಮಾಧ್ಯಮಗಳಲ್ಲಿ ಪ್ರಸಾರ-ಪ್ರಕಟವಾಗುವ ಸುದ್ದಿ-ವಿಶ್ಲೇಷಣೆಗಳನ್ನು ಜನ ಕಣ್ಣುಮುಚ್ಚಿ ಒಪ್ಪಿಕೊಳ್ಳುತ್ತಿದ್ದರು, ಅದರ ಮೂಲಕವೇ ತಮ್ಮ ಅಭಿಪ್ರಾಯವನ್ನು ರೂಪಿಸಿಕೊಳ್ಳುತ್ತಿದ್ದರು. ಕಾರ್ಯಾಂಗ,ಶಾಸಕಾಂಗ,ನ್ಯಾಯಾಂಗಗಳು ಕೂಡಾ ತಮ್ಮನ್ನು ರಕ್ಷಿಸಲು ವಿಫಲವಾದಾಗ ಜನ ಆಸೆ ಕಂಗಳಿಂದ ನ್ಯಾಯಕ್ಕಾಗಿ, ರಕ್ಷಣೆಗಾಗಿ ಮಾಧ್ಯಮಗಳ ಕಡೆ ನೋಡುತ್ತಿದ್ದರು. ಇಂದಿನ ಪರಿಸ್ಥಿತಿ ಹಾಗಿದೆಯೇ?

ಯಾಕೆ ಹೀಗಾಯಿತು? ಸಾಕ್ಷರತೆ, ಆರ್ಥಿಕ ಪ್ರಗತಿ ಮತ್ತು ತಂತ್ರಜ್ಞಾನಗಳ ಕಾರಣದಿಂದಾಗಿ ಸರಿಯಾದ ದಾರಿಯಲ್ಲಿಯೇ ಬೆಳೆಯುತ್ತಿದ್ದ ಮಾಧ್ಯಮ ಕ್ಷೇತ್ರ ದಾರಿ ತಪ್ಪಿದ್ದು ಮೂರು ದಶಕಗಳ ಹಿಂದೆ ಆರ್ಥಿಕ ಉದಾರೀಕರಣದ ಯುಗದ ಪ್ರಾರಂಭದೊಂದಿಗೆ. ಇದರೊಂದಿಗೆ ಮಾಧ್ಯಮ ಸಂಸ್ಥೆಗಳ ಹೊರ ಆವರಣ ಮಾತ್ರವಲ್ಲ ಒಳಹೂರಣಗಳೂ ಗುರುತು ಹಿಡಿಯಲಾರದಷ್ಟು ಬದಲಾಗತೊಡಗಿದವು. ಆಗಲೇ ಮಾಧ್ಯಮ ಕಚೇರಿಯೊಳಗಿನ ಸಂಪಾದಕೀಯ ಮತ್ತು ಜಾಹೀರಾತು ವಿಭಾಗಗಳ ನಡುವಿನ ಲಕ್ಷ್ಮಣರೇಖೆ ತೆಳ್ಳಗಾಗುತ್ತಾ ಹೋಗಿದ್ದು. ಸಂಪಾದಕರ ಎದುರಿಗೆ ಕೈಕಟ್ಟಿ ನಿಲ್ಲುತ್ತಿದ್ದ ಜಾಹೀರಾತು ಎಕ್ಸಿಕ್ಯೂಟಿವ್‌ಗಳು, ಸಂಪಾದಕರನ್ನು ತಮ್ಮ ತಾಳಕ್ಕೆ ತಕ್ಕ ಕುಣಿಸಲು ಶುರುಮಾಡಿದ್ದು ಈ ಅವಧಿಯಲ್ಲಿ.

ಸುದ್ದಿಗಿಂತ ಜಾಹೀರಾತು, ಓದುಗನಿಗಿಂತ ಬಳಕೆದಾರ ಮುಖ್ಯ ಎನ್ನುವ ಯಶಸ್ಸಿನ ಹೊಸ ಮಂತ್ರದ ಪಠಣೆ ಕೂಡಾ ಕೇಳಿ ಬರತೊಡಗಿದ್ದು ಅದೇ ಕಾಲದಲ್ಲಿ. ಹೀಗೆ ಮಾಧ್ಯಮ ವೃತ್ತಿ ಮಾಧ್ಯಮೋದ್ಯಮ ಎಂಬ ಹೊಸ ಅವತಾರವೆತ್ತಿ ಬೆಳೆಯತೊಡಗಿತು.

ಈ ಪ್ರಕ್ರಿಯೆ ಮೊದಲು ಪ್ರಾರಂಭವಾಗಿದ್ದು ಅಮೆರಿಕಾದಲ್ಲಿ. ೧೮೮೩ರಲ್ಲಿ ಅಲ್ಲಿನ 'ದಿ ನ್ಯೂಯಾರ್ಕ್ ಸನ್' ಪತ್ರಿಕೆಯ ಮಾಲೀಕನ ತಲೆಯಲ್ಲಿ ಒಂದು ದುಷ್ಟ ಆಲೋಚನೆ ಹುಟ್ಟಿಕೊಂಡಿತು. ಪತ್ರಿಕೆಯ ಮುಖಬೆಲೆಯನ್ನು ಕಡಿಮೆ ಮಾಡಿ ಅದರಿಂದಾಗುವ ನಷ್ಟವನ್ನು ಸರಿದೂಗಿಸಲು ಜಾಹೀರಾತುಗಳನ್ನು ಪ್ರಕಟಿಸಲು ಆತ ನಿರ್ಧರಿಸಿದ. ಅಲ್ಲಿಯವರೆಗೆ ಪತ್ರಿಕೆಗಳಲ್ಲಿ ಜಾಹೀರಾತು ಇರಲಿಲ್ಲ. ಆ ಕಾಲದಲ್ಲಿ ಅಮೆರಿಕದ ಅತ್ಯಂತ ಹೆಚ್ಚು ಪ್ರಸಾರದ ಪತ್ರಿಕೆ ೪,೫೦೦ ಪ್ರತಿಗಳಷ್ಟೇ ಮಾರಾಟವಾಗುತ್ತಿತ್ತು. ಜಾಹೀರಾತಿನ ದುಡ್ಡಿನ ಬಲದಿಂದ ಮುಖಬೆಲೆಯನ್ನು ಕಡಿಮೆಗೊಳಿಸಿದ 'ದಿ ನ್ಯೂಯರ್ಕ್ ಸನ್ ' ಪತ್ರಿಕೆಯ ಪ್ರಸಾರ ಸಂಖ್ಯೆ ಒಂದೆರಡು ತಿಂಗಳುಗಳ ಅವಧಿಯಲ್ಲಿ ೧೫,೦೦೦ ದಾಟಿತು. ಇದರ ನಂತರದ ದಿನಗಳಲ್ಲಿ ಜಾಹೀರಾತು ಪ್ರಕಟಣೆ ಪತ್ರಿಕೆಗಳ ಅವಿಭಾಜ್ಯ ಭಾಗವಾಗಿ ಹೋಯಿತು.

ಪ್ರಯೋಗದ ರೂಪದಲ್ಲಿ ಮಾಧ್ಯಮ ಕ್ಷೇತ್ರ ಪ್ರವೇಶ ಮಾಡಿದ ಜಾಹೀರಾತು ಪ್ರಕಟಣೆ ನಂತರದ ದಿನಗಳಲ್ಲಿ ಕಡ್ಡಾಯವಾಗಿ ಪಾಲಿಸಲೇಬೇಕಾದ ನಿಯಮವಾಗಿ ಹೋಯಿತು. ಮಾರುಕಟ್ಟೆಯಲ್ಲಿನ ಪೈಪೋಟಿಯಿಂದಾಗಿ ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಪತ್ರಿಕೆಗಳ ಮುಖಬೆಲೆಯನ್ನು ಹೆಚ್ಚಿಸಲಾಗದ ಮಾಲೀಕರು ಜಾಹೀರಾತುದಾರರನ್ನು ಹೆಚ್ಚು ಹೆಚ್ಚು ಅವಲಂಬಿಸತೊಡಗಿದರು. ಭಾರತದಲ್ಲಿ ೯೦ರ'ದಶಕದ ಪ್ರಾರಂಭದೊಂದಿಗೆ ತೆರೆದುಕೊಂಡ ಹೊಸ ಆರ್ಥಿಕ ನೀತಿಯಿಂದಾಗಿ ಉದ್ಯಮ ಕ್ಷೇತ್ರದಿಂದ ಹೆಚ್ಚು ಹೆಚ್ಚು ಜಾಹೀರಾತು ಹರಿದು ಬರಲಾರಂಭಿಸಿತು. ಸಹಜವಾಗಿಯೆ ಜಾಹೀರಾತು ನೀಡುವ ಉದ್ಯಮಿಗಳು ಮಾಧ್ಯಮಗಳ ಮೇಲಿನ ಹಿಡಿತವನ್ನು ಬಿಗಿಗೊಳಿಸತೊಡಗಿದರು. ಇದರಿಂದಾಗಿ ಓದುಗರಿಗೆ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಬದ್ಧವಾಗಿರಬೇಕಾದ ಮಾಧ್ಯಮಗಳ ನಿಷ್ಠೆ ಸಡಿಲಗೊಳ್ಳುತ್ತಾ ಹೋಯಿತು. ಇಂತಹ ಕಾಲದಲ್ಲಿಯೇ ದರ ಸಮರ, ಕಾಸಿಗಾಗಿ ಸುದ್ದಿ, ರಾಡಿಯಾ ಟೇಪ್ ಬಯಲುಗೊಳಿಸಿದ ಉದ್ಯಮಿಗಳ ಜೊತೆಗಿನ ದಲ್ಲಾಳಿಗಿರಿಗಳಂತಹ ಅನೈತಿಕ ಚಟುವಟಿಕೆಗಳು ಕಾಣಿಸಿಕೊಂಡಿದ್ದು.

ಉದ್ಯಮದ ಸರಳ ಸೂತ್ರದ ಪ್ರಕಾರ ಮಾಧ್ಯಮೋದ್ಯಮಕ್ಕೆ ಪತ್ರಿಕೆಗಳಿಗೆ ಓದುಗ, ಟಿವಿಚಾನೆಲ್‌ಗಳಿಗೆ ವೀಕ್ಷಕ, ರೇಡಿಯೋಗಳಿಗೆ ಕೇಳುಗ ಬಳಕೆದಾರರಾಗಬೇಕು. ಆದರೆ ಇತರ ಉದ್ಯಮಗಳಂತೆ ಮಾಧ್ಯಮೋದ್ಯಮ ಈ ಓದುಗ, ಕೇಳುಗ, ವೀಕ್ಷಕ ಎಂಬ

ಬಳಕೆದಾರನನ್ನು ನಂಬಿಕೊಂಡಿಲ್ಲ. ಓದುಗ ತಾನು ಕೊಡುವ ಐದು ರೂಪಾಯಿಯಲ್ಲಿ ಪತ್ರಿಕೆ, ವೀಕ್ಷಕ ತಾನು ಕೇಬಲ್‌ನವನಿಗೆ ಕೊಡುವ ೨೦೦-೩೦೦ ರೂಪಾಯಿಗಳಿಂದ ಚಾನೆಲ್, ಕೇಳುಗ ತಾನು ಕೇಳಿ ನಲಿಯುತ್ತಿರುವ ಕಾರಣಕ್ಕೆ ಎಫ್ ಎಂ ರೇಡಿಯೋ ಬದುಕಿವೆ ಮತ್ತು ಲಾಭ ಗಳಿಸುತ್ತಿವೆ ಎಂದು ತಿಳಿದುಕೊಂಡರೆ ಅವರು ಈ ಭೂಮಿಯ ಮೇಲಿನ ಶತಮೂರ್ಖ.

ಪತ್ರಿಕೆಗಳ ಉತ್ಪಾದನಾ ವೆಚ್ಚಕ್ಕೂ ಮುಖಬೆಲೆಗೂ ಏನಾದರೂ ಸಂಬಂಧವಿದೆಯೇ? ವಾರ್ತಾಭಾರತಿಯಂತಹ ಹೆಚ್ಚು ಬಣ್ಣ-ಬಿನ್ನಾಣಗಳಿಲ್ಲದ ಸರಳ ಪತ್ರಿಕೆಯ ಉತ್ಪಾದನಾ ವೆಚ್ಚ ಹತ್ತು ರೂಪಾಯಿ ಎಂದು ಅದರ ಸಂಪಾದಕರು ಬರೆದುಕೊಂಡಿದ್ದರು. ಪ್ರಜಾವಾಣಿ ಪತ್ರಿಕೆಯ ಉತ್ಪಾದನಾ ವೆಚ್ಚ ಅಂದಾಜು ೨೦ ರೂಪಾಯಿ ಇರಬಹುದು. ಇನ್ನು ೨೪ರಿಂದ ೩೦ ಪುಟ ನೀಡುವ ಇಂಗ್ಲೀಷ್ ಪತ್ರಿಕೆಗಳ ಉತ್ಪಾದನಾ ವೆಚ್ಚ ಎಷ್ಟಿರಬಹುದು? ಒಂದು ಪುಟದ ಉತ್ಪಾದನಾ ವೆಚ್ಚ ಕನಿಷ್ಠ ಒಂದು ರೂಪಾಯಿಯಂತೆ ಲೆಕ್ಕ ಹಾಕಿದರೂ ಪತ್ರಿಕೆಗಳ ಮುಖಬೆಲೆ ಎಷ್ಟಿದೆ? ಮತ್ತು ಎಷ್ಟು ಆಗಬೇಕಿತ್ತು ?

ಇದರ ನಡುವೆ ಹುಟ್ಟಿಕೊಂಡದ್ದು 'ದರ ಸಮರ' ಎಂಬ ಇನ್ನೊಂದು ಅನಾರೋಗ್ಯಕಾರಿ ಪೈಪೋಟಿ. ಇದು ಮಾಧ್ಯಮ ಕ್ಷೇತ್ರವನ್ನು ಸಂಪೂರ್ಣವಾಗಿ ಓದುಗರಿಂದ ಕಿತ್ತುಕೊಂಡು ಜಾಹೀರಾತುದಾರರ ಪದತಲದಲ್ಲಿ ಮಲಗಿಸಿಬಿಟ್ಟಿತು. ಇಲ್ಲಿ ಪತ್ರಿಕೆಗಳ ಮಾಲೀಕರು ದುರ್ಬಳಕೆ ಮಾಡಿಕೊಂಡದ್ದು ಓದುಗವರ್ಗದಲ್ಲಿ ಬಹುಸಂಖ್ಯೆಯಲ್ಲಿರುವ ಮಧ್ಯಮ ವರ್ಗದ ಡಿಸ್ಕೌಂಟ್ ಲಾಲಸೆಯನ್ನು. ಕನ್ನಡದಲ್ಲಿ ಈ ಅನೈತಿಕ, ಅನಾರೋಗ್ಯಕಾರಿ ಪತ್ರಿಕೋದ್ಯಮದ ಪಿತಾಮಹ ಬಿಜೆಪಿ ಸಂಸದರಾಗಿದ್ದ ಸಾರಿಗೆ ಉದ್ಯಮಿ ವಿಜಯ್ ಸಂಕೇಶ್ವರ್. ಮೊದಲಬಾರಿ ವಿಜಯ ಕರ್ನಾಟಕ ಪತ್ರಿಕೆಯ ಮುಖಬೆಲೆ ಒಂದು ರೂಪಾಯಿ ಎಂದು ಘೋಷಿಸಿದಾಗ ಉಳಿದ ಪತ್ರಿಕೆಗಳು ನಿರ್ಲಕ್ಷಿಸಿದ್ದವು. ಆದರೆ ಈ ಅಡ್ಡಮಾರ್ಗದ ಮೂಲಕ ತಮ್ಮ ಪತ್ರಿಕೆಯ ಪ್ರಸಾರ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಲು ಅವರು ಯಶಸ್ವಿಯಾಗಿದ್ದರು. ಈ ಪ್ರಯೋಗವನ್ನು ಅವರು ವಿಜಯವಾಣಿ ಪತ್ರಿಕೆ ಪ್ರಾರಂಭಿಸಿದಾಗಲೂ ಮುಂದುವರಿಸಿದರು. ಪ್ರಾರಂಭದಲ್ಲಿ ದರ ಸಮರದ ಕುತಂತ್ರದ ಜೊತೆ ರಾಜಿ ಮಾಡಿಕೊಳ್ಳದ ಪ್ರಜಾವಾಣಿಯಂತಹ ಪತ್ರಿಕೆ ಕೊನೆಗೆ ತಾನೂ ಕೂಡಾ ಮಣಿದು ಇತರರಂತೆ ಮುಖಬೆಲೆಯನ್ನು ಕಡಿಮೆಗೊಳಿಸಬೇಕಾಯಿತು. ಈ ದರ ಸಮರದಿಂದಾಗಿ ಜಿಲ್ಲೆ ಮತ್ತು ತಾಲೂಕು ಮಟ್ಟದ ನೂರಾರು ಸಣ್ಣ ಪತ್ರಿಕೆಗಳು ಪ್ರಕಟಣೆ ನಿಲ್ಲಿಸಬೇಕಾಯಿತು.

ಈ ರೀತಿ ಪೂರ್ಣರೂಪದ ಉದ್ಯಮಿಯಾಗಿ ಬದಲಾದ ಮಾಧ್ಯಮೋದ್ಯಮಿ ಸಹಜವಾಗಿ ಐದು ರೂಪಾಯಿ ಕೊಡುವ ಓದುಗನ ಬದಲಿಗೆ ಹದಿನೈದು ರೂಪಾಯಿಯಷ್ಟು ಜಾಹೀರಾತು ನೀಡುವ ಉದ್ಯಮಿಗೆ ಹೆಚ್ಚು ನಿಷ್ಠನಾಗಿದ್ದರಲ್ಲಿ ಆಶ್ಚರ್ಯವೇನಿಲ್ಲ. ಈ ವಾಣಿಜ್ಯೀಕರಣದ ಸೋಂಕು ಕೇವಲ ಮಾಧ್ಯಮೋದ್ಯಮಿಗಳಿಗೆ ಮಾತ್ರ ಸೀಮಿತವಾಗಿ ಉಳಿಯಲಿಲ್ಲ. ಮಾಧ್ಯಮೋದ್ಯಮಿಗಳು ತಮ್ಮ ಸಂಸ್ಥೆಗಳಲ್ಲಿನ ಪತ್ರಕರ್ತರನ್ನು ತಮ್ಮ ವ್ಯಾಪಾರ ಹಿತಾಸಕ್ತಿಗೆ ಬಳಸಿಕೊಳ್ಳಲು ಪ್ರಾರಂಭಿಸಿದರು. ಈಗ ಬಹುತೇಕ ಪತ್ರಿಕೆಗಳು ಮತ್ತು ನ್ಯೂಸ್ ಚಾನೆಲ್‌ಗಳ ವರದಿಗಾರರು ಅರೆಕಾಲಿಕ ಜಾಹೀರಾತು ಏಜಂಟರಾಗಿ ಕೆಲಸ ಮಾಡಬೇಕಾದ ಪರಿಸ್ಥಿತಿ ಇದೆ. ಇದು ಕೆಳಮಟ್ಟದಲ್ಲಿ ನಡೆಯುತ್ತಿರುವ ಅಡ್ಡಕಸುಬಿ ಕೆಲಸವಾದರೆ ರಾಷ್ಟ್ರೀಯ ಮಟ್ಟದಲ್ಲಿ ತಾರಾ ಪತ್ರಕರ್ತರೆನಿಸಿಕೊಂಡವರು ರಾಜಕಾರಣಿಗಳ ಬಳಿ ಉದ್ಯಮಿಗಳ ಏಜಂಟರಾಗಿ ಕೆಲಸ ಮಾಡತೊಡಗಿದರು. ಇದರ ಫಲವೇ ರಾಡಿಯಾ ಟೇಪ್ ಹಗರಣ.

ಮಾಧ್ಯಮೋದ್ಯಮಿಗಳ ದುಡ್ಡಿನ ಲೋಭ ಇಷ್ಟಕ್ಕೆ ತಣಿಯಲಿಲ್ಲ. ಅದು ಸುದ್ದಿ ಮತ್ತು ಜಾಹೀರಾತಿನ ನಡುವಿನ ಅಂತರವನ್ನೇ ಅಳಿಸಿಹಾಕುವಂತಹ 'ಕಾಸಿಗಾಗಿ ಸುದ್ದಿ' ಎಂಬ ಅನೈತಿಕ ದಾರಿ ತುಳಿಯುವಂತೆ ಮಾಡಿತು. ಇಂಗ್ಲೀಷ್ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಕಾರು ಟಿವಿ, ರೆಫ್ರಿಜರೇಟರ್‌ಗಳನ್ನು ಪರಿಚಯಿಸುವಂತಹ ಸುದ್ದಿಯ ಛದ್ಮವೇಷದ 'ಕಾಸಿಗಾಗಿ ಸುದ್ದಿ' ಲೇಖನಗಳು, ಭಾಷಾ ಪತ್ರಿಕೋದ್ಯಮ ಪ್ರವೇಶಿಸಿದಾಗ ಅಲ್ಲಿಗೆ ಮೊದಲು ಕಾಣಿಸಿಕೊಂಡವರು ರಾಜಕಾರಣಿಗಳು. ಕಳೆದ ಹತ್ತು-ಹದಿನೈದು ವರ್ಷಗಳ ಅವಧಿಯಲ್ಲಿ ನಡೆದ ಚುನಾವಣೆಗಳಲ್ಲಿ ಮಾಧ್ಯಮಗಳು ಕೋಟ್ಯಂತರ ರೂಪಾಯಿ ಆದಾಯವನ್ನು 'ಕಾಸಿಗಾಗಿ ಸುದ್ದಿ' ಮೂಲಕ ಗಳಿಸಿವೆ. ಇದರಿಂದ ಪತ್ರಿಕೆಗಳಲ್ಲಿ ಪ್ರಕಟವಾಗುವ ಮತ್ತು ಚಾನೆಲ್‌ಗಳಲ್ಲಿ ಪ್ರಸಾರವಾಗುತ್ತಿರುವುದು ಸುದ್ದಿಯೋ, ಜಾಹೀರಾತೋ ಎಂಬುದನ್ನು ನಿರ್ಧರಿಸಲಾಗದೆ ಓದುಗರು-ವೀಕ್ಷಕರು ಒದ್ದಾಡುತ್ತಿರುವಾಗಲೇ ಚುನಾವಣೆ ಮುಗಿದು ಫಲಿತಾಂಶ ಬಂದಿರುತ್ತದೆ.

ಭಾರತೀಯ ಪತ್ರಿಕಾ ಮಂಡಳಿ ಇಬ್ಬರು ಹಿರಿಯ ಪತ್ರಕರ್ತರ ಉಪಸಮಿತಿ ರಚಿಸಿ ಕಾಸಿಗಾಗಿ ಸುದ್ದಿ ಬಗ್ಗೆ ಸಮಗ್ರ ತನಿಖೆ ನಡೆಸಿ ವರದಿ ನೀಡಲು ಸೂಚಿಸಿತ್ತು. ಆ ವರದಿಯಲ್ಲಿ ದೇಶದ ಅತ್ಯಧಿಕ ಪ್ರಸಾರದ ಪತ್ರಿಕೆಗಳ ಹೆಸರು ಉಲ್ಲೇಖವಾಗಿದ್ದನ್ನು ಕಂಡು ಹೌಹಾರಿದ ಪತ್ರಿಕಾ ಮಂಡಳಿ ಇಡೀ ವರದಿಯನ್ನು ಹೂತು ಹಾಕಿದೆ.

ಹೌದು, ಮಾಧ್ಯಮಗಳು ಇಂದು ಬದುಕಿರುವುದು ಓದುಗ, ವೀಕ್ಷಕ, ಕೇಳುಗರಿಂದಲ್ಲ, ಅವುಗಳು ಬದುಕಿರುವುದು ಜಾಹೀರಾತುಗಳಿಂದ. ಓದುಗ,ವೀಕ್ಷಕ,ಕೇಳುಗನ ಒಲವಿನ ತುತ್ತು ಉಂಡು ಮಾಧ್ಯಮಗಳು ಬೆಳೆದಿದ್ದರೆ ಅವರೇ ಅದರ ಒಡೆಯರಾಗಬೇಕಿತ್ತು, ವಾಸ್ತವ ಹೀಗಿಲ್ಲ ಎನ್ನುವ ಕಾರಣಕ್ಕಾಗಿಯೇ ಇಂದಿನ ಮಾಧ್ಯಮಗಳಿಗೆ ಸುದ್ದಿಗಿಂತ ಜಾಹೀರಾತು, ಓದುಗ,ವೀಕ್ಷಕ,ಕೇಳುಗನಿಗಿಂತ ಖರೀದಿ ಸಾಮರ್ಥ್ಯ ಇರುವ ಬಳಕೆದಾರ




ಮುಖ್ಯವಾಗಿರುವುದು. ಇದಕ್ಕಾಗಿ ಯಾರನ್ನು ದೂರೋಣ? ಪತ್ರಿಕೆಯ ಮಾಲೀಕರನ್ನೇ? ಇಲ್ಲವೇ ಓದುಗರನ್ನೇ?

ವೃತ್ತಿ ಮತ್ತು ಉದ್ಯಮಗಳೆರಡರ ನೀತಿ ಸಂಹಿತೆಯನ್ನು ಕಾಲಿನಡಿಗೆ ಹಾಕಿ ನಾಲ್ಕು ದಿಕ್ಕುಗಳಿಂದಲೂ ವೀಕ್ಷಕನನ್ನು ಆಕ್ರಮಿಸಿಕೊಂಡಿರುವ ನ್ಯೂಸ್ ಚಾನೆಲ್‌ಗಳ ಬಿಸಿನೆಸ್ ಮಾಡೆಲ್ ಇನ್ನೂ ವಿಚಿತ್ರವಾಗಿದೆ. ಇಲ್ಲಿ ನ್ಯೂಸ್ ಚಾನೆಲ್ ಮಾಲೀಕರಿಗೂ ವೀಕ್ಷಕರಿಗೂ ಸಂಬಂಧವೇ ಇಲ್ಲ, ಇವರಿಬ್ಬರು ಸಂಬಂಧ ಹೊಂದಿರುವುದು ಸ್ಥಳೀಯ ಕೇಬಲ್ ಕಂಪೆನಿಗಳ ಜೊತೆ. ಪತ್ರಿಕೆಗಳ ಓದುಗ ನೀಡುವ ಚಂದಾಹಣ ನೇರವಾಗಿ ಅದರ ಮಾಲೀಕರಿಗೆ ಹೋದರೆ, ಚಾನೆಲ್ ವೀಕ್ಷಕ ನೀಡುವ ಮಾಸಿಕ ಶುಲ್ಕ ಸಂದಾಯವಾಗುವುದು ಕೂಡಾ ಕೇಬಲ್ ಕಂಪೆನಿಗಳಿಗೆ. ಇದರಲ್ಲಿ ಚಾನೆಲ್‌ಗಳಿಗೆ ಯಾವ ಪಾಲು ಇಲ್ಲ. ವೀಕ್ಷಕ ಮತ್ತು ಚಾನೆಲ್ ಮಾಲೀಕರಿಬ್ಬರು ದುಡ್ಡು ಕೊಡುವುದು ಕೇಬಲ್‌ವಾಲಾನಿಗೆ. ಇದು ಸಣ್ಣ ಮೊತ್ತವೇನಲ್ಲ, ಒಂದರಿಂದ ಎರಡು ಕೋಟಿ ರೂಪಾಯಿಯಷ್ಟು. ಚಾನೆಲ್ ಮಾಲೀಕರ ಉತ್ಪಾದನಾ ವೆಚ್ಚದ ದೊಡ್ಡ ಪಾಲು ಈ ರಿಟೇನರ್ ಶುಲ್ಕದ ಹೊರೆ. ಇಷ್ಟೊಂದು ಲಾಭ ಇರುವ ಕಾರಣಕ್ಕೆ ಟಾಟಾನಿಂದ ರಿಲಯನ್ಸ್‌ವರೆಗೆ ಎಲ್ಲರೂ ಈಗ ಕೇಬಲ್ ಉದ್ಯಮಕ್ಕೆ ಇಳಿದಿದ್ದಾರೆ. ಸ್ಥಳೀಯ ಕೇಬಲ್‌ವಾಲಾಗಳು ನಿಧಾನವಾಗಿ ದೊಡ್ಡ ಕೇಬಲ್ ಉದ್ಯಮಿಗಳ ಸಬ್ ಏಜಂಟ್ ರೀತಿ ಕೆಲಸ ಮಾಡುತ್ತಿದ್ದಾರೆ.

ಇವತ್ತಿಗೂ ಪ್ರಧಾನಮಂತ್ರಿ, ಮುಖ್ಯಮಂತ್ರಿಗೂ ಹೆದರದ ನ್ಯೂಸ್ ಚಾನೆಲ್‌ಗಳ ಮಾಲೀಕರು ಸ್ಥಳೀಯ ಕೇಬಲ್‌ನವರ ಮಾತನ್ನು ಮೀರುವುದಿಲ್ಲ. ಈ ವ್ಯಾಪಾರದ ಗುಟ್ಟನ್ನು ಬಹಳ ಬೇಗ ಅರಿತುಕೊಂಡಿರುವ ಜಿಯೋ ಕಂಪೆನಿ ದೇಶಾದ್ಯಂತ ನೆಲದಡಿ ಕೇಬಲ್‌ಗಳನ್ನು ಅಳವಡಿಸತೊಡಗಿದೆ. ಸದ್ಯದಲ್ಲಿಯೇ ಜಿಯೋ ಮಾಲೀಕ ಅಂಬಾನಿ ಇಲ್ಲಿಯೂ ಏಕಸ್ವಾಮ್ಯ ಸಾಧಿಸಿ ಚಾನೆಲ್‌ಗಳನ್ನೆಲ್ಲ ತನ್ನ ವಶಕ್ಕೆ ತೆಗೆದುಕೊಂಡು ಯಾವ ಕಾರ್ಯಕ್ರಮ ಬಿತ್ತರಿಸಬೇಕು, ಬಿತ್ತರಿಸಬಾರದು ಎನ್ನುವುದನ್ನು ನಿರ್ಧರಿಸುವ ದಿನ ದೂರ ಇಲ್ಲ.

ವೃತ್ತಿಯಿಂದ ಉದ್ಯಮವಾಗಿ ಬದಲಾದ ಮಾಧ್ಯಮ ಕ್ಷೇತ್ರ ಈಗ ಅತ್ತ ವೃತ್ತಿಯೂ ಅಲ್ಲದ, ಇತ್ತ ಪೂರ್ಣಪ್ರಮಾಣದ ಉದ್ಯಮವೂ ಅಲ್ಲದ ಮಾಧ್ಯಮ-ಉದ್ಯಮ-ರಾಜಕಾರಣದ ನಡುವಿನ ಅಪವಿತ್ರ ಮೈತ್ರಿಕೂಟದ ಕೈಗಳ ಆಯುಧವಾಗುತ್ತಿದೆ. ಇದ್ದಕ್ಕಿದ್ದಂತೆ ಲಾಭದ ನಿರೀಕ್ಷೆಯಿಲ್ಲದೆ ಮಾಧ್ಯಮ ಕ್ಷೇತ್ರದಲ್ಲಿ ಬಂಡವಾಳ ಹೂಡುವವರು ಸಾಲಲ್ಲಿ ನಿಲ್ಲತೊಡಗಿದ್ದಾರೆ, ಇವರ ಜೊತೆ ರಾಜಕಾರಣಿಗಳು ಸೇರಿಕೊಂಡಿದ್ದಾರೆ. ಇಂದು ದೇಶದ ಬಹುತೇಕ ಪತ್ರಿಕೆಗಳು ಮತ್ತು ನ್ಯೂಸ್ ಚಾನೆಲ್‌ಗಳು ಒಂದೋ ಆಳುವ ಪಕ್ಷದ ಜೊತೆ ಗುರುತಿಸಿಕೊಂಡಿರುವ ಉದ್ಯಮಿಗಳ ಕೈಯಲ್ಲಿವೆ, ಇಲ್ಲವೇ ನೇರವಾಗಿ ರಾಜಕಾರಣಿಗಳ ಒಡೆತನದಲ್ಲಿವೆ.

ರಾಷ್ಟ್ರಮಟ್ಟದಲ್ಲಿ ಮುಖೇಶ್ ಅಂಬಾನಿ ಒಡೆತನದ ರಿಲಯನ್ಸ್ ಕಂಪೆನಿ ಮಾಧ್ಯಮ ಕ್ಷೇತ್ರದಲ್ಲಿ ಹೂಡುತ್ತಿರುವ ಬಂಡವಾಳದ ಪ್ರಮಾಣವನ್ನು ನೋಡಿದರೆ ಮುಂದಿನ ದಿನಗಳಲ್ಲಿ ದೇಶದ ಎಲ್ಲ ಪತ್ರಕರ್ತರು ಅಂಬಾನಿ ಉದ್ಯೋಗಿಗಳಾಗಿ ಹೋದರೂ ಅಚ್ಚರಿ ಇಲ್ಲ. ಹತ್ತು ವರ್ಷಗಳ ಹಿಂದೆ ಮುಖೇಶ್ ಅಂಬಾನಿಯ ರಿಲಯನ್ಸ್ ಕಂಪೆನಿ ಸುಮಾರು ನಾಲ್ಕು ಸಾವಿರ ಕೋಟಿ ಬಂಡವಾಳ ಹೂಡಿ ವಿವಿಧ ಭಾಷೆಗಳ ನೂರಕ್ಕೂ ಹೆಚ್ಚು ನ್ಯೂಸ್ ಚಾನೆಲ್‌ಗಳನ್ನು ಹೊಂದಿರುವ ನ್ಯೂಸ್-೧೮ ಮತ್ತು ಈ-ಟಿವಿ ಮಾಧ್ಯಮ ಸಂಸ್ಥೆಗಳನ್ನು ಖರೀದಿಸಿತ್ತು. ವಾರ್ಷಿಕ ಎರಡು ಲಕ್ಷ ಕೋಟಿ ರೂಪಾಯಿ ವ್ಯವಹಾರ ನಡೆಸುವ ಮುಖೇಶ್ ಲಾಭದ ಆಸೆಯಿಂದ ಖಂಡಿತ ಈ ಬಂಡವಾಳ ಹೂಡಿಲ್ಲ.

ಕರ್ನಾಟಕದ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ಬಿಜೆಪಿ ಪಕ್ಷದ ಸದಸ್ಯರಾಗಿರುವ ರಾಜೀವ್ ಚಂದ್ರಶೇಖರ್ ಮತ್ತು ವಿಜಯ್ ಸಂಕೇಶ್ವರ್ ತಲಾ ಎರಡು ಪತ್ರಿಕೆ ಮತ್ತು ಎರಡು ನ್ಯೂಸ್ ಚಾನೆಲ್ ಮತ್ತು ಜಾತ್ಯತೀತ ಜನತಾದಳದ ಎಚ್.ಡಿ.ಕುಮಾರಸ್ವಾಮಿ ಒಂದು ಚಾನೆಲ್ ಗೆ ಒಡೆಯರು. ಇದೇ ರೀತಿ ತಮಿಳುನಾಡಿನ ಕರುಣಾನಿಧಿ ಕುಟುಂಬ, ಕೇರಳದಲ್ಲಿ ಸಿಪಿಎಂ ಮತ್ತು ಕಾಂಗ್ರೆಸ್ ನಾಯಕರು, ಆಂಧ್ರಪ್ರದೇಶದಲ್ಲಿ ಜಗನ್ ಮೋಹನ್ ರೆಡ್ಡಿ, ತೆಲಂಗಾಣದಲ್ಲಿ ಚಂದ್ರಶೇಖರ್‌ರಾವ್ ತಮ್ಮದೇ ಆಗಿರುವ ಮಾಧ್ಯಮ ಸಂಸ್ಥೆಗಳನ್ನು ಹೊಂದಿದ್ದಾರೆ.

(೧೧ನೇ ಪುಟಕ್ಕೆ

ವಿಶೇಷ ಲೇಖನ-೨

# ಸಾಮಾಜಿಕ ಮಾಧ್ಯಮಗಳೋ ಸಾಮಾಜಿಕ ಕೇಡುಗಳೋ?

-ಡಿ.ಎಸ್. ಪೂರ್ಣಾನಂದ

**ಬಹುಸಂಖ್ಯಾತತೆಯ ಕೇಡುಗಳಿಗೆ ದಾರಿ ಮಾಡಿಕೊಡಲಾರಂಭಿಸಿದ್ದ ಪ್ರಜಾಪ್ರಭುತ್ವ ಪದ್ಧತಿಯನ್ನು ಸರಿ ದಾರಿಗೆ ತರಬಲ್ಲ ವ್ಯಕ್ತಿಯ ಬೆರಳ ತುದಿಯ ಅಸ್ತ್ರವಾಗಿ ಮೂಡಿ ಭರವಸೆ ಹುಟ್ಟಿಸಿದ್ದ ಈ ಸಾಮಾಜಿಕ ಮಾಧ್ಯಮ ಎಂಬ ಆಧುನಿಕ ತಂತ್ರಜ್ಞಾನದ ಈ ಕೊಡುಗೆ ಇಂದು ವೈವಿಧ್ಯಮವಾಗಿ ವಿಸ್ತಾರಗೊಂಡು ವೈವಿಧ್ಯಮಯ ಕೇಡುಗಳ ಹುಟ್ಟಿನ ತಾಣವಾಗಿ ಪ್ರಜಾಪ್ರಭುತ್ವವನ್ನು ಬಹುಸಂಖ್ಯಾತರ ಸರ್ವಾಧಿಕಾರ ಆಡಳಿತದ ಮಾದರಿಯನ್ನಾಗಿ ಬೆಳೆಸತೊಡಗಿರುವುದು ಅತ್ಯಾಧುನಿಕ ತಂತ್ರಜ್ಞಾನ ಯುಗದ ದುರಂತಗಳಲ್ಲೊಂದು, ಇದನ್ನು ಸೋದಾಹರಣವಾಗಿ ನಿರೂಪಿಸುವ ಲೇಖನವಿದು**-ಸಂ.




**ಹೊ**ಸ ತಂತ್ರಜ್ಞಾನವೊಂದರ ಪ್ರಯೋಗ ಆರಂಭವಾದಾಗ ಮಿತಿಯಿಲ್ಲದ ಆಶಾವಾದ ಅದನ್ನು ಸ್ವಾಗತಿಸುತ್ತದೆ. ತೊಂಬತ್ತರ ದಶಕದಲ್ಲಿ ಅಂತರ್ಜಾಲ ಸೇವೆ ಆರಂಭವಾದಾಗ ಮಾಹಿತಿ, ವಿಚಾರಗಳು ಜಗತ್ತಿನೆಲ್ಲಡೆ ಮುಕ್ತವಾಗಿ ಹರಿದು ಅಂತರರಾಷ್ಟ್ರೀಯ ಗಡಿಗಳು ಅಪ್ರಸ್ತುತವಾಗಿ ಮುಂದಿನ ತಲೆಮಾರಿನ ಮಕ್ಕಳು ರಾಷ್ಟ್ರೀಯತೆ ಎಂದರೇನು ಎಂಬುದನ್ನೇ ತಿಳಿಯದವರಾಗಿರುತ್ತಾರೆ ಎಂದು ಕೆಲವರು ಘೋಷಿಸಿದರು. ಸರ್ವಾಧಿಕಾರಿ ಆಳ್ವಿಕೆಗಳು ಕೊನೆಗೊಂಡು ಉದಾರವಾದಿ ಪ್ರಜಾತಂತ್ರ ವ್ಯವಸ್ಥೆಗಳು ಎಲ್ಲೆಡೆ ಉದಯಿಸಿ ಜಾಗತಿಕ ಶಾಂತಿ ಸ್ಥಾಪನೆಯಾಗುತ್ತದೆಂದು ತಂತ್ರಜ್ಞಾನ ನಿಯಂತ್ರಣವಾದಿಗಳು ಆನಂದಾತಿಶಯ ವ್ಯಕ್ತಪಡಿಸಿದ್ದರು. ಇದು ಹೊಸದೇನೂ ಆಗಿರಲಿಲ್ಲ. ೧೮೫೮ರಲ್ಲಿ ಅಟ್ಲಾಂಟಿಕ್ ಸಾಗರದಾಚೆಗೆ ಟೆಲಿಗ್ರಾಫ್ ಸಂದೇಶಗಳು ತಲುಪಿದಾಗ ಈ ಹೊಸ ವಾಹಕವು ಜಗತ್ತಿನ ಎಲ್ಲ ದೇಶಗಳ ನಡುವೆ ಮಾಹಿತಿ ವಿನಿಮಯಕ್ಕೆ ಅವಕಾಶ ಕಲ್ಪಿಸಿ ಹಿಂದಿನ ಪೂರ್ವಗ್ರಹಗಳು ಮತ್ತು ದ್ವೇಷವನ್ನು ತೊಡೆದುಹಾಕುತ್ತದೆ ಎಂದು ಸಂಭ್ರಮಿಸಲಾಯಿತು. ಆದರೆ ಅದು ವಸಾಹತುಶಾಹಿ ಮತ್ತಷ್ಟು ವಿಸ್ತಾರವಾಗಲು ಸಹಾಯಕವಾಯಿತು. ಕಳೆದ ಶತಮಾನದ ಆರಂಭದಲ್ಲಿ ವಿಮಾನಗಳು ಹಾರಲಾರಂಭಿಸಿದಾಗ ಅವುಗಳು ಅಂತರರಾಷ್ಟ್ರೀಯ ಸಂವಹನವನ್ನು ಸುಗಮಗೊಳಿಸಿ, ಯುದ್ಧಗಳನ್ನು ಕೊನೆಗೊಳಿಸುತ್ತವೆ ಎಂಬ ನಿರೀಕ್ಷೆಯನ್ನು ವ್ಯಕ್ತಪಡಿಸಲಾಗಿತ್ತು. ಆದರೆ ಮೊದಲ ಜಾಗತಿಕ ಯುದ್ಧ ಅಂತಹ ನಿರೀಕ್ಷೆಗಳನ್ನು ಸುಳ್ಳು ಮಾಡಿತು. ರೇಡಿಯೊ ಪ್ರಸಾರ ಆರಂಭವಾದಾಗ ದೇಶ-ದೇಶಗಳ ನಡುವೆ ಸಂಪರ್ಕ ಬೆಳೆದು ಶಾಂತಿ ನೆಲೆಸುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಲಾಗಿತ್ತು. ಆದರೆ ರೇಡಿಯೊ ಎರಡನೇ ಜಾಗತಿಕ ಯುದ್ಧವನ್ನಾಗಲೀ ಅಥವಾ ನಂತರದ ಘರ್ಷಣೆಗಳನ್ನಾಗಲೀ ತಪ್ಪಿಸಲಿಲ್ಲ. ಜೈವಿಕ ತಂತ್ರಜ್ಞಾನ ಜಗತ್ತಿನ ಹಸಿವನ್ನು ನೀಗಿಸುತ್ತದೆ ಮತ್ತು ವಂಶವಾಹಿ ತಂತ್ರಜ್ಞಾನದಿಂದ ರೋಗಗಳು ಬಾರದಂತೆ ತಡೆಯಬಹುದೆಂದೂ ಭವಿಷ್ಯ ನುಡಿಯಲಾಗಿತ್ತು. ಆದರೆ ಇಂದೂ ಕೂಡ ಹಸಿವಿನಿಂದ ಬಳಲುವವರ ಸಂಖ್ಯೆ ಬೆಳೆಯುತ್ತಿದೆಯಲ್ಲದೆ ಮಾರಕ ರೋಗಗಳ ಸಮರ್ಪಕ ನಿಯಂತ್ರಣವೂ ಸಾಧ್ಯವಾಗಿಲ್ಲ.

ಇತರ ತಂತ್ರಜ್ಞಾನಗಳಂತೆಯೇ ಅಂತರ್ಜಾಲ ಆಧಾರಿತ ಸಾಮಾಜಿಕ ಮಾಧ್ಯಮಗಳು ಜನರಲ್ಲಿ ಬಹು ನಿರೀಕ್ಷೆ ಹುಟ್ಟಿಸಿದ್ದವು. ಯಾವುದೇ ನಿರ್ಬಂಧವಿಲ್ಲದೆ ತಕ್ಷಣದಲ್ಲೇ ಮಾಹಿತಿಯನ್ನು ಪಡೆಯುವ, ಪ್ರತಿಕ್ರಿಯಿಸುವ ಮತ್ತು ಚರ್ಚೆಗಳಲ್ಲಿ ಭಾಗವಹಿಸುವ ಹೊಸಬಗೆಯ ಅನುಭವವನ್ನು ಅವು ನೀಡಿದವು. ಮಾನವ ಹಕ್ಕುಗಳನ್ನು ರಕ್ಷಿಸಲು, ಆಡಳಿತದ ಗುಣಮಟ್ಟವನ್ನು ಉತ್ತಮಪಡಿಸಲು, ಭ್ರಷ್ಟಾಚಾರವನ್ನು ಬಹಿರಂಗಗೊಳಿಸಲು, ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು, ಆರ್ಥಿಕ ಅಭಿವೃದ್ಧಿಯನ್ನು ಸುಗಮಗೊಳಿಸಲು, ಪರಿಸರವನ್ನು ರಕ್ಷಿಸಲು ಮತ್ತು ಬಡವರನ್ನು ಸಶಕ್ತಗೊಳಿಸಲು ಈ ಮಾಧ್ಯಮಗಳು ಪರಿಣಾಮಕಾರಿ ಸಾಧನಗಳಾಗಬಲ್ಲವೆಂದು ಭಾವಿಸಲಾಯಿತು. ಕೆಲವು ದೇಶಗಳಲ್ಲಿ ಸಾಮಾಜಿಕ ಮತ್ತು ರಾಜಕೀಯ ಹೋರಾಟಗಳು ಚಿಗುರೊಡೆಯಲು ಈ ಮಾಧ್ಯಮಗಳು ಸಹಾಯ ಮಾಡಿದ್ದು ಅವುಗಳ ಮೇಲಿದ್ದ ನಂಬಿಕೆಯನ್ನು ಹೆಚ್ಚಿಸಿತು.

ಒಂದು ದಶಕದ ಹಿಂದೆ ಟುನೀಷಿಯಾ, ಈಜಿಪ್ಟ್, ಲಿಬಿಯಾ, ಸಿರಿಯಾ, ಎಮೆನ್, ಬಹರೈನ್ ಮುಂತಾದ ರಾಷ್ಟ್ರಗಳಲ್ಲಿ ಅಸಮಾನತೆ, ಶೋಷಣೆ, ಬಡತನ, ನಿರುದ್ಯೋಗದ ವಿರುದ್ಧ ಆರಂಭವಾದ ಸಮೂಹ ಹೋರಾಟಗಳಲ್ಲಿ ಸಾಮಾಜಿಕ ಮಾಧ್ಯಮಗಳು ಪ್ರಮುಖ ಪಾತ್ರವಹಿಸಿದವು. ಫೇಸ್‌ಬುಕ್ ಮತ್ತು ಟ್ವಿಟ್ಟರ್ ಮೂಲಕ ಸಂದೇಶಗಳನ್ನು ಸಾವಿರಾರು ಜನರಿಗೆ ತಲುಪಿಸಿ ಬೀದಿ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳಲು ಕರೆ ನೀಡಲಾಯಿತು. ಆ ದೇಶಗಳು ಕಂಡರಿಯದ ಬೃಹತ್ ಪ್ರಭುತ್ವ ವಿರೋಧಿ ಅಲೆ ಆರಂಭವಾಗಿರುವಂತೆ ಕಂಡಿತು. 'ಅರಬ್ ಸ್ಪ್ರಿಂಗ್' ಎಂದು ಬಣ್ಣಿಸಲಾಗಿರುವ ಈ ಹೋರಾಟಗಳು ನಿರಂಕುಶವಾದಿ ಆಡಳಿತಗಳನ್ನು ಕೊನೆಗಾಣಿಸಿ ಉದಾರವಾದಿ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಗಳನ್ನು ಸೃಷ್ಟಿಸಬಹುದೆಂಬ ನಿರೀಕ್ಷೆಯನ್ನು ಹುಟ್ಟಿಸಿದ್ದವು. ಆದರೆ ಎರಡೇ ವರ್ಷಗಳಲ್ಲಿ ಆ ನಿರೀಕ್ಷೆ ಹುಸಿಯಾಗಿ ಅದೇ ಸಾಮಾಜಿಕ ಮಾಧ್ಯಮಗಳನ್ನು ಆಡಳಿತಗಾರರು ನಾಗರೀಕರ ಸ್ವಾತಂತ್ರವನ್ನು ಹತ್ತಿಕ್ಕಲು ಬಳಸಲಾರಂಭಿಸಿದರು. 'ಅರಬ್ ಸ್ಪ್ರಿಂಗ್' ಆರಂಭವಾದಾಗ ಯಾವ ಪರಿಸ್ಥಿತಿಯಿತ್ತೋ ಅದಕ್ಕಿಂತಲೂ ಭಯಾನಕವಾದ ಸ್ಥಿತಿ ಈಗ ಆ ರಾಷ್ಟ್ರಗಳಲ್ಲಿದೆ ಆದರೆ ಹೋರಾಟಗಳು ಕಾಣದಂತಾಗಿವೆ. ಇಪ್ಪತ್ತು ವರ್ಷಗಳ ಹಿಂದೆ ಅಮೇರಿಕಾದ ಅಧ್ಯಕ್ಷ ಬಿಲ್ ಕ್ಲಿಂಟನ್ ಅಂತರ್ಜಾಲವನ್ನು ನಿಯಂತ್ರಿಸಲು ಚೀನಾಕ್ಕೆ ಸಾಧ್ಯವಿಲ್ಲ ಹಾಗಾಗಿ ಅಲ್ಲಿ ಏಕಪಕ್ಷೀಯ ಆಡಳಿತ ಕೊನೆಗೊಂಡು ಪ್ರಜಾಪ್ರಭುತ್ವ ಅರಳುತ್ತದೆ ಎಂದು ಹೇಳಿದ್ದರು. ಆದರೆ ಚೀನೀಯರು ಆ ನಿರೀಕ್ಷೆಯನ್ನು ಕೆಲವೇ ವರ್ಷಗಳಲ್ಲಿ ಸುಳ್ಳುಮಾಡಿದರು. ಇತಿಹಾಸದಲ್ಲೇ ಬಹಳ ವಿಸ್ತಾರವಾದ ಅಂತರ್ಜಾಲ ಸೆನ್ಸಾರ್ ವ್ಯವಸ್ಥೆಯನ್ನು ಚೀನಾ ಸೃಷ್ಟಿಸಿದೆ.

ಜಗತ್ತಿನಾದ್ಯಂತ ೩.೮೧ ಬಿಲಿಯನ್ ಬಳಕೆದಾರರನ್ನು ಹೊಂದಿರುವ ಸಾಮಾಜಿಕ ಮಾಧ್ಯಮಗಳು ಸಾಂಪ್ರದಾಯಿಕ ಮಾಧ್ಯಮಗಳಿಗಿಂತ ದೊಡ್ಡದಾಗಿ ಬೆಳೆದು ತಮ್ಮ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಶಕ್ತಿಯನ್ನು ಹೆಚ್ಚಿಸಿಕೊಂಡಿವೆ. ರಾಜಕೀಯ ಗುಂಪುಗಳು ಪ್ರಜಾತಂತ್ರ ವಿರೋಧಿ ಚಟುವಟಿಕೆಗಳಿಗೆ ಈ ಮಾಧ್ಯಮಗಳನ್ನು ಬಳಸಿಕೊಂಡಿವೆ. ಈ ವರ್ಷದ ಜನವರಿ ೬ರಂದು ಅಮೇರಿಕಾದ ರಾಜಧಾನಿಯಲ್ಲಿರುವ ಕ್ಯಾಪಿಟಾಲ್ ಭವನದಲ್ಲಿ ಜೊ ಬೈಡನ್‌ರವರು ಹೊಸ ಅಧ್ಯಕ್ಷರಾಗಿ ಆಯ್ಕೆಯಾದುದನ್ನು ದೃಢೀಕರಿಸಲು ಕಾಂಗ್ರೆಸ್ ಸಭೆ ನಡೆಸುತ್ತಿದ್ದಾಗ ಅಧ್ಯಕ್ಷ ಡೋನಾಲ್ಡ್ ಟ್ರಂಪ್‌ನ ಸಾವಿರಾರು ಬೆಂಬಲಿಗರು ಮುತ್ತಿಗೆ ಹಾಕಿದರು. ಅಧ್ಯಕ್ಷೀಯ ಚುನಾವಣೆಯಲ್ಲಿ ನಾನೇ ಗೆದ್ದಿದ್ದೇನೆ ಆದರೆ ಎಣಿಕೆಯಲ್ಲಿ ಮೋಸ ನಡೆದಿದೆ ಎಂದು ವಾದಿಸುತ್ತಿದ್ದ ಟ್ರಂಪ್ ಫಲಿತಾಂಶವನ್ನು ತಿರಸ್ಕರಿಸುವಂತೆ ಫೇಸ್‌ಬುಕ್, ಟ್ವಿಟ್ಟರ್ ಮತ್ತು ಯುಟ್ಯೂಬ್‌ನಲ್ಲಿ ತನ್ನ ಬೆಂಬಲಿಗರಿಗೆ ಕರೆ ನೀಡಿದ್ದು ಮುತ್ತಿಗೆಗೆ ಪ್ರಚೋದನೆ ನೀಡಿತ್ತು. ಪ್ರಜಾಪ್ರಭುತ್ವದ ಪ್ರಕ್ರಿಯೆಯೊಂದನ್ನು ಬುಡಮೇಲು ಮಾಡಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವ ಪ್ರಯತ್ನಕ್ಕೆ ಸಾಮಾಜಿಕ ಮಾಧ್ಯಮಗಳನ್ನು ಟ್ರಂಪ್ ಬಳಕೆ ಮಾಡಿಕೊಂಡಿದ್ದರು. ಅವರ ಫೇಸ್‌ಬುಕ್ ಮತ್ತು ಟ್ವಿಟ್ಟರ್ ಖಾತೆಗಳನ್ನು ಅಮಾನತುಗೊಳಿಸಲಾಯಿತು ಆದರೆ ಸಾವಿರಾರು ಸುಳ್ಳುಗಳನ್ನು ಈ ವೇದಿಕೆಗಳ ಮೂಲಕ ಟ್ರಂಪ್ ವರ್ಷಗಳಿಂದ ಹೇಳುತ್ತಲೇ ಬಂದಿದ್ದರು.

ಸುಳ್ಳು, ಅರೆಸತ್ಯ, ಜನಾಂಗೀಯ ದ್ವೇಷ ಮತ್ತು ತಿರುಚಿದ ಮಾಹಿತಿ ತುಂಬಿದ ಯೋಜಿತ ಪ್ರಚಾರದಿಂದಾಗಿಯೇ ಟ್ರಂಪ್ ೨೦೧೬ರ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಯಿತು ಎಂಬುದು ರಾಜಕೀಯ ತಜ್ಞರ ಅಭಿಪ್ರಾಯವಾಗಿದೆ. ಅಮೇರಿಕಾದ ಮೂರು ಪ್ರತಿಷ್ಠಿತ ಪತ್ರಿಕೆಗಳಾದ 'ದಿ ನ್ಯೂಯಾರ್ಕ್ ಟೈಮ್ಸ್', 'ದಿ ವಾಷಿಂಗ್ಟನ್ ಪೋಸ್ಟ್' ಮತ್ತು 'ದಿ ಲಾಸ್ ಎಂಜಲಿಸ್ ಟೈಮ್ಸ್' ಪತ್ರಿಕೆಗಳು ತಮ್ಮ ತಟಸ್ಥ ನೀತಿಯನ್ನು ಮುರಿದು 'ಟ್ರಂಪ್‌ಗೆ ಮತ ನೀಡಬೇಡಿ' ಎಂದೇ ತಮ್ಮ ಓದುಗರಿಗೆ ಕರೆ ಕೊಟ್ಟಿದ್ದವು. ಹಿಂದೆ ಯಾವುದೇ ಅಧ್ಯಕ್ಷೀಯ ಅಭ್ಯರ್ಥಿಯಾಗಲಿ ಈ ಪತ್ರಿಕೆಗಳನ್ನು ಎದುರು ಹಾಕಿಕೊಂಡು ಯಶಸ್ಸು ಕಂಡಿದ್ದಿಲ್ಲ. ಆದರೆ ಆ ವೇಳೆಗಾಗಲೇ ಮುಖ್ಯವಾಹಿನಿಯ ಮಾಧ್ಯಮಗಳು ತಮಗೆ ಹಿಂದಿದ್ದ ಪ್ರಭಾವವನ್ನು ಕಳೆದುಕೊಂಡಿದ್ದವು. ಅಲ್ಲಿಯ ಬಹುತೇಕ ಮತದಾರರು ಮಾಹಿತಿಗಾಗಿ, ಅಭಿಪ್ರಾಯಗಳಿಗಾಗಿ ಅವಲಂಬಿಸಿದ್ದು ಸಾಮಾಜಿಕ ಮಾಧ್ಯಮಗಳನ್ನು. ಅವುಗಳ ಸಹಾಯವಿಲ್ಲದೆ ಟ್ರಂಪ್ ಎಂಬ ಬಿಳಿಯ ಶ್ರೇಷ್ಠತೆಯ ಪ್ರತಿಪಾದಕ, ಸ್ತ್ರೀಲೋಲ, ತೆರಿಗೆ ವಂಚಕ ಆ ದೇಶದ ಅಧ್ಯಕ್ಷನಾಗಿ ಚುನಾಯಿತನಾಗುತ್ತಿರಲಿಲ್ಲ ಎಂದು ಸಮಾಜ ವಿಜ್ಞಾನಿಗಳು ಹೇಳುತ್ತಾರೆ. ಭಾರತದ ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಮತದಾನದ ಮೇಲೆ ಅರೆಸತ್ಯ ಮತ್ತು ಸುಳ್ಳುಗಳೇ ತುಂಬಿದ್ದ ಸಾಮಾಜಿಕ ಮಾಧ್ಯಮಗಳು ಪ್ರಭಾವ ಬೀರಿವೆಯೆಂದು ಚುನಾವಣಾ ತಜ್ಞರು ಹೇಳಿದ್ದಾರೆ. ಬ್ರಿಟನ್ ಯೂರೋಪಿನ ಒಕ್ಕೂಟದಲ್ಲಿ ಮುಂದುವರಿಯಬೇಕೆ ಅಥವಾ ಹೊರಬರಬೇಕೆ ಎಂದು ನಿರ್ಧರಿಸಲು

೨೦೧೬ರಲ್ಲಿ ನಡೆಸಿದ 'ಬ್ರೆಕ್ಸಿಟ್' ಎಂಬ ಜನಮತಗಣನೆಯಲ್ಲಿ ಒಕ್ಕೂಟವಾದಿಗಳಿಗೆ ಸೋಲಾಗಲು ಅವರ ವಿರೋಧಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ನಡೆಸಿದ ಆಂದೋಲನ ಪ್ರಮುಖ ಕಾರಣಗಳಲ್ಲೊಂದಾಗಿತ್ತೆಂದು ಅಧ್ಯಯನಗಳು ಹೇಳುತ್ತವೆ. ಪ್ರಜಾಪ್ರಭುತ್ವಕ್ಕಿದ್ದ ನಿರೋಧಕ ಶಕ್ತಿಯನ್ನು ಸಾಮಾಜಿಕ ಮಾಧ್ಯಮಗಳು ಕುಗ್ಗಿಸಿವೆ. ಮಾಧ್ಯಮ ಮಾರುಕಟ್ಟೆ ವಿಸ್ತಾರವಾದಂತೆಲ್ಲಾ ಪ್ರಜಾತಂತ್ರ ವ್ಯವಸ್ಥೆ ದುರ್ಬಲವಾಗುತ್ತಿರುವುದು ಕಾಣುತ್ತಿದೆ.

ವಾಟ್ಸಪ್, ಇನ್‌ಸ್ಟಾಗ್ರಾಮ್ ಮತ್ತು ಮೆಸೆಂಜರ್‌ನ ಒಡೆತನವನ್ನೂ ಹೊಂದಿರುವ ಫೇಸ್‌ಬುಕ್ ಚೀನಾ ಮತ್ತು ರಷ್ಯಾ ಹೊರತುಪಡಿಸಿ ಎಲ್ಲ ದೇಶಗಳಲ್ಲೂ ಪ್ರಮುಖ ಮಾಧ್ಯಮ ವಿತರಣಾ ವೇದಿಕೆಯಾಗಿ ಬೆಳೆದಿದೆ. ಮಯನ್ಮಾರ್‌ನಲ್ಲಿ ರೊಹಿಂಗ್ಯ ಮುಸ್ಲಿಮರ ಜನಾಂಗೀಯ ಹತ್ಯೆಗೆ ಫೇಸ್‌ಬುಕ್‌ನಲ್ಲಿ ಹರಿದಾಡಿದ ದ್ವೇಷ ತುಂಬಿದ ಸಂದೇಶಗಳು ಬಹಳಷ್ಟು ಕಾರಣವಾಗಿದ್ದವು. ೨೦೧೮ರಲ್ಲಿ ೭ ಲಕ್ಷ ರೊಹಿಂಗ್ಯ ಮುಸ್ಲಿಮರು ಕಿರುಕುಳ, ಹಿಂಸೆ ತಡೆಯಲಾರದೆ ಮಯನ್ಮಾರ್‌ನಿಂದ ಪಲಾಯನ ಮಾಡಿದರು. ಸಾವಿರಾರು ಜನರ ಹತ್ಯಾಕಾಂಡ ನಡೆಯಿತು. ರೊಹಿಂಗ್ಯಾ ಮುಸ್ಲಿಮರ ಕುರಿತ ದ್ವೇಷದ ಸಂದೇಶಗಳನ್ನು ತಡೆಯಲಾಗಲಿಲ್ಲವೆಂದು ಫೇಸ್‌ಬುಕ್ ಒಪ್ಪಿಕೊಂಡಿದೆ. ಅದು ಜವಾಬ್ದಾರಿಯುತವಾಗಿ ವರ್ತಿಸಿದ್ದರೆ ಸಾವಿರಾರು ಜೀವಗಳು ಉಳಿಯುತ್ತಿದ್ದವು. ಮಾರ್ಚ್ ೧೫, ೨೦೧೯ರಂದು ಬಿಳಿಯ ಶ್ರೇಷ್ಠತಾವಾದಿಯೊಬ್ಬ ನ್ಯೂಜಿಲ್ಯಾಂಡ್‌ನ ಕ್ರೈಸ್ಟ್ ಚರ್ಚ್‌ನಲ್ಲಿರುವ ಎರಡು ಮಸೀದಿಗಳ ಮೇಲೆ ದಾಳಿ ನಡೆಸಿ ೫೧ ಅಮಾಯಕ ಮುಸ್ಲಿಮರನ್ನು ಗುಂಡಿಕ್ಕಿ ಕೊಲ್ಲುತ್ತಾ ಹೋದುದನ್ನು ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ ಮಾಡಿದ. ಅಂತಹ ಕೃತ್ಯ ನಡೆಸಲು ಸಾಮಾಜಿಕ ಮಾಧ್ಯಮಗಳಿಂದ ಪ್ರೇರಣೆ ಪಡೆದಿದ್ದ ಎಂದು ತನಿಖಾ ವರದಿ ಹೇಳುತ್ತದೆ. ಆತ ಬಲಪಂಥೀಯ ಅಂತರ್ಜಾಲ ತಾಣಗಳಿಗೆ ಭೇಟಿ ನೀಡುತ್ತಿದ್ದುದಲ್ಲದೆ ಬಲಪಂಥೀಯ ಯಟ್ಯೂಬ್ ಚಾನೆಲ್‌ಗಳ ಚಂದಾದಾರನಾಗಿದ್ದ.

ಬಿಳಿಯ ಜನಾಂಗೀಯವಾದಿಗಳು, ರಾಷ್ಟ್ರೀಯವಾದಿಗಳು ಮತ್ತು ಫ್ಯಾಸಿಸ್ಟ್ ಗುಂಪುಗಳು ನಾಗರೀಕ ಹಕ್ಕುಗಳನ್ನು ಹತ್ತಿಕ್ಕಲು ಮತ್ತು ಹಿಂಸಾಚಾರ ನಡೆಸಲು ಫೇಸ್‌ಬುಕ್ ಸಹಾಯ ಮಾಡಿದೆ. ಜರ್ಮನಿಯಲ್ಲಿ ೧೯೩೩-೪೫ರಲ್ಲಿ ಯಹೂದಿಗಳ ಮೇಲೆ ಹಿಟ್ಲರ್ ನಡೆಸಿದ ಹತ್ಯಾಕಾಂಡವನ್ನು ನಿರಾಕರಿಸುವ ಮತ್ತು ಹವಾಮಾನ ಬದಲಾವಣೆಯೆಂಬುದೇ ಸುಳ್ಳು ಎಂದು ವಾದಿಸುತ್ತಿರುವ ಗುಂಪುಗಳಿಗೆ ವೇದಿಕೆ ಒದಗಿಸಿದೆ. ಮುಸ್ಲಿಂ ವಿರೋಧಿ ಭಾವನೆಗಳನ್ನು ಬಿತ್ತುವುದಕ್ಕೆ ಮತ್ತು ಹಿಂಸಾತ್ಮಕ ಹಿಂದೂ ರಾಷ್ಟ್ರೀಯವಾದದ ಯೋಜಿತ ಪ್ರಚಾರಕ್ಕೆ ಫೇಸ್‌ಬುಕ್ ಅವಕಾಶ ಕಲ್ಪಿಸಿದೆ. ಭಾರತದಲ್ಲಿ ಫೇಸ್‌ಬುಕ್‌ನ ಕಾರ್ಯನೀತಿ ನಿರ್ದೇಶಕರಾಗಿದ್ದ ಅಂಕಿ ದಾಸ್ ಮುಸ್ಲಿಮರನ್ನು 'ಅವನತಿ ಹೊಂದುತ್ತಿರುವ ಸಮುದಾಯ' ಎಂದು ಅವಮಾನಿಸಿದ ಪೋಸ್ಟನ್ನು ಹಂಚಿಕೊಂಡದ್ದಲ್ಲದೆ ಮುಸ್ಲಿಂ ವಿರೋಧಿ ಪೋಸ್ಟ್‌ಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದಂತೆ ನೋಡಿಕೊಂಡಿದ್ದರು. ಪತ್ರಕರ್ತ ಪರಾಂಜಯ್ ಗುಹಾ ತಾಕುರ್ತಾ ಮತ್ತು ಸಿರಿಲ್ ಸ್ಯಾಮ್ ಬರೆದಿರುವ 'ದಿ ರಿಯಲ್ ಫೇಸ್ ಆಫ್ ಫೇಸ್‌ಬುಕ್' ಪುಸ್ತಕದಲ್ಲಿ ಬಲಪಂಥೀಯ ಸಂಘಟನೆಗಳು ನಡೆಸಿದ ಅಪಪ್ರಚಾರಕ್ಕೆ ಫೇಸ್‌ಬುಕ್ ಸಹಾಯ ಮಾಡಿದ್ದನ್ನು ವಿವರಿಸಲಾಗಿದೆ..

ಎನ್‌ಡಿಟಿವಿ-ಇಂಡಿಯಾ ಸುದ್ದಿ ವಾಹಿನಿಯ ಖ್ಯಾತ ಪತ್ರಕರ್ತ ರವೀಶ್ ಕುಮಾರ್ ಫೇಸ್‌ಬುಕ್ ಸಾಮಾಜಿಕ ಜಾಲತಾಣವಲ್ಲ, ಅದೊಂದು ರಾಜಕೀಯ ಜಾಲತಾಣ ಎಂದು ಹೇಳುತ್ತಾರೆ. ಭಾರತವು ಪ್ರಂಪಂಚದ ಬಹುದೊಡ್ಡ ದ್ವೇಷ ಉತ್ಪಾದನೆ ಮಾಡುವ ಕಾರ್ಖಾನೆಯಾಗಿದೆ ಎನ್ನುತ್ತಾರೆ. ಪತ್ರಕರ್ತೆ ಸ್ವಾತಿ ಚತುರ್ವೇದಿಯವರು ಭಿನ್ನ ಸೈದ್ಧಾಂತಿಕ ನಿಲುವುಗಳುಳ್ಳ ಪತ್ರಕರ್ತರು, ಹೋರಾಟಗಾರರು ಮತ್ತು ಸಂಘಟನೆಗಳ ಮೇಲೆ ಬಲಪಂಥೀಯ ಗುಂಪುಗಳು ಸಾಮಾಜಿಕ ಮಾಧ್ಯಮಗಳ ಮೂಲಕ ವ್ಯವಸ್ಥಿತವಾಗಿ ನಡೆಸುತ್ತಾ ಬಂದಿರುವ ದಾಳಿಯನ್ನು ತಮ್ಮ "ಐ ಯಾಮ್ ಎ ಟ್ರಾಲ್" ಎಂಬ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಬಲಪಂಥೀಯ ಪೀಡಕರು ಸ್ವತಂತ್ರ ಪತ್ರಕರ್ತರ ದನಿಯನ್ನು ಅಡಗಿಸಲು ಅವರುಗಳ ಮೇಲೆ ಫೇಸ್‌ಬುಕ್ ಮತ್ತು ಟ್ವಿಟರ್‌ನಲ್ಲಿ ಸುಳ್ಳು ಆರೋಪಗಳನ್ನು ಮಾಡಿದ್ದಲ್ಲದೆ ಅವರ ಖಾಸಗಿ ಜೀವನದ ಮೇಲೆ ಮನಬಂದಂತೆ ಬರೆದು ತೇಜೋವಧೆ ಮಾಡಿದ್ದನ್ನು ದಾಖಲಿಸಿದ್ದಾರೆ. ಬರ್ಕಾ ದತ್ ಮತ್ತು ರಾಜ್‌ದೀಪ್ ಸರ್‌ದೇಸಾಯಿರವರಂತಹ ಹಿರಿಯ ಪತ್ರಕರ್ತರು ಈ ಪೀಡಕರ ಪ್ರಮುಖ ಗುರಿಗಳಾಗಿದ್ದಾರೆ. 'ನಿನ್ನ ರೇಟು ಎಷ್ಟು' ಎಂದು ಕೇಳುವುದರಿಂದ ಹಿಡಿದು ಅತ್ಯಾಚಾರದ ಬೆದರಿಕೆಯೊಡ್ಡಿ ಮಹಿಳಾ ಪತ್ರಕರ್ತರಿಗೆ ಕಿರುಕುಳ ಕೊಡುವ ಪೀಡಕರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದು ಮತ್ತು ಅಂತಹ ಪೀಡಕರನ್ನು ಅಧಿಕಾರದಲ್ಲಿರುವ ರಾಷ್ಟ್ರೀಯ ನಾಯಕರು ಫಾಲೋ ಮಾಡುವುದನ್ನು ಸ್ವಾತಿಯವರು ಸಾಕ್ಷಿ ಸಮೇತ ವಿವರಿಸುತ್ತಾರೆ.

೨೦೧೬ರಲ್ಲಿ ಶಂಕಿತ ಭಯೋತ್ಪಾದಕ ಬುರ್ಹಾನ್‌ವಾನಿ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡ ೨೦ ಸಾವಿರ ಜನರ ಮೇಲೆ ಬಾಂಬ್ ಹಾಕಿ ಅವರಿಗೆ ಶಾಶ್ವತ ಮುಕ್ತಿ ನೀಡಬೇಕಾಗಿತ್ತು ಎಂದು ಒಬ್ಬ ವ್ಯಕ್ತಿ ಟ್ವೀಟ್ ಮಾಡುತ್ತಾನೆ. ರಾಷ್ಟ್ರೀಯ ನಾಯಕರನ್ನೂ ಸೇರಿ ಎಂಬತ್ತು ಸಾವಿರ 'ಹಿಂಬಾಲಕ'ರನ್ನು ಹೊಂದಿದ್ದ ಈ ವ್ಯಕ್ತಿಯ ಟ್ವೀಟನ್ನು ಸಾವಿರಾರು ಜನ ಶೇರ್ ಮಾಡುತ್ತಾರೆ. ಮತ್ತೊಬ್ಬ ಪೀಡಕ ಕಾಶ್ಮೀರಿಗಳ ಸಾಮೂಹಿಕ ಹತ್ಯೆ ಮಾಡುವುದು 'ದೇಶಪ್ರೇಮದ ಪರಾಕಾಷ್ಠೆ' ಎಂದು ಟ್ವೀಟ್ ಮಾಡುತ್ತಾನೆ. ಈ ಕುರಿತು ತನ್ನ ಕಳವಳ ವ್ಯಕ್ತಪಡಿಸಿದ ಐಎಎಸ್ ಅಧಿಕಾರಿ ಶಾ ಫೈಸಲ್ ವಿರುದ್ಧ 'ದೇಶದ್ರೋಹಿ', 'ಭಯೋತ್ಪಾದಕ' ಎಂದು ಪ್ರಚಾರ ನಡೆಸುತ್ತಾರೆ. ಸಾಮಾಜಿಕ ಮಾಧ್ಯಮಗಳ ಇಂತಹ ಪೀಡಕರು ಎಷ್ಟು ಪ್ರಭಾವಿಗಳೆಂದರೆ ಅಧಿಕಾರಿಗಳು ಸರ್ಕಾರದ ಅನುಮತಿಯಿಲ್ಲದೆ ಸಾಮಾಜಿಕ ಮಾಧ್ಯಮಗಳಲ್ಲಿ ಏನನ್ನೂ ಬರೆಯುವಂತಿಲ್ಲ ಎಂಬ ನಿಯಮವನ್ನು ಜಾರಿಗೆ ತರುವಂತೆ ಮಾಡುತ್ತಾರೆ.

ಕಳೆದ ತಿಂಗಳು ದೆಹಲಿಯಲ್ಲಿ ಪ್ರತಿಭಟನಾನಿರತ ರೈತರು ತಮ್ಮ ಹೋರಾಟದ ದೈನಂದಿನ ವರದಿಗಳನ್ನು ಮತ್ತು ಮುಂಬರುವ ಕಾರ್ಯಕ್ರಮಗಳ ವಿವರಗಳನ್ನು ನೀಡಲು ತೆರೆದಿದ್ದ 'ಕಿಸಾನ್ ಏಕ್ತಾ ಮೋರ್ಚಾ' ಎಂಬ ಶೀರ್ಷಿಕೆಯ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್ ಪುಟಗಳನ್ನು ಹಠಾತ್ ನಿಷೇದಿಸಲಾಯಿತು. ಈ ಕ್ರಮದ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ರೋಶ ವ್ಯಕ್ತವಾದ ಮೇಲೆ ನಿಷೇಧವನ್ನು ಹಿಂತೆಗೆದುಕೊಳ್ಳಲಾಯಿತು. ಫೇಸ್‌ಬುಕ್ ಹೀಗೆ ಮಾನವ ಹಕ್ಕು ಹೋರಾಟಗಾರರು, ಮಾಹಿತಿ ಹಕ್ಕು ಹೋರಾಟಗಾರರು, ಸ್ವತಂತ್ರ ಪತ್ರಕರ್ತರು ಮತ್ತು ಇತರ ಜನಪರ ಸಂಘಟನೆಗಳ ಹಲವರ ಪುಟಗಳನ್ನು ತೆಗೆದು ಹಾಕಿದೆ. ಆದರೆ ಹಿಂಸೆಯನ್ನು ಪ್ರಚೋದಿಸುವ, ಅರೆಸತ್ಯ, ಸುಳ್ಳುಗಳನ್ನು ಹೇಳುವ ಬಲಪಂಥೀಯ ಪೀಡಕರ ಖಾತೆಗಳನ್ನು ನಿಷೇಧಿಸಿದ್ದು ವಿರಳ. ಸಾಮಾಜಿಕ ಮಾಧ್ಯಮಗಳಲ್ಲಿ ಬರುವ ಪ್ರಚೋದನಾತ್ಮಕ ಪೋಸ್ಟ್‌ಗಳಿಗೂ ಬೀದಿಗಳಲ್ಲಾಗುವ ಹಿಂಸೆಗೂ ನೇರ ಸಂಬಂಧವಿದೆಯೆಂಬುದಕ್ಕೆ ಸಾಕ್ಷಿಗಳಿದ್ದರೂ ಯಾವುದೇ ಕ್ರಮ ಜರುಗುವುದಿಲ್ಲ.

ಸಾಮಾಜಿಕ ಮಾಧ್ಯಮಗಳ ಬಳಕೆದಾರರು ಸೈದ್ಧಾಂತಿಕ ಗುಂಪುಗಳಾಗಿ ವಿಘಟನೆಗೊಂಡಿರುವುದರಿಂದ ಮುಕ್ತ ರಾಜಕೀಯ ಚರ್ಚೆಗಳಿಗೆ ಆಸ್ಪದವಿಲ್ಲದಾಗಿದೆ. ಪ್ರಪಂಚದ ೨೬ ದೇಶಗಳ ೯೦ ರಾಜಕೀಯ ಪಕ್ಷಗಳ ಚರ್ಚಾ ಗುಂಪುಗಳನ್ನು ಅಧ್ಯಯನ ಮಾಡಿರುವ ಅಕ್ಸ್‌ಫರ್ಡ್ ಇಂಟರ್‌ನೆಟ್ ಇನ್‌ಸ್ಟಿಟ್ಯೂಟ್‌ನ ಜೊನಾಥನ್ ಬ್ರೈಟ್ ಸಾಮಾಜಿಕ ಜಾಲತಾಣಗಳು ವಿಘಟನೆಗೊಂಡು 'ಏಕಾಲೋಚನೆಯ ಗೂಡು'ಗಳಾಗಿರುವುದನ್ನು ತೋರಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳು ಬಳಕೆದಾರರ ಇಷ್ಟ, ಒಲವುಗಳಿಗನುಗುಣವಾಗಿ ಮಾಹಿತಿಯನ್ನು ನೀಡುವ ಕಾರಣ ವಿಚಾರ ಮತ್ತು ಅಭಿಪ್ರಾಯ ವೈವಿಧ್ಯತೆಯಿಂದ ವಂಚಿತರಾಗುತ್ತಾರೆ. ಹಾಗಾಗಿ ವಿಭಿನ್ನ ಗುಂಪುಗಳ ನಡುವೆ ಚರ್ಚೆ ನಡೆಯದೆ ಅದೇ ರಾಜಕೀಯ ಒಲವುಳ್ಳ ಗುಂಪುಗಳ ಒಳಗೆ ಮಾತ್ರ ಚರ್ಚೆ ನಡೆಯುತ್ತದೆ. ಹೆಚ್ಚುತ್ತಿರುವ ಅಸಹಿಷ್ಣುತೆಗೆ ಜನರು ಏಕಾಲೋಚನೆಯ ಗೂಡುಗಳಲ್ಲಿ ಉಳಿಯುತ್ತಿರುವುದೂ ಒಂದು ಕಾರಣ.

ಸಾಮಾಜಿಕ ಮಾಧ್ಯಮಗಳಲ್ಲಿ ಮುಳುಗಿರುವವರು ಮಾನವಸಹಜವಾದ ಮುಖಾಮುಖಿ ಸಂವಹನದಿಂದ ವಿಮುಖರಾಗುತ್ತಾ ಖಿನ್ನತೆಗೆ, ಆತಂಕ್ಕೆ ಒಳಗಾಗುತ್ತಾರೆ. ಬಳಕೆದಾರರನ್ನು ವ್ಯಸನಿಗಳನ್ನಾಗಿಸುವ ಉದ್ದೇಶದಿಂದಲೇ ಸಾಮಾಜಿಕ ಮಾಧ್ಯಮಗಳನ್ನು ವಿನ್ಯಾಸಗೊಳಿಸಲಾಗಿದೆ. ಕೊನೆಯಿಲ್ಲದ ಸಂದೇಶಗಳ ಸರಪಳಿಗಳಲ್ಲಿ ಸಿಲುಕುವ ಈ ವ್ಯಸನಿಗಳು ಜಾಲತಾಣಗಳಲ್ಲಿ ಓಡಾಡುತ್ತಾ ತುಂಡು ಮಾಹಿತಿಗಳನ್ನು ಪಡೆಯುವ ಅರೆಜ್ಞಾನಿಗಳಾಗಿ ಸೂಕ್ಷ್ಮಸಂವೇದನೆ ಕಳೆದುಕೊಳ್ಳುತ್ತಾರೆ. ಬೇರೆಯವರು ನೋಡಿದ್ದು, ಅನುಭವಿಸಿದ್ದು, ಆನಂದಿಸಿದ್ದು ನನಗೆ ದೊರೆಯುತ್ತಿಲ್ಲ ಎನ್ನುವ ಆತಂಕ ಅವರನ್ನು ಕಾಡುತ್ತದೆ. ಇದನ್ನೇ ಫೋಮೊ ಸಿಂಡ್ರೋಮ್ (FOMO: Fear of Missing Out) ಎಂದು ಕರೆಯಲಾಗಿದೆ. ಮಂದಿಯೊಳಗೊಂದಾಗುವ ಒತ್ತಡ ಅವರನ್ನು ಕಾಡುತ್ತದೆ. ಇಂತಹ ವ್ಯಸನಿಗಳೊಡನೆ ಸಾಮಾಜಿಕ, ರಾಜಕೀಯ ವಿಚಾರಗಳ ಗಂಭೀರ ಚರ್ಚೆ ಸಾಧ್ಯವೆ? ಸಾಮಾಜಿಕ ಮಾಧ್ಯಮಗಳು ಸೃಷ್ಟಿಸುವ ಕಾಲ್ಪನಿಕ ಜಗತ್ತು ರಾಜಕೀಯ ಚರ್ಚೆಗಳನ್ನು ವಿಚಾರಶೂನ್ಯ ಮತ್ತು ಹುರುಳಿಲ್ಲದ ತೋರಿಕೆಯ ಕ್ರಿಯೆಗಳನ್ನಾಗಿಸುತ್ತದೆ.

ಅಂತರ್ಜಾಲ ತಂತ್ರಜ್ಞಾನ ಬಿಡುಗಡೆಯ ತಂತ್ರಜ್ಞಾನ ಎಂದು ಆರಂಭದಲ್ಲಿ ಬಣ್ಣಿಸಿದ್ದು ಒಂದು ಮುಗ್ಧ ಆಶಾವಾದವಾಗಿತ್ತು. ಅದು ಯಾರಿಗೂ ಬಿಡುಗಡೆಯನ್ನು ನೀಡಿಲ್ಲ, ನೀಡುವುದೂ ಇಲ್ಲ. ಕಳೆದ ಎರಡು ದಶಕಗಳಿಂದ ವ್ಯಕ್ತಿ ಸ್ವಾತಂತ್ರ್ಯ ಕುಗ್ಗುತ್ತಿದ್ದು ಪ್ರಜಾಪ್ರಭುತ್ವದ ಸೂಚಿ ಇಳಿಮುಖವಾಗಿದೆ. ಸಾಮಾಜಿಕ ಮಾಧ್ಯಮಗಳು ಪ್ರಜಾಪ್ರಭುತ್ವದ ಎಲ್ಲ ನಾಲ್ಕು ಸ್ತಂಭಗಳನ್ನು ದುರ್ಬಲಗೊಳಿಸುತ್ತಿವೆ. ಸರ್ಕಾರಗಳು ಅಂತರ್ಜಾಲ ಸೇವೆಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎಂದು ವಾದಿಸುತ್ತಿದ್ದ ಫೇಸ್‌ಬುಕ್ ಒಡೆಯ ಮಾರ್ಕ್ ಜುಕರ್‌ಬರ್ಗ್ ಈಗ ಸರ್ಕಾರಗಳೇ ಸಾಮಾಜಿಕ ಮಾಧ್ಯಮ ಚಟುವಟಿಕೆಗಳ ಮೇಲೆ ಕಣ್ಣಿಟ್ಟು ನಿರ್ಬಂಧಗಳನ್ನು ಹೇರಬೇಕೆಂದು ಹೇಳುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳನ್ನು ಬಳಸುವುದೆಂದರೆ ಖಾಸಗಿ ಕಾರ್ಪೊರೇಷನ್‌ಗಳು ಮತ್ತು ಸರ್ಕಾರಗಳ ಕಣ್ಗಾವಲಿಗೆ ಗುರಿಯಾಗಿ ವ್ಯಕ್ತಿಗತ ಖಾಸಗಿತನವನ್ನು ಕಳೆದುಕೊಳ್ಳುವುದೆಂದೇ ಅರ್ಥ. ಪ್ರಜಾತಂತ್ರಕ್ಕೆ ಸವಾಲಾಗಿರುವ ಈ ಮಾಧ್ಯಮಗಳನ್ನು ನಿಷೇಧಿಸುವುದು ಅಥವಾ ನಿಯಂತ್ರಿಸುವುದು ಪರಿಹಾರವಲ್ಲ. ಆದರೆ ಅವುಗಳು ಸದ್ಬಳಕೆಯಾಗುವಂತಹ ವ್ಯವಸ್ಥೆಯೊಂದನ್ನು ರೂಪಿಸುವುದು ಇಂದಿನ ಅಗತ್ಯ.



**(ಲೇಖಕರು ಕುವೆಂಪು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ)**

# ಲಂಗರು ಬದಲಾಯಿಸುತ್ತಿರುವ ರಾಷ್ಟ್ರ ರಾಜಕಾರಣ: ಎರಡು ನೋಟಗಳು

ರಾಷ್ಟ್ರದ ರಾಜಕಾರಣದ ಖದರು ನಿರ್ಣಾಯಕವಾಗಿ ಬದಲಾಗುತ್ತಿದ್ದಂತೆ ಅದನ್ನು ವಿವರವಾಗಿ ಮತ್ತು ತಮ್ಮದೇ ವಿಶಿಷ್ಟ ಒಳನೋಟಗಳೊಂದಿಗೆ ನಿರೂಪಿಸುವ ಲೇಖಕರೂ ಮೂಡುತ್ತಿರುವುದು ಸಹಜವೇ. ಅಂತಹ ಇಬ್ಬರು ಲೇಖಕರ ಪುಸ್ತಕಗಳ ಪರಿಚಯ ಇಲ್ಲಿದೆ. ಒಂದು ಇಂಗ್ಲಿಷ್ ಪುಸ್ತಕದ ನೇರ ಪರಿಚಯವಾದರೆ, ಇನ್ನೊಂದು ಹಿಂದಿ ಪುಸ್ತಕದ ಲೇಖಕರೊಡನೆ ಮಾತುಕತೆಯ ರೂಪದಲ್ಲಿದೆ-ಸಂ.

## ೧. 'ಅವರ್ ಹಿಂದೂ ರಾಷ್ಟ್ರ, ವಾಟ್ ಇಟ್ ಈಸ್...' : ಹಿಂದೂರಾಷ್ಟ್ರ ರಾಜಕಾರಣ ಬೆಳೆದು ಬಂದ ದಾರಿ




ಈಗ ಬೆಂಗಳೂರಿನಲ್ಲಿ ನೆಲೆಸಿರುವ ಆಕಾರ್ ಪಟೇಲ್, ಖ್ಯಾತ ಅಂಕಣಕಾರರು ಮತ್ತು ಹಲವು ಇಂಗ್ಲಿಷ್ ಮತ್ತು ಗುಜರಾತಿ ನಿಯತಕಾಲಿಕೆಗಳ ಸಂಪಾದಕರಾಗಿದ್ದವರು. ಸಾದತ್ ಮಾಂಟೋನ ಕಥನೇತರ ಸಾಹಿತ್ಯವನ್ನು ಇಂಗ್ಲಿಷ್‌ಗೆ ಅನುವಾದಿಸಿರುವ ಇವರು ಮಾನವ ಹಕ್ಕುಗಳ ರಕ್ಷಣೆಗೆ ಬದ್ಧವಾಗಿರುವ 'ಅಮ್ನೆಸ್ಟಿ ಇಂಟರ್‌ನ್ಯಾಷನಲ್'ನ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದವರು. ಅವರ ಇತ್ತೀಚಿನ ಈ ಪುಸ್ತಕ ಭಾರತದಲ್ಲಿ ಹಿಂದುತ್ವ ಮತ್ತು ಹಿಂದೂ ರಾಷ್ಟ್ರದ ಹೆಸರಿನಲ್ಲಿ ನಡೆದಿರುವ ಬಹುಸಂಖ್ಯಾತವಾದಿ ರಾಜಕಾರಣದ ಕಾರ್ಯಸೂಚಿಯ ಐತಿಹಾಸಿಕತೆ, ಅದರ ಸಂಘಟನೆ ಮತ್ತು ಅದರ ಯಶಸ್ವೀ ಕಾರ್ಯಾಚರಣೆಯ ವಿಧಾನಗಳು ಮತ್ತು ಅದರ ಇಂದಿನ ಪರಿಣಾಮಗಳ ಬಗ್ಗೆ ಒಂದು ಕ್ರಮಸಹಿತವಾದ ಚಿತ್ರಣ ನೀಡಿ ಇದರ ಅಪಾಯಗಳ ಬಗ್ಗೆ ಒಂದು ಸುಸಂಬದ್ಧ ವಾದ ಮಂಡಿಸುತ್ತದಲ್ಲದೆ, ಇದನ್ನು ಎದುರಿಸಬೇಕಾದ ಬಗೆಯನ್ನೂ ನಿರೂಪಿಸುತ್ತದೆ.

೧೪ ಅಧ್ಯಾಯಗಳಲ್ಲಿ ವಿಂಗಡಿಸಲ್ಪಟ್ಟಿರುವ ೩೫೦ಕ್ಕೂ ಹೆಚ್ಚು ಪುಟಗಳ ಈ ಪುಸ್ತಕ ಜಿನ್ನಾರ ವ್ಯಕ್ತಿತ್ವ, ಅವರ ರಾಜಕಾರಣ, ರಾಷ್ಟ್ರವಿಭಜನೆಯ ಹಿನ್ನೆಲೆ, ಪಾಕಿಸ್ತಾನ ನಿರ್ಮಾಣದ ದುರಂತ, ಹಿಂದೂವಾದದ ಉದಯದ ಬಹುನೆಲೆಯ ರಾಜಕಾರಣ, ಮುಸ್ಲಿಮರ ತುಷ್ಟೀಕರಣದ ಮಿಥ್ಯೆಯ ನಿರ್ಮಾಣ, ಮತೀಯತೆಯ ಪ್ರಚಾರ, ಅಡ್ವಾನಿಯವರ ರಥಯಾತ್ರೆ ಸೃಷ್ಟಿಸಿದ ಮತೀಯ ದಂಗೆಗಳು ಮತ್ತು ಅಹಮದಾಬಾದಿನ ಹತ್ಯಾಕಾಂಡ, ನ್ಯಾಯಾಲಯಗಳ ಪಕ್ಷಪಾತೀಯ ತೀರ್ಪುಗಳು, ಕಾಶ್ಮೀರದ ದುರಂತ ಮತ್ತು ಇತ್ತೀಚಿನ ತ್ರಿವಳಿ ತಲಾಖ್ ಸಂಬಂಧಿತ ಹಸ್ತಕ್ಷೇಪ, ಗೋಹತ್ಯಾ ನಿಷೇಧ ಮತ್ತು ಮತಾಂತರ ನಿರ್ಬಂಧ ಕಾಯಿದೆಗಳ ಹಿಂದಿನ ಅಲ್ಪಸಂಖ್ಯಾತರ ಅಪರಾಧೀಕರಣದ ರಾಜಕಾರಣ ಕುರಿತು ಸಾಕ್ಷ್ಯಾಧಾರಗಳೊಂದಿಗೆ ವಿಸ್ತಾರವಾಗಿ ಬರೆಯುತ್ತಾ ಭಾರತದಲ್ಲಿ ಇಂದು ಅಟ್ಟಹಾಸಗೈಯ್ಯುತ್ತಿರುವ ಬಹುಸಂಖ್ಯಾತವಾದಿ ರಾಜಕಾರಣದ ಇತಿಹಾಸ ಮತ್ತು ವರ್ತಮಾನದ ಮೇಲೆ ವಿಶೇಷ ಬೆಳಕು ಚೆಲ್ಲುತ್ತದೆ.

ದಕ್ಷಿಣ ಏಷ್ಯಾದಲ್ಲಿ ತನ್ನನ್ನು ಸುತ್ತುವರಿದ, ಸರಿಸುಮಾರು ತನ್ನ ಜೊತೆಯೇ ಉದಯಿಸಿದ ದೇಶಗಳ ಸಂವಿಧಾನಗಳು ಹಾಗೂ ನಮ್ಮ ಸಂವಿಧಾನವನ್ನು ಹೋಲಿಸಿ, ಭಾರತದ ಹೆಚ್ಚುಗಾರಿಕೆಯನ್ನೂ ನ್ಯೂನ್ಯತೆಗಳನ್ನೂ ಗಮನಿಸುವ ಪಟೇಲ್ ಬಹುಸಂಖ್ಯಾತರ ಧರ್ಮ ಕೇಂದ್ರಿತ ಸಂವಿಧಾನ ಹೊಂದಿದ ಇತರ ದೇಶಗಳು ಅನುಭವಿಸುತ್ತಿರುವ ಕಷ್ಟ ನಷ್ಟಗಳನ್ನು ಗುರುತಿಸುತ್ತಾರೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿ ಬಿಜೆಪಿಯ ಹಿಂದುತ್ವ ಎಂದರೇನು, ಹಿಂದುರಾಷ್ಟ್ರದ ಸ್ವರೂಪ ಹೇಗಿದೆ ಎಂಬುದನ್ನೇ ಹೇಳದೆ, ಮತಬೇಟೆ ನಡೆಸಿದ ಪರಿಯನ್ನು ವಿವರಿಸುವ ಲೇಖಕರು ಮುಸ್ಲಿಮರಿಂದ ದೇಶ ವಿಭಜನೆ ಆಯಿತು ಎನ್ನುವುದು ತಪ್ಪು ಮತ್ತು ಅದೊಂದು ಕ್ರೂರ ವ್ಯಂಗ್ಯ ಎನ್ನುತ್ತಾರೆ. ಜಿನ್ನಾ ನಾಯಕತ್ವದಲ್ಲಿ ಭಾರತದ ಐಕ್ಯತೆಯನ್ನು ಕಾಪಾಡುವಲ್ಲಿ ಮುಸ್ಲಿಮರ ಪ್ರಯತ್ನ ನಿರಂತರವಾಗಿತ್ತು. ಕ್ಯಾಬಿನೆಟ್ ಕಮಿಷನ್ ಸಲಹೆಯನ್ನು ಮೊದಲು ಒಪ್ಪಿ ನಂತರ ಉಲ್ಟಾ ಹೊಡೆದು, *ಶೇಕಡ ೯೦ರಷ್ಟು ಹಿಂದುಗಳ ಬೆಂಬಲದ ಉದ್ಧಟತನದಿಂದ ಗಣನೀಯ ಜನಸಂಖ್ಯೆಯ ಗಾತ್ರದ ಅಲ್ಪಸಂಖ್ಯಾತರ, ನ್ಯಾಯಯುತ ಬೇಡಿಕೆಗಳನ್ನು ತಿರಸ್ಕರಿಸಿದ್ದು, ವಿಭಜನೆಗೆ ಮುಖ್ಯ ಕಾರಣ. ೧೯೪೦ರ ನಂತರ ತೀವ್ರಗೊಂಡ ಜಿನ್ನಾರ ಮತೀಯ ರಾಜಕೀಯ, ಅವರ ಆ ಹಿಂದಿನ ದಶಕಗಳಲ್ಲಿ ಐಕ್ಯತೆಗಾಗಿ ರಾಜಿ-ಹೊಂದಾಣಿಕೆಗೆ ಮಾಡಿದ ದಿಟ್ಟ ಪ್ರಯತ್ನಗಳನ್ನು ಅಳಿಸಿ ಹಾಕಲು ಸಾಧ್ಯವಿಲ್ಲ. ಅಂತೆಯೇ ಸ್ವಾತಂತ್ರ್ಯಾನಂತರ ಸೆಕ್ಯುಲರ್ ಕಹಳೆ ಊದಿದ ನೆಹರು ಅಥವಾ ಕಾಂಗ್ರೆಸ್‌ನ ಆ ಹಿಂದಿನ ಕೃತ್ಯಗಳನ್ನು ಮರೆಮಾಚಲು ಆಗುವುದಿಲ್ಲ. ಆದಾಗಲೇ ವಿಭಜನೆಯತ್ತ ಹೆಜ್ಜೆ ಹಾಕಿದ ಜಿನ್ನಾರನ್ನು ಕುರಿತು ಸರೋಜಿನಿ ನಾಯ್ಡು ೧೯೪೫ರ ಜನವರಿ ೧೮ರಂದು ಮದ್ರಾಸ್‌ನ ಪತ್ರಿಕಾಗೋಷ್ಠಿಯಲ್ಲಿ, 'ಇಡೀ ಭಾರತದಲ್ಲಿ ಭ್ರಷ್ಟನಾಗಲು ಸಾಧ್ಯವಿಲ್ಲದ ಒಬ್ಬ ವ್ಯಕ್ತಿ ಇದ್ದರೆ, ಅದು ಜಿನ್ನಾ. ನಾನು ಅವರನ್ನು ಒಪ್ಪದಿರಬಹುದು. ಆದರೆ ಪದವಿ, ಗೌರವ ಇನ್ನಾವುದೇ ಆಮಿಷ ಅವರನ್ನು ಸೆಳೆಯಲಾರದು' ಎಂದದ್ದು ಗಮನಾರ್ಹ. ಆದರೆ ಜಿನ್ನಾ ಕಟ್ಟಿದ ಪಾಕಿಸ್ತಾನ ಅವರ ಮರಣಾನಂತರ ಕುಸಿದು ಅಧೋಗತಿ ತಲುಪಿದ್ದು,* ಮತ್ತೊಂದು ದುರಂತ ಕಥನ. ಪಾಕಿಸ್ತಾನ ಇಸ್ಲಾಮ್ ರಾಷ್ಟ್ರದ ಸಂವಿಧಾನ ಅಳವಡಿಸಿಕೊಳ್ಳುವ ಮೂಲಕ ಮುಸ್ಲಿಂ ಪ್ರಾಧಾನ್ಯತೆಯನ್ನು ಬಹಿರಂಗಗೊಳಿಸಿ, 'ಸರ್ವಶಕ್ತನಾದ ಅಲ್ಲಾನ ಕರುಣೆಯಿಂದ ಪಾಕಿಸ್ತಾನಿಗಳನ್ನು ಪವಿತ್ರ ಧಾರ್ಮಿಕ ಬದುಕಿನತ್ತ ನಡೆಸುತ್ತೇವೆ' ಎಂದು ಘೋಷಿಸಿತ್ತು. ಆದರೆ ಅದು ಈಗೇನಾಗಿದೆ ಎಂಬುದು ತಿಳಿದ ವಿಷಯವೇ. ಆದರೆ ಹಿಂದು ಬಹುಸಂಖ್ಯಾತವಾದಿಗಳಿಗೆ ಇಂತಹ ಯಾವುದೇ ಲೋಕೋತ್ತರ ಉದ್ದೇಶಗಳಿರಲಿಲ್ಲ. ಮೊದಲಿನಿಂದಲೂ ನೇತ್ಯಾತ್ಮಕವಾಗಿದ್ದು, ಅಲ್ಪಸಂಖ್ಯಾತರ ವಿರುದ್ಧ ತಮ್ಮ ಗುರಿ ಇಟ್ಟಿದ್ದರು. ದೇಶ ವಿಭಜನೆಯ ಸುಳಿವೂ ಇಲ್ಲದಿದ್ದ ೧೯೨೦ರಲ್ಲೇ ಸಾವರ್ಕರ್ ಘೋಷಿಸಿದಂತೆ "ಹಿಂದು ರಾಷ್ಟ್ರವೆಂಬುದು ಭಾರತ ಬಿಟ್ಟು ಬೇರೆಲ್ಲೂ ಆಗಲು ಸಾಧ್ಯವಿಲ್ಲ... ಇಲ್ಲಿ ಹಿಂದು-ಮುಸ್ಲಿಮರ ಪ್ರತ್ಯೇಕ ಭಾರತಗಳಿವೆ" ಎಂಬುದನ್ನು ನಮ್ಮ ಗಮನಕ್ಕೆ ತರುವ ಆಕಾರ್ ಪಟೇಲ್, ಆರ್ ಎಸ್ ಎಸ್ ಇದನ್ನೇ ತನ್ನ ಎರಡು ದೇಶದ ಸಿದ್ಧಾಂತಕ್ಕೆ ಬೀಜಮಂತ್ರವಾಗಿಸಿಕೊಂಡಿತು ಎನ್ನುತ್ತಾರೆ. ಮುಂದೆ ಅದರ ಸರಸಂಘಚಾಲಕರಾದ ಗೋಲ್ವಾಲ್ಕರ್ ತಮ್ಮ 'ಬಂಚ್ ಆಫ್ ಥಾಟ್ಸ್'ನಲ್ಲಿ ಎತ್ತಿ ಹಿಡಿದ ಬ್ರಾಹ್ಮಣ ಪಾರಮ್ಯ, ವರ್ಣಾಶ್ರಮ ಪ್ರತಿಪಾದನೆ, ಜೈನರು-ಬೌದ್ಧರನ್ನು ಸೆಳೆಯುವ ತಂತ್ರ, ಆದಿವಾಸಿಗಳು-ಬಡಕಟ್ಟು ಜನರನ್ನು ಕುರಿತ ಓಲೈಕೆ ಇವೆಲ್ಲವನ್ನೂ ಸಮರ್ಥವಾಗಿ ಕಟ್ಟಿ ಕಾರ್ಯರೂಪಕ್ಕೆ ತಂದ ದೀನ್‌ದಯಾಳ್ ಉಪಾಧ್ಯಾಯ, ಶ್ಯಾಮಪ್ರಸಾದ್ ಮುಖರ್ಜಿ, ಜನಸಂಘ ಹಾಗೂ ಇಂದಿನ ಬಿಜೆಪಿಗಳ ಗುರಿ ಅಮೂರ್ತವಾದ, ಯಾರ ನಿಲುಕಿಗೂ ಸಿಗದ, ಹಿಂದುತ್ವದ ಜಪ ಮಾಡುತ್ತಲೇ, ಹಿಂದುಗಳನ್ನು ಭಾವೋದ್ರೇಕ, ಉನ್ಮಾದಗಳಿಂದ ದಾರಿ ತಪ್ಪಿಸಿ, ಮುಸ್ಲಿಮರನ್ನು ರಾಜಕೀಯವಾಗಿ ಸದೆಬಡಿಯುವ ರಾಜಕಾರಣವೇ ಆಗಿದೆ ಎಂದು ಲೇಖಕರು ವಿವರಿಸುತ್ತಾರೆ. ಇದರ ಭಾಗವಾಗಿ ೧೮೮೨ರಲ್ಲಿ ದಯಾನಂದ ಸರಸ್ವತಿಯವರು ಸ್ಥಾಪಿಸಿದ, 'ಗೋರಕ್ಷಣೆ ಸಭಾ'ದಿಂದ ಮೊದಲ್ಗೊಂಡು, ಹಲವು ಮತೀಯ ದಂಗೆ, ೩೪೦೦ ಜನರ ಭಾರತೀಯರ ಸಾವಿಗೆ ಕಾರಣವಾದ ಅಡ್ವಾನಿಯವರ ರಥಯಾತ್ರೆವರೆಗಿನ ಬೆಳವಣಿಗೆಗಳ ಕೂಲಂಕಷ ಅಧ್ಯಯನ ಮಾಡಿ ಈಗ ದೆಹಲಿಯಲ್ಲಿ ಸುಭದ್ರವಾಗಿ ತಳವೂರಿದ ಘಟ್ಟದವರೆಗಿನ ಬಹುಸಂಖ್ಯಾತ ಧರ್ಮರಾಜಕಾರಣದ ದಾರಿಯನ್ನು ಈ ಪುಸ್ತಕ ವಿವರಿಸುತ್ತದೆ.



ಕಳೆದೆರಡು ಲೋಕಸಭಾ ಚುನಾವಣೆಗಳ ಬಿಜೆಪಿಯ ದೈತ್ಯ ಬಹುಮತದಲ್ಲಿ ಒಬ್ಬನೇ ಒಬ್ಬ ಮುಸ್ಲಿಮ್ ಪ್ರತಿನಿಧಿಯಿಲ್ಲ. ಉತ್ತರದ ಹಿಂದಿ ಭಾಗದ ನಾಲ್ಕು ಕೋಟಿ ಮತದಾರರು ಒಬ್ಬ ಮುಸ್ಲಿಮ್ ಶಾಸಕನನ್ನು ಆರಿಸಿಲ್ಲ. ಏನನ್ನು ಹೇಳುತ್ತಿದೆ ಇದೆಲ್ಲ? ಎಂದು ಕೇಳುವ ಆಕಾರ್, ಗೋಹತ್ಯೆ ನಿಷೇಧ, ತ್ರಿವಳಿ ತಲಾಕ್‌ನ ಅಪರಾಧಿಕರಣ, ಬಾಬ್ರಿ ಮಸೀದಿ ವಿವಾದ, ೩೭೦ನೇ ವಿಧಿ ರದ್ದುಗೊಳಿಸಿದ್ದು, ಈಗ ಲವ್ ಜಿಹಾದ್, ಇವೆಲ್ಲವುಗಳ ಅನುಷ್ಠಾನದಲ್ಲಿ ಕಾಣುವ ಅಟ್ಟಹಾಸ, ಧಾವಂತ, ಹೇಳುತ್ತಿರುವುದಿಷ್ಟೆ- ನಮಗೆ ಬಹುಮತ ಇರುವುದೇ ಮುಸ್ಲಿಮರನ್ನು ಅವಮಾನಿಸಿ, ಭಯಹುಟ್ಟಿಸಿ, ರಾಜಕೀಯವಾಗಿ ಸದೆಬಡಿಯುವುದು ಎನ್ನುತ್ತಾರೆ, ೧೯೬೫ರಲ್ಲೇ ಚುನಾವಣೆಯಲ್ಲಿ ಬಳಸಿದ 'ಓಂ' ಚಿಹ್ನೆ ಧಾರ್ಮಿಕ ಲಾಂಛನವಲ್ಲ ಎಂದು ತೀರ್ಮಾನಿಸಿದ ಇಲ್ಲಿನ ನ್ಯಾಯಾಂಗ ಯಾವ ರೀತಿ ಬಹುಸಂಖ್ಯಾತರ ಭಾವನೆಗಳಲ್ಲಿ ಶಾಮೀಲಾಗಿ ಹೋಗಿದೆ ಎನ್ನುವುದು ಆತಂಕಕಾರಿ ಸಂಗತಿಯಾಗಿದ್ದು, ಇದೀಗ ದೇಶದ್ರೋಹದ ಆಪಾದನೆಯ ಬಂಧನಗಳೂ ಸೇರಿದಂತೆ ಹಲವು ಪ್ರಕರಣಗಳಲ್ಲಿ ನ್ಯಾಯಾಂಗದ ನಡವಳಿಕೆ ಅನುಮಾನಸ್ಪದವಾಗಿದೆ ಎನ್ನುತ್ತಾರೆ ಲೇಖಕರು.

ಪ್ರತಿಯೊಂದು ವಿಷಯವನ್ನೂ ಸಂವಿಧಾನ ಸಭೆಯ ಚರ್ಚೆಗಳ ಪರಿಪ್ರೇಕ್ಷ್ಯದಲ್ಲಿ ಇತಿಹಾಸ ಹಾಗೂ ವರ್ತಮಾನವನ್ನು ಮುಖಾಮುಖಿಯಾಗಿಸುತ್ತ ಬಹು ತರ್ಕಬದ್ಧವಾಗಿ ಬೆಳೆಯುವ ಈ ಪುಸ್ತಕ, ಭಾರತದ ಸಂವಿಧಾನವನ್ನು ಬಹುಸಂಖ್ಯಾತ ಧಾರ್ಮಿಕ ರಾಜಕಾರಣದ ಗೆದ್ದಲಿನ ಹುಳು ಮುತ್ತಿವೆ ಎಂಬ ಅಂತಿಮ ತೀರ್ಮಾನಕ್ಕೆ ಬರುತ್ತದೆ. ಆದರೆ ಇದನ್ನು ಎದುರಿಸುವ ಬಗೆ? ಜನಸಮೂಹವು ಪೌರತ್ವ ತಿದ್ದುಪಡಿ ಕಾಯ್ದೆ ಸಂಬಂಧವಾಗಿ ಆರಂಭಿಸಿದ್ದ ಹೋರಾಟದ ಮಾದರಿಯೇ ನಮ್ಮ ಆಶಾಕಿರಣ ಎನ್ನುತ್ತಾರೆ ಆಕಾರ್. ಕೇವಲ ನಾವಷ್ಟೇ ಅಲ್ಲ, ಪಾಕಿಸ್ತಾನಿಯರು ಖಂಡಿತಾ ಓದಲೇಬೇಕಾದ ಪುಸ್ತಕ ಇದು.

**-ಬಿ.ಎಸ್. ದಿವಾಕರ**

# ೨. ಸಂಘಂ ಶರಣಂ ಗಚ್ಛಾಮಿ': ಆರೆಸ್ಸೆಸ್ ಬೆಳೆಯುತ್ತಿದೆ, ಬದಲಾಗುತ್ತಿದೆ; ಗಮನಿಸದಿದ್ದರೆ ದಾರಿ ತಪ್ಪೇವು!



**ಇಂದಿನ ಹಿಂದೂವಾದಿ ರಾಜಕಾರಣದ ಚಾಲಕ ಶಕ್ತಿ ಎಂದು ಹೇಳಲಾಗುವ ಆರೆಸ್ಸೆಸ್ ಬಗ್ಗೆ ಸೆಕ್ಯುಲರ್‌ವಾದಿಗಳು ಸದಾ ಖಂಡನೆಯ ಮಾತುಗಳಲ್ಲಿ ನಿರತರಾಗಿದ್ದಾರೆಯೇ ಹೊರತು ಅದರ ನಿಜ ಅರಿಯುವ ಪ್ರಯತ್ನ ಆಗಿಲ್ಲ. ೨೫ ವರ್ಷಗಳಿಂದ ಈ ಸಂಘಟನೆ ಕುರಿತು ಅಧ್ಯಯನ ಮಾಡಿ ಈಗ 'ಸಂಘಂ ಶರಣಂ ಗಚ್ಛಾಮಿ'; ಎಂಬ ಹಿಂದಿ ಪುಸ್ತಕ ಪ್ರಕಟಿಸಿರುವ ಎನ್‌ಡಿಟಿವಿ ಪತ್ರಕರ್ತ ವಿಜಯ್ ತ್ರಿವೇದಿಯವರು 'ದ ವೈರ್‌'ಗಾಗಿ ಅರ್ಫಾನ್ ಖಾನುಮ್ ಅವರೊಂದಿಗೆ ನಡೆಸಿದ ಮಾತುಕತೆಯ ಸಂಕ್ಷಿಪ್ತ ಕನ್ನಡ ರೂಪ ಇಲ್ಲಿದೆ.**-ಸಂ.

**೨೫ ವರ್ಷಗಳಿಂದ ಆರೆಸ್ಸೆಸ್ ಬಗ್ಗೆ ಅಧ್ಯಯನ-ಸಂಶೋಧನೆ ಮಾಡುತ್ತಿರುವ ನಿಮಗೆ ಈ ಸಂಘಟನೆ ಇಂದು ಹೇಗಿದೆ ಎನ್ನಿಸುತ್ತಿದೆ?**

ಒಂದು ಕಾಲದಲ್ಲಿ ರೈಸಿನಾ ಹಿಲ್ (ರಾಷ್ಟ್ರಪತಿ ಭವನ) ಮತ್ತು ಸೌತ್‌ಬ್ಲಾಕ್(ಗೃಹಖಾತೆ)ನಿಂದ ನಿರ್ಬಂಧಗಳಿಗೆ ಒಳಗಾಗಿದ್ದ ಈ ಸಂಘಟನೆ ಈಗ ಈ ಎರಡು ಕಡೆ ಮಾತ್ರವಲ್ಲ ರಾಜ್ಯಗಳ ರಾಜಭವನಗಳವರೆಗೂ ತನ್ನ ಪ್ರಭಾವವನ್ನು ಹರಡಿಕೊಂಡಿದೆ. ಕೇವಲ ೨೦-೨೫ ವರ್ಷಗಳ ಹಿಂದೆ ಆರೆಸ್ಸೆಸ್‌ನ ಒಂದು ಪ್ರಕಟಣೆಯನ್ನು ಮುದ್ರಿಸಲು ಆಸಕ್ತಿ ತೋರದ ಪತ್ರಕರ್ತರು ಇಂದು ಅದಕ್ಕಾಗಿ ಮುಗಿಬೀಳುತ್ತಿದ್ದಾರೆ. ದೊಡ್ಡ ದೊಡ್ಡ ಪತ್ರಿಕೆಗಳ ಸಂಪಾದಕರುಗಳೂ ಈ ಸಂಘಟನೆಯ ಉನ್ನತ ಪದಾಧಿಕಾರಿಗಳ ಭೇಟಿಗಾಗಿ ಕನಿಷ್ಟ ಮೂರು ತಿಂಗಳು ಕಾಯಬೇಕಾಗಿದೆ. ಅವರು ಈಗ ತಮ್ಮ ಜವಾಬ್ದಾರಿ-ಕರ್ತವ್ಯಗಳಲ್ಲಿ ಅಷ್ಟು ವ್ಯಸ್ತರಾಗಿದ್ದಾರೆ

೨೦೧೪ರಿಂದ ೨೦೧೯ರವರೆಗೆ ಆರೆಸ್ಸೆಸ್ಸಿನ ಬಲ ಸಾಕಷ್ಟು ಹೆಚ್ಚಿದೆ. ಈಗ ನೋಡಿ ಅದರ ಕಾರ್ಯಸೂಚಿಯ ಬಹಳಷ್ಟು ಕಾರ್ಯಕ್ರಮಗಳು ಜಾರಿಯಾಗಿವೆ. ಅವರಿಗೆ ನರೇಂದ್ರ ಮೋದಿ ನಮ್ಮ ಕಾರ್ಯಕ್ರಮಗಳನ್ನು ಜಾರಿಗೆ ತರಬಲ್ಲ ನಾಯಕ ಎಂಬುದು ಗೊತ್ತಾಗಿದೆ. ೨೦೧೩ರಲ್ಲೇ ಆರೆಸ್ಸೆಸ್ ರಾಷ್ಟ್ರದ ರಾಜಕೀಯ ಪರಿಸ್ಥಿತಿ ಅಂದಾಜು ಮಾಡಿತು. ೨೦೧೪ರಲ್ಲೂ ಯುಪಿಎಯನ್ನು ಗೆಲ್ಲಲು ಬಿಟ್ಟರೆ ತನ್ನ ವಿಚಾರಧಾರೆಯ ಭವಿಷ್ಯ ಕಷ್ಟಕ್ಕೆ ಸಿಲುಕುತ್ತದೆ ಎಂದು ನಿರ್ಧರಿಸಿದ ಅದು ಮೋದಿಯರನ್ನು ಬಿಜೆಪಿ ಪ್ರಧಾನಿ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿತು ಮತ್ತು ಅವರ ಗೆಲುವಿಗಾಗಿ ಪೂರ್ಣ ಬದ್ಧತೆಯಿಂದ ಕೆಲಸ ಮಾಡಿತು.

**ಸಾಂಸ್ಕೃತಿಕ ಸಂಘಟನೆ ಎಂದು ಹೇಳಿಕೊಳ್ಳುವ ಆರೆಸ್ಸೆಸ್ಸುಗೆ ಈ ರಾಜಕಾರಣದ ಗೊಡಬೆಯೇಕೆ?**

೧೯೨೫ರಲ್ಲಿ ಆರೆಸ್ಸೆಸ್‌ನ್ನು ಸ್ಥಾಪಿಸುವವರೆಗೆ ಅದರ ಸ್ಥಾಪಕ ಹೆಡ್ಗೆವಾರ್ ಅವರು ಕಾಂಗ್ರೆಸ್ ಕಾರ್ಯಕರ್ತರಾಗಿದ್ದರು. ಆದರೆ ಅವರಿಗೆ ಆಗ ಹಿಂದೂ ಧರ್ಮೀಯರ ಬಲವರ್ಧನೆಗೆ ಒಂದು ಸಂಘಟನೆ ಅವಶ್ಯವೆಂದು ಅನಿಸಿ ಇದನ್ನು ಸ್ಥಾಪಿಸಿದರು. ಗಾಂಧೀಜಿ ಕೊಲೆಯಾದಾಗ ಇದು ನ್ಯಾಯಾಂಗದ ತೀರ್ಪಿನ ಮೂಲಕ ಅ ಆರೋಪದಿಂದ ಮುಕ್ತವಾಯಿತಾದರೂ, ಕೆಲಕಾಲ ಸರ್ಕಾರದಿಂದ ಬಹಿಷ್ಕಾರವನ್ನು ಅನುಭವಿಸಬೇಕಾಗಿ ಬಂದಾಗ ಹಿಂದೂಪರ ಧ್ವನಿ ಸಂಸತ್ತಿನಲ್ಲಿ ಕೇಳಬೇಕೆಂದು ಆಗ ಸರಸಂಘಚಾಲಕರಾಗಿದ್ದ ಗೋಳ್ವಲ್ಕರ್ ಶ್ಯಾಮಾಪ್ರಸಾದ್ ಮೂಖರ್ಜಿಯವರ ಮೂಲಕ ಜನಸಂಘವೆಂಬ ರಾಜಕೀಯ ಪಕ್ಷದ ಸ್ಥಾಪನೆಗೆ ಕಾರಣರಾದರು. ಅದೀಗ ಭಾಜಪವಾಗಿ ಬೆಳೆದಿದೆ.

**ಭಾರತ ಸೆಕುಲರ್ ರಾಷ್ಟ್ರ ಎಂದು ಘೋಷಿತವಾದ ಮೇಲೂ ಆರೆಸ್ಸೆಸ್ ಮುಸ್ಲಿಮರನ್ನು ಒಳಗೊಳ್ಳದೇ ಇರುವುದು ಏತಕ್ಕೆ?**

ಬಾಳಾಸಾಹೇಬ್ ದೇವರಸ್ ಸರಸಂಘಚಾಲಕರಾಗಿದ್ದಾಗ ಮುಸ್ಲಿಮರನ್ನು ಸಂಘದೊಳಕ್ಕೆ ಒಳಗೊಳ್ಳಿಸಿಕೊಳ್ಳುವ ಪ್ರಯತ್ನ ಮಾಡಿದರು. ಆದರೆ ಆರೆಸ್ಸೆಸ್‌ನ ಪ್ರತಿನಿಧಿ ಸಭೆ ಅವರ ಪ್ರಸ್ತಾವವನ್ನು ಒಪ್ಪಲಿಲ್ಲ. ನಂತರ ಸುದರ್ಶನ್ ಸರಸಂಘಚಾಲಕರಾಗಿದ್ದಾಗ ಇಂತಹುದೊಂದು ಪ್ರಯತ್ನದ ಫಲವಾಗಿ 'ಭಾರತೀಯ ಮುಸ್ಲಿಂ ರಾಷ್ಟ್ರೀಯ ಮಂಚ' ಅಸ್ತಿತ್ವಕ್ಕೆ ಬಂತು. ಆದರೆ ಅದಕ್ಕೆ ಸಂಘ ಪರಿವಾರದ ಅಂಗಸಂಸ್ಥೆಯಾಗಿ ಮಾನ್ಯತೆ ನೀಡಿಲ್ಲ. ಮಂಚ್‌ನ ಮುಖ್ಯಸ್ಥರಾದ ಇಂದ್ರೇಶ್‌ಕುಮಾರ್ ಪ್ರಕಾರ ಆರೆಸ್ಸೆಸ್‌ನಲ್ಲಿ ಇದಕ್ಕೆ ಸಾಕಷ್ಟು ತಾತ್ವಿಕ ವಿರೋಧವಿದೆ.

**ನಿಮ್ಮ ಜನ್ಮಭೂಮಿ ಪುಣ್ಯಭೂಮಿ ಎರಡೂ ಭಾರತವಾಗದಿರುವ ಹೊರತು ನೀವು ಪೂರ್ಣ ಭಾರತೀಯರಲ್ಲ ಎಂಬುದು ಆರೆಸ್ಸೆಸ್ ನಿಲುವು ಎಂಬ ಅಭಿಪ್ರಾಯವಿದೆಯಲ್ಲ?.**

ಇಲ್ಲ ಇದು ತಪ್ಪು ತಿಳುವಳಿಕೆ. ಅದು ಸಾವರ್ಕರ್ ಅವರ ವಾದವಾಗಿತ್ತು. ಆದರೆ ಆರೆಸ್ಸೆಸ್ ಅದನ್ನು ಒಪ್ಪುವುದಿಲ್ಲ. ಹಾಗೇ ಸಾವರ್ಕರ್ ಕೂಡ ಆರೆಸ್ಸೆಸ್ಸನ್ನು ಒಪ್ಪುತ್ತಿರಲಿಲ್ಲ. ಹೆಡ್ಗೆವಾರ್ ಅವರು ತಾವು ಸ್ವತಃ ಹೋಗಿ ಸಾವರ್ಕರ್‌ರನ್ನು ಆರೆಸ್ಸಗೆ ಆಹ್ವಾನಿಸಿದರು. ಆದರೆ ಧಾರ್ಮಿಕ ಆಚರಣೆಗಳನ್ನು ಒಪ್ಪದ ಅವರು ಅವರ ಆಹ್ವಾನವನ್ನು ತಿರಸ್ಕರಿಸಿದರು.

**ಹಾಗಾದರೆ ಮುಸ್ಲಿಮರನ್ನು ಕುರಿತು ಆರೆಸ್ಸೆಸ್‌ನ ಪ್ರಸ್ತುತ ನಿಲುವೇನು?**

ಎರಡು ವರ್ಷಗಳ ಹಿಂದೆ ಸರಸಂಘಚಾಲಕರಾದ ಮೋಹನ ಭಾಗವತ್ ಅವರು ಹೇಳಿದ್ದು, ಈ ದೇಶದಲ್ಲಿ ಹುಟ್ಟಿದವರೆಲ್ಲರೂ ಭಾರತೀಯರೇ. ಅವರು ಇನ್ನೂ ಮುಂದೆಹೋಗಿ, ಯಾರಿಗಾದರೂ ತಾವು ಹಿಂದೂಸ್ತಾನಿ ಎಂದು ಹೇಳಿಕೊಳ್ಳಲು ಮುಜುಗರವಾದರೆ ಅವರು ಭಾರತೀಯ ಎಂದು ಹೇಳಿಕೊಳ್ಳಬಯಸಿದರೆ ತಮ್ಮ ಯಾವ ಆಕ್ಷೇಪಣೆಯೂ ಇಲ್ಲ ಎಂದರು. ಅಷ್ಟೇ ಅಲ್ಲ, ಅವರು ಇನ್ನೂ ಎಷ್ಟು ಮುಂದೆ ಹೋಗಿ ಮಾತಾಡಿದರೆಂದರೆ, ಮುಸಲ್ಮಾನರನ್ನು ಒಳಗೊಳ್ಳದ ಹಿಂದುತ್ವ ಅಪೂರ್ಣ ಎಂದರು. ಈ ಮಾತಿನ ಬಗ್ಗೆ ನಾನು ೧೯೧೮ರಿಂದಲೇ ಸಂಘದ ನಾಯಕರ ಬಳಿ, ಅವರೆಲ್ಲ ಅದನ್ನು ಎಷ್ಟು ಒಪ್ಪುತ್ತಾರೆಂದು ತಿಳಿಯಲು ಚರ್ಚಿಸುತ್ತಲೇ ಇದ್ದೇನೆ. ನನಗೆ ತಿಳಿದುಬಂದ ಮಟ್ಟಿಗೆ ಕಾರ್ಯಕರ್ತರ ಮಟ್ಟದವರೆಗೆ ಈ ಭಾವನೆ ತಲುಪಿಲ್ಲ. ಅವರ ಮಧ್ಯೆ ಭಾಗವತ್‌ರೇಕೆ ಹೀಗೆ ಹೇಳಿದರು ಎಂಬ ಆಶ್ಚರ್ಯ ಇದೆ. ನಾನು ಈ ಬಗ್ಗೆ ಉನ್ನತ ನಾಯಕರೊಬ್ಬರ ಜತೆ ಮಾತಾಡಿದಾಗ ಅವರು ಹೇಳಿದ ಈ ಮಾತು ಗಮನಾರ್ಹ: 'ಸರಸಂಘಚಾಲಕರು ಬದಲಾಗುತ್ತಾ ಹೋಗುತ್ತಾರೆ. ಹಾಗೇ ಸಿದ್ಧಾಂತವೂ ಬದಲಾಗುತ್ತಾ ಹೋಗುತ್ತದೆ.'




ಹೀಗೆ ಆರೆಸ್ಸೆಸ್ ಬದಲಾಗುತ್ತಿದೆ. ಹಾಗಾಗಿ ಅದನ್ನು ಅರ್ಥಮಾಡಿಕೊಳ್ಳುವ ನಮ್ಮ ಬಗೆಯೂ ಬದಲಾಗುತ್ತಾ ಹಗಬೇಕು. ಇಲ್ಲದಿದ್ದರೆ ಅವರ ಹಾದಿಯನ್ನು ಅರಿಯುವಲ್ಲಿ ನಾವು ದಿಕ್ಕೆಡುತ್ತೇವೆ..

**ಆರೆಸ್ಸೆಸ್ ಒಂದು ಬ್ರಾಹ್ಮಣವಾದಿ ಸವರ್ಣೀಯರ ಸಂಘಟನೆಯಲ್ಲವೆ?**

ಹೌದು, ಅಂತಹ ಬಿಂಬ ಇದೆ. ಆದರೆ ಅದು ಬದಲಾಗುತ್ತಿದೆ. ನಿಜ, ಈಗ ಕೆಲವು ಉನ್ನತ ಪದಾಧಿಕಾರಗಳಲ್ಲಿ ಬ್ರಾಹ್ಮಣರೇ ಇದ್ದಾರೆ. ೨೦೨೫ರಲ್ಲಿ ಭಾಗವತ್ ಅವರು ನಿವೃತ್ತರಾಗುವವರೆಗೂ ಮತ್ತು ಆನಂತರದ ಐದು-ಹತ್ತು ವರ್ಷಗಳೂ ಪರಿಸ್ಥಿತಿ ಹಾಗೇ ಮುಂದುವರೆಯಬಹುದು. ಆದರೆ ಶಾಶ್ವತವಾಗಲ್ಲ. ಸಂಘದ ಉನ್ನತ ನಾಯಕತ್ವ ಬಹು ಹಿಂದೆ ಕಂಡುಕೊಂಡ ಒಂದು ಸತ್ಯವೆಂದರೆ, ಎಲ್ಲಿಯವರೆಗೆ ಹಿಂದೂಗಳು ಜಾತಿಗಳಾಗಿ ಒಡೆದಿರುತ್ತಾರೋ ಅಲ್ಲಿಯವರೆಗೆ ಅವರ ಒಗ್ಗಟ್ಟು ಸಾಧ್ಯವಿಲ್ಲ. ಹಾಗಾಗಿ ಅದು ಕೆಳಮಟ್ಟದಲ್ಲಿ ಹಿಂದುಳಿದವರು, ಆದಿವಾಸಿಗಳು ಮತ್ತು ದಲಿತರನ್ನು ಒಳಗೊಳ್ಳುವ ಕೆಲಸ ಮಾಡಿದೆ. ಇವರಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮೋಹನ ಭಾಗವತರು ಒಂದು ಹಳ್ಳಿಗೆ ಒಂದು ಸ್ಮಶಾನ, ಒಂದು ಭಾವಿ ಮತ್ತು ಒಂದು ಗುಡಿ ಎಂಬ ಅಭಿಯಾನ ಆರಂಭಿಸಿದ್ದು ಜಾತಿ ಪದ್ಧತಿಯನ್ನು ಕೊನೆಗೊಳಿಸುವ ಕಟಿಬದ್ಧತೆಯನ್ನು ಪ್ರದರ್ಶಿಸಿದ್ದಾರೆ. ಹಾಗಾಗಿ ಇಂದು ರಂಗಾಹರಿಯವರಂತಹ ದಲಿತರು ಸಂಘದ ಉನ್ನತ ಶ್ರೇಣಿಯ ನಾಯಕರಲ್ಲೊಬ್ಬರಾಗಿ ಮೂಡಿದ್ದಾರೆ. ಸಂಘದ ದಿನನಿತ್ಯದ ನಡಾವಳಿಯ ಸಂವಿಧಾನ ಎನ್ನಬಹುದಾದ, ಅಂದರೆ ಧ್ವಜ ರಕ್ಷಣೆ, ಆರೋಹಣ, ಅವರೋಹಣ, ವೇದಿಕೆ ಮೇಲಿನ ಕಾರ್ಯಕ್ರಮಗಳ ವಿಧಾನ ಇತ್ಯಾದಿಗಳ ಸಂಹಿತೆಯನ್ನು ರೂಪಿಸಿರುವವರು ಅವರೇ. ಇಂದು ಆರೆಸ್ಸೆಸ್‌ನ ಆಧಾರ ಗ್ರಂಥ ಗುರೂಜಿ ಅವರ 'ಬಂಚ್ ಆಫ್ ಥಾಟ್ಸ್ ಅಲ್ಲ. 'ಗುರೂಜಿ: ಸಮಗ್ರ' ಎಂಬ ಗ್ರಂಥ. ಅದರ ಸಂಪಾದಕರೂ ರಂಗಾಹರಿಯವರೇ. ಸಂಘದ ದಾರಿ ಬದಲಾಗುತ್ತಿದೆ. ಇಂದು ಬಹಳ ಊರುಗಳ ಸಂಘದ ಶಾಖೆಗಳ ಪ್ರಮುಖರು ಹಿಂದುಳಿದವರು ಮತ್ತು ದಲಿತರೇ ಆಗಿದ್ದಾರೆ

**ಆದರೆ ಇದು ಸಂಸ್ಕೃತೀಕರಣದ ಮೂಲಕ ಏಕರೂಪಿ ಹಿಂದೂ ಧರ್ಮವನ್ನು ಸ್ಥಾಪಿಸಿ ಹಿಂದೂ ರಾಷ್ಟ್ರ ಸ್ಥಾಪಿಸುವ ಪ್ರಯತ್ನವಲ್ಲವೆ?**

ಹಿಂದೂ ರಾಷ್ಟ್ರ ಸ್ಥಾಪನೆ ಈ ದೇಶದ ವೈವಿಧ್ಯ ಮತ್ತು ಚರಿತ್ರೆಯ ಹಿನ್ನೆಲೆಯಲ್ಲಿ ಕಷ್ಟ. ಅದು ಹಿಂಸಾಚಾರಕ್ಕೆ ಎಡೆಗೊಡಬಹುದು, ಹಾಗಾಗಿ ಆರೆಸ್ಸೆಸ್ ಹಿಂದೂ ರಾಷ್ಟ್ರವಾದವನ್ನು ಒಂದು ಪ್ರಭುತ್ವವಾದಕ್ಕಿಂತ ಹೆಚ್ಚಾಗಿ ಸಾಂಸ್ಕೃತಿಕವಾದವಾಗಿ ನೋಡಬಯಸುತ್ತದೆ. ಜನ ಹಿಂದೂ ಜೀವನ ವಿಧಾನ ಮತ್ತು ನಂಬಿಕೆಗಳನ್ನು ಗೌರವಿಸಬೇಕೆಂದು ಬಯಸುತ್ತದೆ. ಗುಲಾಮಿ ನೆನಪುಗಳನ್ನು ಊರುಗಳ, ರಸ್ತೆಗಳ. ಕಟ್ಟಡಗಳ ಹೆಸರುಗಳನ್ನು ಬದಲಾಯಿಸುವ ಮೂಲಕ ಅಳಿಸಿ ಹಾಕಬಯಸುತ್ತದೆ. ರಾಮಮಂದಿರ ಆಯಿತು, ೩೭೦ನೇ ವಿಧೇಯಕ ರದ್ದತಿ ಆಯಿತು. ಅದರ ಮುಂದಿನ ಕಾರ್ಯಕ್ರಮ ಬಹುಶಃ ಸಮಾನ ನಾಗರಿಕ ಸಂಹಿತೆಯ ಜಾರಿ. ಅದೇನೂ ಹಿಂದೂರಾಷ್ಟ್ರದ ಒಂದು ಸಿದ್ಧ ಮಾದರಿಯನ್ನು ಹೊಂದಿಲ್ಲ. ಆದರೆ ಹೀಗೆ ಕ್ರಮೇಣ ತನ್ನ ಕಲ್ಪನೆಯ ಹಿಂದೂ ಧರ್ಮದ ಎರಕವನ್ನು ಸಾಂಸ್ಕೃತಿಕವಾಗಿ ಸಾಧಿಸಬಹುದು.

**ಆದರೆ ಸಂಘ ಪರಿವಾರದ ಒಳಗಿಂದಲೇ ಅನ್ಯಮತೀಯರ ಮೇಲೆ ಒತ್ತಾಯದ, ಹಿಂಸೆಯ ಮಾತುಗಳು ಕೇಳಿಬರುತ್ತಿವೆಯಲ್ಲ? ಗುಂಪು ಹಲ್ಲೆ, ಹತ್ಯೆಗಳು ನಡೆದಿವೆಯಲ್ಲ?**

ಇವು ಪರಿವಾರದ ಅಂಚಿನ ಶಕ್ತಿಗಳ ಚಟುವಟಿಕೆಗಳು. ಅವು ತಮ್ಮದೇ ಸರ್ಕಾರವೆಂಬ ಉನ್ಮಾದಕ್ಕೆ ಸಿಕ್ಕಿವೆ. ಅವನ್ನು ಸಂಘದ ಮತ್ತು ಸರ್ಕಾರದ ನಾಯಕತ್ವ ಖಂಡಿಸುತ್ತಿದೆ. ಆದರೆ ಖಂಡಿಸಿದರಷ್ಟೇ ಸಾಲದು. ಕಠಿಣ ಕ್ರಮಗಳನ್ನೂ ತೆಗೆದುಕೊಳ್ಳಬೇಕು. ಆಗ ಮಾತ್ರ ಅವರ ಖಂಡನೆ ವಿಶ್ವಾಸಾರ್ಹ ಎನಿಸುವುದು. ಅದಿನ್ನೂ ಸಾಧ್ಯವಾಗದಿರುವುದೇ ಇಂದಿನ ದುರಂತ.

(ಕನ್ನಡ ಸಂಕ್ಷಿಪ್ತ ರೂಪ: **ಡಿಎಸ್ಸೆನ್**)

**ಸಮಕಾಲೀನ-೩.**

# ಸಾಂಕ್ರಾಮಿಕಗಳನ್ನು ದೂರವಿರಿಸಬೇಕೆ? ಪ್ರಾಣಿಗಳ ಕಾರ್ಖಾನೆ ಕೃಷಿ ಕೈಬಿಡಿ...

**–ವೆಂಡಿ ಓರೆಂಟ್**



ಕಳೆದ ಒಂದು ಶತಮಾನದಿಂದೀಚೆಗೆ ಹಲವು ಸಾಂಕ್ರಾಮಿಕಗಳು ಲಕ್ಷಾಂತರ ಜನರನ್ನು ಆಹುತಿ ತೆಗೆದುಕೊಂಡು ಹೋಗಿದ್ದು, ಇಂದು ಕೂಡ ಕೋವಿಡ್ ಸರಣಿಯ ವೈರಾಣು ಜಗತ್ತಿನಾದ್ಯಂತ ಮತ್ತೆ ಲಕ್ಷಾಂತರ ಜನರನ್ನು ಕೊಲ್ಲುತ್ತಿರುವ ಸಂದರ್ಭದಲ್ಲೂ ಮನುಷ್ಯ ಈ ಅನಾಹುತಗಳಿಗೆ ಕಾರಣಗಳು ತನ್ನ ಮುಂದಿದ್ದರೂ ಕಲಿಯಬೇಕಾದ ಪಾಠವನ್ನು ಕಲಿಯಲು ನಿರಾಕರಿಸುತ್ತಿರುವ ದುರಂತವನ್ನು ಈ ಲೇಖನ ಹೇಳುತ್ತದೆ.-ಸಂ



ಹಲವಾರು ಸಾಕಾಣಿಕಾ ಕೇಂದ್ರಗಳಲ್ಲಿ ಸಾಕಿದ ಪ್ರಾಣಿಗಳಲ್ಲಿ ಕರೋನಾ ವೈರಾಣು ತಳಿಗಳು ಕಂಡುಬಂದ ನಂತರ ಡೆನ್ಮಾರ್ಕ್‌ನಲ್ಲಿ ಹೆಚ್ಚೂ ಕಡಿಮೆ ಎಲ್ಲ–ಸುಮಾರು ೧೭ ಮಿಲಿಯನ್‌ಗಳಷ್ಟು–ಮಿಂಕ್(ಬಹಳ ಉತ್ತಮವಾದ ತುಪ್ಪುಳಕ್ಕಾಗಿ ಸಂಗೋಪನೆ ಮಾಡಲಾಗುವ ನೀರನಾಯಿಯಂತಹ ಪ್ರಾಣಿ)ಗಳನ್ನು ನಾಶಮಾಡಲಾಯಿತು. ಪಂಜರಗಳಲ್ಲಿ ಇಡುಕಿರಿದಂತೆ ಕೂಡಿಟ್ಟ ಪ್ರಾಣಿಗಳಲ್ಲಿ ರೋಗವು ವೇಗವಾಗಿ ಹರಡಿ ರೂಪಾಂತರಗೊಳ್ಳಲು ಸಾಧ್ಯವಾಯಿತು. ಕೆಲವು ಸಂದರ್ಭಗಳಲ್ಲಿ ಪ್ರಾಣಿಗಳ ನಿರ್ವಹಣೆಯಲ್ಲಿ ತೊಡಗಿದ್ದ ಮನುಷ್ಯರಿಗೂ ಅದು ಹರಡಿತ್ತು.. ಮಿಂಕ್‌ಗಳಿಗೆ ಹರಡಿದ 'ಕ್ಲಸ್ಟರ್–೫' ಎಂದು ಕರೆಯಲಾಗುವ ಒಂದು ವಿಧದ ವೈರಾಣು, ಪ್ರತಿಕಾಯಗಳಿಗೆ (antibody) ಸ್ಪಂದಿಸದೇ ಇದ್ದು, ಲಸಿಕೆಗಳು ಉಂಟುಮಾಡುವ ರೋಗನಿರೋಧಕತೆಗೆ ಸವಾಲಾಗುವ ಮೂಲಕ ಮನುಷ್ಯರಿಗೆ ಮಾರಕವಾಗಿದ್ದು ಕನಿಷ್ಠ ೧೨ ಜನರಿಗೆ ಹರಡಿದೆ ಎಂದು ಗೊತ್ತಾದ ಕೂಡಲೇ ಪ್ರಾಣಿಗಳ ವಧೆಗೆ ಆದೇಶ ನೀಡಲಾಗಿದೆ, ವಧೆ ಪ್ರಾರಂಭವಾಗಿದೆ.

ಗ್ರೀಸ್, ನೆದರ್ಲೆಂಡ್, ಐರ್ಲೆಂಡ್, ಮತ್ತು ಇತರೆ ದೇಶಗಳು ಕೂಡ ತಮ್ಮಲ್ಲಿ ಸಾಕಿದ ಪ್ರಾಣಿಗಳನ್ನು ವಧಿಸಿದವು, ಸಹಸ್ರಾರು ಜನ ಕೆಲಸ ಕಳೆದುಕೊಂಡರು, ಒಂದು ಉದ್ಯಮವೇ ನಾಶವಾಯಿತು.

ನಾವು ಪಾಠ ಕಲಿಯುವುದು ಯಾವಾಗ? ಎಂದು ನಮ್ಮನ್ನು ನಾವೇ ಕೇಳಿಕೊಳ್ಳುವ ಕಾಲವೀಗ ಬಂದಿದೆ. ಪ್ರಾಣಿಗಳಿಂದ ಮನುಷ್ಯರಿಗೆ ರೋಗ ಹರಡುವುದು ಯಾವಾಗಲೂ ನಡೆಯುತ್ತಲೇ ಇದೆ, ಮಾನವ ಇತಿಹಾಸದಲ್ಲೇ ಅತ್ಯಂತ ಮಾರಕ ಸಾಂಕ್ರಾಮಿಕ ರೋಗವಾದ ಪ್ಲೇಗ್ ಪ್ರಾಣಿಗಳಿಂದ, ಸಾಮಾನ್ಯವಾಗಿ ಇಲಿಗಳಿಂದ ಹರಡುತ್ತದೆ. ಚಿಂಪಾಂಜಿಗಳ ಬೇಟೆಯಾಡಿ ತಿಂದ ಕಾರಣ ಅದರ ಮಾಂಸದಲ್ಲಿದ್ದ ಒಂದು ವಿಧದ ವೈರಾಣುವಿನಿಂದ ಹೆಚ್‌ಐವಿ ಪ್ರಾರಂಭವಾಯಿತು. ಎಬೋಲಾ ಕೂಡ ಪ್ರಾಣಿಗಳಿಂದ ಮಾನವನಿಗೆ ಹರಡಬಲ್ಲ ರೋಗ. ಪ್ರತಿಯೊಂದು ಸಾಂಕ್ರಾಮಿಕ ರೋಗವೂ ಮಾನವರಿಗೆ ಹರಡಿರುವುದು ಪ್ರಾಣಿಗಳ ಬೇಟೆಯಿಂದ. ಆದರೆ ಮಾನವ ಸ್ವಾಸ್ಥ್ಯಕ್ಕೆ ಅತಿ ದೊಡ್ಡ ಅಪಾಯ ವನ್ಯ ಪ್ರಾಣಿಗಳ ಮೂಲಕ ಬರುವುದಕ್ಕಿಂತ ಹೆಚ್ಚು ನಾವು ಪ್ರಾಣಿಗಳನ್ನು ಸಾಕಾಣಿಕೆ ಮಾಡಿ ಮಾರಾಟ ಮಾಡುವ ರೀತಿಯಿಂದ ಬರಲಿದೆ.

ಸಾರ್ಸ್–ಕೋವ್–೧ ಚೀನಾದ ಗಾಂಗ್‌ಡಾಂಗ್‌ನ ಬಹು ದೊಡ್ಡ ಜೀವಂತ ಪ್ರಾಣಿಗಳ ಕಿಕ್ಕಿರಿದ ಮಾರುಕಟ್ಟೆಯಿಂದ ೨೦೦೨ರಲ್ಲಿ ಹರಡಿದ್ದು ನಮಗೆ ಒಂದು ಪಾಠ ಕಲಿಸಬೇಕಿತ್ತು. ಬಾವಲಿಗಳ ಮೂಲಕ ಬಂದಿತೆಂದು ಭಾವಿಸಲಾಗಿರುವ ಸಾರ್ಸ್ ಕರೋನಾ ವೈರಾಣು ಬಹುಶಃ ಚೀನಾದಲ್ಲಿ ವನ್ಯ ಮಾಂಸಕ್ಕಾಗಿ ಸಾಕಾಣಿಕೆ ಮಾಡಲಾಗುವ ಸಿವೆಟ್ ಬೆಕ್ಕುಗಳಲ್ಲಿ ವೃದ್ಧಿಸಿ ಅಲ್ಲಿಂದ ಮಾನವನಿಗೆ ಹರಡಿರಬೇಕು. ಈಗಾಗಲೇ ಮನುಷ್ಯರಿಗೆ ಹರಡಿಯಾದ ಮೇಲೆ, ಯಾವ ಪ್ರಯೋಜನವೂ ಇಲ್ಲದೆ ಇದ್ದರೂ ರೋಗ ಹರಡುವುದನ್ನು ತಡೆಯಲೆಂದು ಹತ್ತು ಸಾವಿರ ಸಿವೆಟ್ ಬೆಕ್ಕುಗಳನ್ನು ದೊಣ್ಣೆಯಿಂದ ಬಡಿದು, ಉಸಿರುಗಟ್ಟಿಸಿ, ಬೇಯಿಸಿ, ಬೆಂಕಿ ಹಚ್ಚಿ, ಕೊಲ್ಲಲಾಯಿತು.

ಸಾರ್ಸ್– ಕೋವ್–೧ ಜಗತ್ತಿನಾದ್ಯಂತ ಹರಡಿ ೮೦೦೦ ಜನರನ್ನು ರೋಗಗ್ರಸ್ತರನ್ನಾಗಿಸಿ ೭೭೪ ಜನರ ಸಾವಿಗೆ ಕಾರಣವಾದರೂ ಅದೊಂದು ನಿಜವಾದ ಸಾಂಕ್ರಾಮಿಕ ರೋಗವೋ ಅಥವಾ ಪರಿಣಾಮಕಾರಿ ಮಾನವ ರೋಗಕಾರಕವೋ ಆಗಲಿಲ್ಲ, ಅದರ ಸೋಂಕು ಹರಡುವ ವೇಗ ಬಹಳ ಕಡಿಮೆ ಇತ್ತು, ಮತ್ತು ಪ್ರಾಸಂಗಿಕವಾಗಿ ಸೋಂಕಿತರನ್ನು ಕ್ವಾರಂಟೈನ್ ಮಾಡುವ ಮೂಲಕ, ಏಕಾಂತದಲ್ಲಿರಿಸುವ ಮೂಲಕ ನಿವಾರಣೆ ಮಾಡಲಾಯಿತು.

ಸಾರ್ಸ್–ಕೋವ್–೧, ಒಂದು ಎಚ್ಚರಿಕೆಯಾಗಬೇಕಿತ್ತು. ಆದರೆ ಯಾರೂ ಅದಕ್ಕೆ ಸಾಕಷ್ಟು ಗಮನ ನೀಡಲಿಲ್ಲ. ಮತ್ತು ಬಹುಬೇಗನೇ ಎನ್ನಬಹುದಾದ ಸಮಯದಲ್ಲೇ ಚೀನಾದ ಜೀವಂತ ಪ್ರಾಣಿಗಳ ಮಾರುಕಟ್ಟೆಯನ್ನು ಪುನಃ ತೆರೆಯಲಾಯಿತು.

ಮಾರಕ ಹಕ್ಕಿಜ್ವರದ ಭೀಕರತೆಯು ಭಾರೀ ಗಾತ್ರದ, ಕಿಕ್ಕಿರಿದು ತುಂಬಿದ ಆಗ್ನೇಯ ಏಷ್ಯದ ಕೈಗಾರಿಕಾ ಸಾಕಾಣಿಕಾ ಕೇಂದ್ರಗಳಲ್ಲಿ ತೀವ್ರ ವಿಷಮತೆಯಾಗಿ ರೂಪುಗೊಂಡಿತು. ಇದು ನಮಗೆ ಪಾಠವಾಗಬೇಕಿತ್ತು.

ಪ್ರಪಂಚವು ಅತ್ಯಂತ ಮಾರಕವಾದ ಹಕ್ಕಿ ಜ್ವರದ ಸಾಂಕ್ರಾಮಿಕದ ಭೀತಿಯಿಂದ ಸ್ಥಂಭೀಭೂತವಾಗಿದ್ದ ೨೦೦೪ರಿಂದ ೨೦೦೭ರವರೆಗಿನ ಕಾಲವೊಂದಿತ್ತು. ಆ ಹೆಚ್೫ ಎನ್೧ ಎಂಬ ಜ್ವರ ನಗಣ್ಯವೆನಿಸಿತ್ತು,ನಿಜ; ಏಕೆಂದರೆ ವೈರಾಣು ಮಾನವನ ದೇಹದ ಜೀವ ಕೋಶಗಳನ್ನು ಪ್ರವೇಶಿಸುವುದಕ್ಕೆ ಅನುವಾಗುವ ಗ್ರಾಹಕಗಳು (receptors) ಶ್ವಾಸಕೋಶದ ತೀರಾ ಒಳ ಭಾಗದಲ್ಲಿದ್ದುದರಿಂದ ಮಾನವನಿಂದ ಮಾನವನಿಗೆ ಅದು ಹರಡುವುದು ಬಹುತೇಕ ಅಸಾಧ್ಯವೇ ಆಗಿತ್ತು. ಆದರೆ ಅದಕ್ಕೆ ಸಮಾನವಾಗಿ ಅಪಾಯಕಾರಿಯಾದ ಹಕ್ಕಿ ಜ್ವರಗಳು ದೈತ್ಯಗಾತ್ರದ ಕೋಳಿ ಸಾಕಾಣಿಕಾ ಕೇಂದ್ರಗಳಲ್ಲಿ ಮತ್ತೆ ಮತ್ತೆ ಹುಟ್ಟಿವೆ, ಮಿಲಿಯನ್‌ಗಟ್ಟಲೆ ಕೋಳಿಗಳನ್ನು ಕೊಲ್ಲಲಾಗಿದೆ. ಪ್ರತಿಯೊಂದು ಸಲವೂ ಕೆಲವು ಜನ ಮನುಷ್ಯರೂ ಪ್ರಾಣ ಕಳೆದುಕೊಂಡಿದ್ದಾರೆ ಅದರೂ ನಾವು ಏನನ್ನೂ ಕಲಿಯಲಿಲ್ಲ.

೨೦೦೯ರಲ್ಲಿ ಹೆಚ್೧ಎನ್೧ ಸಾಂಕ್ರಾಮಿಕ ರೋಗವು ಮೆಕ್ಸಿಕೋ ದೇಶದ ವೆರಾಕ್ರೂಜ್ ಎಂಬ ಸ್ಥಳದಲ್ಲಿರುವ ದೈತ್ಯ ಹಂದಿ ಸಾಕಾಣಿಕಾ ಕೇಂದ್ರದಲ್ಲಿ ಹುಟ್ಟಿತು. ಈ ಸಾಕಾಣಿಕಾ ಕೇಂದ್ರವು 'ಸ್ಮಿತ್‌ಫೀಲ್ಡ್ ಫಾರ್ಮ್ಸ್' ಎಂಬ ಬೃಹತ್ ಸಂಘಟಿತ ವ್ಯಾಪಾರೀ ಸಂಸ್ಥೆಯ ಪಾಲುದಾರಿಕೆ ಉಳ್ಳದ್ದು. ಈ ಸಾಂಕ್ರಾಮಿಕವು ಪ್ರಪಂಚದಾದ್ಯಂತ ಹರಡಿ ಸಹಸ್ರಾರು ಜೀವಗಳನ್ನು ಬಲಿ ಪಡೆಯಿತು. ಇದೊಂದು ಸಾಧಾರಣ ಸಾಂಕ್ರಾಮಿಕ ಎನ್ನಬೇಕು. ಏಕೆಂದರೆ ಈ ಹಿಂದೆ ಬಂದಿದ್ದ ಹೆಚ್೧ಎನ್೧ ನಿಂದ ಮೂಡಿದ್ದ ರೋಗ ನಿರೋಧಕ ಶಕ್ತಿಯಿಂದಾಗಿ ಎಷ್ಟೋ ಹಿರಿಯರು ಬಚಾವಾದರು. ಅದರೂ ನಾವು ಪಾಠ ಕಲಿಯಲಿಲ್ಲ.

ಭಾರೀ ಸಂಖ್ಯೆಯ ಪ್ರಾಣಿಗಳನ್ನು ಇಕ್ಕಟ್ಟಾದ ಎಡೆಗಳಲ್ಲಿ ಇಡಿಕಿರಿದು ಕೂಡಿಹಾಕುವುದು ಮಾರಕ ರೋಗಗಳನ್ನು ಉತ್ಪನ್ನ ಮಾಡುತ್ತದೆಂಬ ವಿಚಾರವು ಕಣ್ಣು ಕುಕ್ಕುವಷ್ಟು, ಭಯ ಹುಟ್ಟಿಸುವಷ್ಟು ಸ್ಪಷ್ಟವಾಗಿದ್ದರೂ, ದೈತ್ಯಾಕಾರದ ಕೈಗಾರಿಕಾ ಸಾಕಾಣಿಕಾ ಕೇಂದ್ರಗಳು ಉಳಿದುಕೊಂಡಿವೆ. ಸಾಂಕ್ರಾಮಿಕ ರೋಗಗಳು ಹುಟ್ಟಿ ಹರಡುವುದು ಪುನರಾವರ್ತನೆಯಾಗುತ್ತಲೇ ಇದೆ. ಕೈಗರಿಕಾ ಸಾಕಾಣಿಕಾ ಕೇಂದ್ರಗಳು ಇರುವಷ್ಟು ಕಾಲವೂ ಅದು ಮುಂದುವರಿಯುತ್ತದೆ.

ಸೌಮ್ಯ ವೈರಾಣು ತಳಿಗಳು ಕೂಡ ಕೈಗಾರಿಕಾ ಸಾಕಾಣಿಕಾ ಕೇಂದ್ರಗಳಿಗೆ ವನ್ಯ ಹಕ್ಕಿಗಳ ಮೂಲಕ ಪ್ರವೇಶಗೊಂಡಾಗ, ಪ್ರಾಣಿಗಳ ಇಡುಕಿರಿದ ಸ್ಥಿತಿಯ ಕಾರಣ, ಸೌಮ್ಯ ವೈರಾಣುವೇ ಮಾರಕ ತಳಿಯಾಗಿ ರೂಪಾಂತರಗೊಳ್ಳುವುದನ್ನು ಅನಿವಾರ್ಯವಾಗಿಸುತ್ತದೆ, ಏಕೆಂದರೆ ವನ್ಯ ಹಕ್ಕಿಗಳಲ್ಲಿ ವೈರಾಣು ಹರಡಲು ಹಕ್ಕಿಗಳು ಚಲಿಸುವುದು ಅನಿವಾರ್ಯವಾದಂತೆ ಕೈಗಾರಿಕಾ ಸಾಕಾಣಿಕಾ ಕೇಂದ್ರಗಳಲ್ಲಿ ಇಡುಕಿರಿದ ಸ್ಥಿತಿಯಲ್ಲಿ ಬೆಳೆಯುವ ಪ್ರಾಣಿಗಳು ಆಚೀಚೆ ಓಡಾಡುವುದೇ ಇಲ್ಲವಾದ್ದರಿಂದ, ಅತ್ಯಂತ ಮಾರಕ ವೈರಾಣು ಕೂಡ ಸುಲಭವಾಗಿ ಒಂದು ಪ್ರಾಣಿಯಿಂದ ಮತ್ತೊಂದಕ್ಕೆ ಹರಡಬಲ್ಲದು.

ಕೋವಿಡ್ – ೧೯ ಸಾಂಕ್ರಾಮಿಕ ರೋಗಕ್ಕೆ ಕಾರಣವಾದ ಸಾರ್ಸ್–ಕೋವ್–೨ ಒಂದು ಸಾವಿರ ಮಳಿಗೆಗಳನ್ನು ಹೊಂದಿರುವ; ಹಲವಾರು ಜಾತಿಗಳ ಅಸಂಖ್ಯಾತ ಪ್ರಾಣಿಗಳ ಮಾರಾಟದ ಒಳಾಂಗಣ ಮಾರುಕಟ್ಟೆಯಲ್ಲಿ ಹುಟ್ಟಿದೆ ಎಂದು ನಂಬಲಾಗುತ್ತದೆ. ಅಂತಹ ಸ್ಥಿತಿಯಲ್ಲಿ ವೈರಾಣು ಹರಡುವುದನ್ನು ನಿರೀಕ್ಷಿಸದೇ ಇನ್ನೇನು ಮಾಡಲಾದೀತು. ಅದು ಅನಿವಾರ್ಯವೂ ಕೂಡ.ಈ ಹೊಸ ಸಾಂಕ್ರಾಮಿಕ ರೋಗದಿಂದ ಪ್ರಪಂಚದಾದ್ಯಂತ ಒಂದು ಮಿಲಿಯನ್‌ಗಿಂತಲೂ ಹೆಚ್ಚು ಜನ ಮೃತರಾಗಿದ್ದು, ವೈರಾಣು ತುಸುವಾದರೂ ಸೌಮ್ಯವಾಗುವ ಲಕ್ಷಣಗಳು ಕಾಣದಿರುವುದರಿಂದ ಈಗ ಸಾಯುವ ಸರದಿ ಮಿಂಕ್‌ಗಳದ್ದು.



ಮಾರಕ ವೈರಾಣುಗಳು ಹುಟ್ಟುವುದಕ್ಕೆ, ಹರಡುವುದಕ್ಕೆ, ಅನಿವಾರ್ಯವಾಗುವಂತಹ ಸ್ಥಿತಿಯಲ್ಲಿ ಪ್ರಾಣಿಗಳನ್ನು ಸಾಕುವುದನ್ನು ನಾವು ಯಾವಾಗ ನಿಲ್ಲಿಸುತ್ತೇವೋ?

(ಲೇಖಕಿ ಅಮೆರಿಕಾದ ಖ್ಯಾತ ಮಾನವಶಾಸ್ತ್ರಜ್ಞೆಯೂ ವಿಜ್ಞಾನ ಲೇಖಕಿ ಮತ್ತು ಅಂಕಣಕಾರ್ತಿಯೂ ಆಗಿದ್ದಾರೆ)

**(ಕೃಪೆ: ಜನತಾ, ಡಿಸೆಂಬರ್ ೧೩, ೨೦೨೦**

**ಕನ್ನಡಕ್ಕೆ: ಎಂ. ರಾಜು)**

೩ನೇ ಪುಟದಿಂದ)

ಸುಲಭ ರಾಜಕಾರಣದ ಸಾಧನವಾದ ಇತ್ತೀಚಿನ ವರ್ಷಗಳಲ್ಲಿ ಈ ಜಾತಿ-ಪಂಗಡಗಳ ಪಟ್ಟಿಗೆ ಹೊಸ ಹೊಸ ಜಾತಿ-ಸಮುದಾಯಗಳನ್ನು ಅಗತ್ಯ ಅಧ್ಯಯನ-ಔಪಚಾರಿಕತೆಗಳಿಲ್ಲದೆ ಅವಸರರವಸರವಾಗಿ ಸೇರಿಸುತ್ತಾ ಹೋದದ್ದು ಇರಬಹುದು. ಈ ಸಂಗತಿಯನ್ನೂ ಆಯೋಗ ಪರಿಶೀಲಿಸಿ ಈ ಪಟ್ಟಿಯನ್ನು ಪುನರ್‌ಪರಿಶೀಲಿಸುವಂತೆ ಸರ್ಕಾರಕ್ಕೆ ಸಲಹೆ ಮಾಡಬಹುದು.

ಇನ್ನೊಂದು ಸಂಗತಿ ಎಂದರೆ, ಪರಿಶಿಷ್ಟ ಜಾತಿ-ಪಂಗಡಗಳ ಮೀಸಲಾತಿ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಿದರೆ, ಗರಿಷ್ಠ ಮೀಸಲಾತಿ ಪ್ರಮಾಣವಾಗಿ ಸರ್ವೋಚ್ಚ ನ್ಯಾಲಯವು ನಿಗದಿ ಮಾಡಿರುವ ಗಡಿರೇಖೆಯ ಮೇಲೆ ಒತ್ತಡ ಬಿದ್ದು ಇತರ ಮೀಸಲಾತಿಗಳ ಪ್ರಮಾಣದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಬಹುದು ಅಥವಾ ನಿಗದಿತ ಗರಿಷ್ಠ ಮೀಸಲಾತಿಯನ್ನು ಹೆಚ್ಚಿಸುವ ಸಾಧ್ಯತೆಯನ್ನೂ ತೆರೆಯಬಹುದು. ಆಯೋಗ ಇದರ ಸಾಧಕ-ಬಾಧಕಗಳನ್ನೂ ಪರಿಶೀಲಿಸಿ ತನ್ನ ಶಿಫಾರ್ಸುಗಳನ್ನು ರೂಪಿಸಬೇಕಾಗುತ್ತದೆ.

ಮೂರನೆಯ ಸಂಗತಿ ಎಂದರೆ, ಜನಸಂಖ್ಯಾ ಪ್ರಮಾಣದ ಮೀಸಲಾತಿ ಎಂಬುದನ್ನು ಒಂದು ತತ್ವವಾಗಿ ಒಪ್ಪಿಕೊಳ್ಳಲಾಯಿತು ಎಂದರೆ, ಜಾತಿ ಮೀಸಲಾತಿಯ ವ್ಯಾಪ್ತಿಗೆ ಬರುವ ಪ್ರತಿ ಜಾತಿಯೂ ಅದನ್ನು ಆಗ್ರಹಿಸಲಾರಂಭಿಸುತ್ತದೆ. ಇದು ಅಂತಿಮವಾಗಿ, ಯಾವುದರ ದುಷ್ಪರಿಣಾಮಗಳ ನಿವಾರಣೆಗಾಗಿ ಮೀಸಲಾತಿಯನ್ನು ಜಾರಿಗೆ ತರಲಾಯಿತೋ ಆ ಜಾತಿ ಸಮಾಜವನ್ನು ಗಟ್ಟಿಗೊಳಿಸುವುದರಲ್ಲಿ ಅದು ಸಫಲವಾಗುತ್ತದಷ್ಟೆ.

ಆದುದರಿಂದ ತಮ್ಮ ಆಯೋಗಕ್ಕೆ ನನ್ನ ಸಲಹೆ ಏನೆಂದರೆ, ನಮ್ಮ ರಾಜ್ಯದ ಮಟ್ಟಿಗಾದರೂ ನಮ್ಮ ಪರಿಶಿಷ್ಟ ಜಾತಿ-ಪಂಗಡಗಳು ಈವರೆಗೆ ಅನುಭವಿಸಿರುವ ಮೀಸಲಾತಿಯಿಂದಾಗಿ ಈ ಪಂಗಡಗಳು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಳಿಸಿರುವ ಮಾನ್ಯತೆಗಳ (ಅಕ್ಷರತೆ, ಉದ್ಯೋಗ ವಲಯಗಳಲ್ಲಿ ಏರಿರುವ/ಇಳಿದಿರುವ ಮಟ್ಟ, ಸಾಹಿತ್ಯ-ಸಂಸ್ಕೃತಿ-ಲಲಿತ ಕಲೆ-ಕ್ರೀಡೆ-ರಾಜಕಾರಣ-ವ್ಯಾಪಾರ-ಉದ್ಯಮ-ಸಂಪತ್ತಿನ ಶೇಖರಣೆ-ವರಮಾನ/ಇತರೆ ತೆರಿಗೆ ಪಾವತಿ-ಭ್ರಷ್ಟಾಚಾರ ಮತ್ತು ಅಪರಾಧ ಕ್ಷೇತ್ರಗಳಲ್ಲಿನ ಅವುಗಳ ಸ್ಥಾನಮಾನಗಳ ಗಳಿಕೆ/ಇಳಿಕೆಗಳ ಪ್ರಮಾಣಗಳಿಗೆ ಸಂಬಂಧಪಟ್ಟಂತೆ ವೈಜ್ಞಾನಿಕ ಆಧಾರದಲ್ಲಿಸೂಚ್ಯಂಕಗಳನ್ನು ರೂಪಿಸಿ, ಇವು ಈ ಸಮುದಾಯಗಳಿಗೆ ಉನ್ನತೀಕರಣದ/ಸಮಾನತೆಯ ಸಾಧ್ಯತೆಗಳ ಪ್ರಮಾಣವನ್ನು ಹೆಚ್ಚಿಸಿವೆಯೇ, ಇಲ್ಲವೆ ಎಂಬುದನ್ನು ನಿರ್ಧರಿಸಿ, ಅದರ ಆಧಾರದ ಮೇಲೆ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸುವ ಅಥವಾ ಇಳಿಸುವ ಬಗ್ಗೆ ಶಿಫಾರ್ಸು ಮಾಡಬಹುದು.

ಮೀಸಲಾತಿಯ ಉದಾತ್ತ ಮತ್ತು ಅಂತರ್ಗತ ಉದ್ದೇಶಗಳ ಸರಿಯಾದ ಗ್ರಹಿಕೆ, ಇದರ ಜಾರಿಯ ಅವಧಿ ಹೆಚ್ಚಿದಷ್ಟೂ ಅದರ ಪ್ರಮಾಣ ಕಡಿಮೆಯಾಗುತ್ತಾ ಹೋಗಬೇಕೆಂಬುದನ್ನೇ ಹೇಳುತ್ತದೆ ಎಂಬುದು ನನ್ನ ಅಭಿಪ್ರಾಯ. ಇದಕ್ಕೆ ಅಡ್ಡಿಯಾಗಿರುವ ಅಂಶಗಳನ್ನು ಆಯೋಗ ಗುರುತಿಸಿ ಅವುಗಳ ಪರಿಹಾರಕ್ಕಾಗಿ ಸಲಹೆಗಳನ್ನು ನೀಡಬಹುದಾಗಿದೆ. ಅಂತಿಮವಾಗಿ ಹೇಳಬೇಕಾದ ಮಾತೆಂದರೆ ಮೀಸಲಾತಿ ಕುರಿತ ಚರ್ಚೆಯ ಯಾವತ್ತಿನ ಕೇಂದ್ರ ವ್ಯಕ್ತಿಯಾದ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೇಂದ್ರ ಆಶಯವಾದ 'ಜಾತಿ ವಿನಾಶ'ದತ್ತ ನಮ್ಮ ಹೆಜ್ಜೆಗಳು ಇವೆಯೇ? ಅಥವಾ ಅದಕ್ಕೆ ವಿರುದ್ಧ ದಿಕ್ಕಿನಲ್ಲಿವೆಯೇ? ಎಂಬುದನ್ನು ನಾವು ಪ್ರತಿ ಹೆಜ್ಜೆ ಇಡುವಾಗಲೂ ಪರಿಶೀಲಿಸಿಕೊಳ್ಳಬೇಕಿದೆ.

ಇಷ್ಟು ಯೋಚಿಸಿ ಹೇಳಲು ಅನುವು ಮಾಡಿಕೊಟ್ಟ ತಮಗೆ ಹೃತ್ಪೂರ್ವಕ ವಂದನೆಗಳು.

ವಿಶ್ವಾಸದ

**(ಡಿ.ಎಸ್. ನಾಗಭೂಷಣ)**

---

೨ನೇ ಪುಟದಿಂದ)

ಎಂದು ಅವಿನಾಶ್ ಅವರು ಎತ್ತುವ ಪ್ರಶ್ನೆ ಬಹಳ ಮುಖ್ಯವಾದದ್ದು. ಅದಕ್ಕೆ ಉತ್ತರವಾಗಿ ಅವರು ಸೂಚಿಸಿರುವ ಎರಡು ಸಾಧ್ಯತೆಗಳಲ್ಲಿ 'ಧರ್ಮದ ಒಳಗೆ ಇರುವ ಅಂಶ'ವೇ ಪ್ರಧಾನ ಎನ್ನುವುದು ನನ್ನ ಅಭಿಪ್ರಾಯ. ಮುಸ್ಲಿಂ ಮತಾಚರಣೆಯ ರಾಜಕೀಯ ಚರಿತ್ರೆ ಕಳವಳಕಾರಿಯಾಗಿದೆ. ಆ ಚರಿತ್ರೆಯು, ಜೀವನಕೇಂದ್ರಿತ ಮತವನ್ನು ಬೆಳೆಸುವ ಬದಲು ಮತಕೇಂದ್ರಿತ ಜೀವನವನ್ನು ವಿಜೃಂಭಿಸಿದೆ. ಈ ಅಭಿಪ್ರಾಯಕ್ಕೆ ಬರಲು 'ಆತಂಕಿತ ಹಿಂದೂ' ಆಗಬೇಕಿಲ್ಲ. 'ಆತಂಕಿತ ಮನುಷ್ಯ'ನಾದರಷ್ಟೇ ಸಾಕು.

ಇನ್ನು, ಸೆಕ್ಯುಲರಿಸಂನ ವಾಡಿಕೆಯ ವ್ಯಾಖ್ಯಾನಗಳನ್ನು ಉಳಿಸಿ, ಬೆಳೆಸುತ್ತಲೇ ಹೊಸ ನುಡಿಗಟ್ಟುಗಳನ್ನು ಟಂಕಿಸುವ ಅವಶ್ಯಕತೆ ಇದೆ. ಶಾಸ್ತ್ರಬದ್ಧ ಧರ್ಮಕ್ಕೆ ಬದಲಾಗಿ ಚಲನಶೀಲ ಧರ್ಮಕ್ಕೆ ಆದ್ಯತೆ, ಒಂದಿಷ್ಟು ನಾಸ್ತಿಕವಾದಿ ಧೋರಣೆ, ಆಧುನಿಕ ವಿಜ್ಞಾನದ ವಿಧಾನಕ್ರಮಗಳ ಪರಿಚಯ, ಸಂಸ್ಕೃತಿಯ ಬಹುತ್ವದ ನೆಲೆಗಳ ಅಧ್ಯಯನ ಮತ್ತು ಪ್ರತಿಪಾದನೆ, ದಿನನಿತ್ಯದ ಬದುಕಿನಲ್ಲಿ ಮತಾಚರಣೆಗಿಂತ ಆರ್ಥಿಕ, ಸಾಮಾಜಿಕ, ಮಾನವೀಯ ಸಂಬಂಧಗಳ ಪಾತ್ರವು ಅಧಿಕ ಎಂದು ಮನಗಾಣಿಸುವುದು ; ಇವಿಷ್ಟು ಸೆಕ್ಯುಲರಿಸಂ ಅನ್ನು ಹೊಸ ಬೇಡಿಕೆಗೆ ತಕ್ಕಂತೆ ಸಜ್ಜುಗೊಳಿಸಲು ನೆರವಾಗುತ್ತವೆ ಎಂದು ನಂಬಿದ್ದೇನೆ.

**-ಅಮರ್ ಬಿ. ಬೆಂಗಳೂರು**

೭ನೇ ಪುಟದಿಂದ)

ಇದು ಉದ್ಯಮಿಗಳ ಪ್ರವೇಶಕ್ಕಿಂತಲೂ ಅಪಾಯಕಾರಿಯಾದ ಬೆಳವಣಿಗೆ. ಜನಾಭಿಪ್ರಾಯವೇ ಪ್ರಜಾಪ್ರಭುತ್ವದ ಬುನಾದಿ. ರಾಜಕಾರಣಿಗಳ ಮತ್ತು ಅವರಿಗೆ ನಿಷ್ಠರಾಗಿರುವ ಉದ್ಯಮಿಗಳ ಒಡೆತನದಲ್ಲಿರುವ ಮಾಧ್ಯಮಗಳು ತಿರುಚಿದ ಜನಾಭಿಪ್ರಾಯಗಳನ್ನು ಉತ್ಪಾದಿಸುತ್ತಿವೆ. ಚಿಂತಕ ನೋಮ್ ಚೋಮ್ ಸ್ಕಿ ಬಹಳ ಹಿಂದೆಯೇ 'ಸಮ್ಮತಿಯ ಉತ್ಪಾದನೆ'ಯ ಬಗ್ಗೆ ಎಚ್ಚರಿಸಿರುವುದು ನಿಜವಾಗುತ್ತಿದೆ. ಇತ್ತೀಚೆಗೆ ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ಬಗ್ಗೆ ರಿಲಯನ್ಸ್ ಒಡೆತನದ ನ್ಯೂಸ್ ೧೮ ಚಾನೆಲ್‌ಗಳು ದೇಶಾದ್ಯಂತ ತಮ್ಮಲ್ಲಿ ಕೆಲಸ ಮಾಡುವವರಿಂದಲೇ ಸಮೀಕ್ಷೆ ನಡೆಸಿ ದೇಶದ ರೈತರಲ್ಲಿ ಬಹುಪಾಲು ಮಂದಿ ಕೃಷಿ ಕಾನೂನುಗಳ ಪರವಾಗಿದ್ದಾರೆ ಎಂಬ ವರದಿಯನ್ನು ತಮ್ಮ ಚಾನೆಲ್‌ಗಳಲ್ಲಿಯೇ ಬಿಡುಗಡೆ ಮಾಡಿತ್ತು.

ಮಾಧ್ಯಮ-ಉದ್ಯಮ-ರಾಜಕಾರಣದ ಅಪವಿತ್ರ ಮೈತ್ರಿಕೂಟದಿಂದ ಏನೆಲ್ಲ ಅನಾಹುತವಾಗಬಹುದೆನ್ನುವ ಆತಂಕಗಳಿದ್ದವೋ ಅವೆಲ್ಲವೂ ನಿಜವಾಗತೊಡಗಿದೆ. ಇದಕ್ಕೆ ಇತ್ತೀಚಿನ ಉದಾಹರಣೆ ರಿಪಬ್ಲಿಕ್ ನ್ಯೂಸ್ ಚಾನೆಲ್‌ನ ಸಂಪಾದಕ ತನ್ನ ಚಾನೆಲ್‌ನ ಟಿಆರ್‌ಪಿ ಹೆಚ್ಚಿಸಲು ಬಾರ್ಕ್ ಸಂಸ್ಥೆಯ ಸಿಇಒ ಜೊತೆ ನಡೆಸಿರುವ ವಾಟ್ಸಪ್ ಮಾತುಕತೆ. ವಿರೋಧ ಪಕ್ಷವಾಗಿ ಕೆಲಸ ಮಾಡಬೇಕಾಗಿದ್ದ ಮಾಧ್ಯಮಗಳು ಬಹಳ ಮುಖ್ಯವಾಗಿ ನ್ಯೂಸ್ ಚಾನೆಲ್‌ಗಳು ಆಳುವ ಪಕ್ಷದ ತುತ್ತೂರಿಗಳಾಗಿವೆ.

ಲಾಭದ ನಿರೀಕ್ಷೆಯಿಲ್ಲದೆ ಮಾಧ್ಯಮ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಧಾಂಗುಡಿಯಿಡುತ್ತಿರುವ ಉದ್ಯಮಿಗಳು ಮತ್ತು ರಾಜಕಾರಣಿಗಳನ್ನು ಕಂಡು ಹತ್ತು ವರ್ಷಗಳ ಹಿಂದೆಯೇ ಟೆಲಿಕಾಮ್ ನಿಯಂತ್ರಣ ಪ್ರಾಧಿಕಾರ (TRAI) ಕಳವಳ ವ್ಯಕ್ತಪಡಿಸಿತ್ತು. ಭಾರತೀಯ ಪ್ರಜಾಪ್ರಭುತ್ವದ ಮುಖ್ಯ ಆಶಯಗಳಾದ ಬಹುತ್ವ ಮತ್ತು ವಿವಿಧತೆಯ ರಕ್ಷಣೆಯ ದೃಷ್ಟಿಯಿಂದ ಮಾಧ್ಯಮಗಳು ಅರ್ಧ ಡಜನ್ ಒಡೆಯರ ಕೈಯಲ್ಲಿರುವುದು ಅತ್ಯಂತ ಅಪಾಯಕಾರಿ. ಈ ರೀತಿ ಬೇರೆ ಉದ್ಯಮಗಳಲ್ಲಿರುವವರು ಮಾಧ್ಯಮ ಕ್ಷೇತ್ರದಲ್ಲಿ ಪ್ರವೇಶಿಸುತ್ತಿರುವುದನ್ನು ನಿಯಂತ್ರಿಸಲು 'ಮಿಶ್ರ ಒಡೆತನ'ದ ಬಗ್ಗೆ ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ' ಎಂದು ಎಂಟು ವರ್ಷಗಳ ಹಿಂದೆಯೇ ಟ್ರಾಯ್ ಎಚ್ಚರಿಸಿತ್ತು. ಇದೇ ಅಭಿಪ್ರಾಯದ ವರದಿಯನ್ನು ಲೋಕಸಭೆಯ ಮಾಹಿತಿತಂತ್ರಜ್ಞಾನದ ಸ್ಥಾಯಿ ಸಮಿತಿ ಕೂಡಾ ನೀಡಿತ್ತು. ಆದರೆ ತೊಡೆಯ ಮೇಲೇರಿ ಕೂತ ಮಾಧ್ಯಮಗಳ ತಪ್ಪು ಹುಡುಕುವ ಧೈರ್ಯ ಈಗಿನ ಪ್ರಭುತ್ವಕ್ಕಾದರೂ ಎಲ್ಲಿದೆ?

ಜೇಮ್ಸ್ ಮುರ್ಡೋಕ ಹೇಳಿದ್ದ ನಿದ್ದೆಯಲ್ಲಿದ್ದ ಹುಲಿ ಮೈಕೊಡವಿ ಎದ್ದು ನಿಂತು ಕಂಡಕಂಡದ್ದನ್ನೆಲ್ಲ ಆಪೋಶನ ಪಡೆಯುತ್ತಿದೆ. ಕಾಡಿನ ಹುಲಿಗೆ ನಾಗರೀಕವಾದ ಒಂದು ಶಿಸ್ತಿರುತ್ತದೆ. ಹೊಟ್ಟೆ ಹಸಿದಾಗ ಮಾತ್ರ ಅದು ಬೇಟೆಯಾಡುತ್ತದೆ, ಕಾಡಿನ ಎಲ್ಲ ಪ್ರಾಣಿಗಳನ್ನು ನಾಶಮಾಡಿ ತಾನೊಂದೇ ಬದುಕಬೇಕೆಂಬ ಸ್ವಾರ್ಥಪೂರಿತ ದುರಾಲೋಚನೆ ಅವುಗಳಲ್ಲಿರುವುದಿಲ್ಲ. ಆದರೆ ಜೇಮ್ಸ್ ಮುರ್ಡೋಕ ಹೇಳಿರುವ ಮಾಧ್ಯಮೋದ್ಯಮದ ಹುಲಿ ಹಾಗಲ್ಲ. ಇದು ಸರ್ವವಿನಾಶಕಾರಿ. ಇದರ ಹಸಿವಿನ ಹಪಾಹಪಿ ಸುಲಭದಲ್ಲಿ ತಣಿಯುವಂತಹದ್ದಲ್ಲ.



ವಡ್ಡರ್ಸೆ ರಘುರಾಮ ಶೆಟ್ಟಿ

ಇದಕ್ಕೆ ಪರಿಹಾರ ಏನು? ಕೆಲವು ಹಿರಿಯ ಪತ್ರಕರ್ತರು 'ಲಾಭದಾಸೆಯಿಲ್ಲದ ಮಾಧ್ಯಮ'ಗಳ ಮಾಡೆಲ್ " ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ. ಇಂತಹದ್ದೊಂದು ಪ್ರಯೋಗ ಎಂಬತ್ತರ ದಶಕದ ಮೊದಲಭಾಗದಲ್ಲಿ ವಡ್ಡರ್ಸೆ ರಘುರಾಮ ಶೆಟ್ಟಿಯವರು ಮಂಗಳೂರಿನಲ್ಲಿ ಪ್ರಾರಂಭಿಸಿದ್ದರು. ಬೆರಳೆಣಿಕೆಯ ಕೆಲವು ಪತ್ರಿಕೆಗಳನ್ನು ಹೊರತುಪಡಿಸಿದರೆ ಮುಖ್ಯವಾಹಿನಿಯ ಬಹುತೇಕ ಪತ್ರಿಕೆಗಳು ಮತ್ತು ಚಾನೆಲ್‌ಗಳ ಒಡೆತನ ಖಾಸಗಿ ಕಂಪೆನಿಗಳ ಕೈಯಲ್ಲಿವೆ. ಇವುಗಳಲ್ಲಿ ಹೆಚ್ಚಿನವು ಒಂದೊಂದು ಕುಟುಂಬಗಳ ಒಡೆತನದಲ್ಲಿದೆ. ಟ್ರಸ್ಟ್ ನ ಒಡೆತನದಲ್ಲಿರುವ ಸಂಯುಕ್ತ ಕರ್ನಾಟಕ ಪತ್ರಿಕೆಯೊಂದನ್ನು ಹೊರತುಪಡಿಸಿ ರಾಜ್ಯದ ಎಲ್ಲ ಮಾಧ್ಯಮ ಸಂಸ್ಥೆಗಳು ಖಾಸಗಿ ಕಂಪೆನಿಗಳ ಒಡೆತನದಲ್ಲಿವೆ.

ವಡ್ಡರ್ಸೆ ರಘುರಾಮ ಶೆಟ್ಟರು ಮೊದಲ ಬಾರಿಗೆ ಪಬ್ಲಿಕ್ ಲಿಮಿಟೆಡ್ ಕಂಪೆನಿ ಸ್ಥಾಪಿಸಿ ಅದರ ಮೂಲಕ "ಮುಂಗಾರು" ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಓದುಗರೇ ಈ ಕಂಪೆನಿಯ ಷೇರುದಾರರು. ಒಂದು ಸಾವಿರ ರೂಪಾಯಿ ಷೇರು ಖರೀದಿಸುವ ಮೂಲಕ ಓದುಗನೊಬ್ಬನನ್ನು ಒಡೆಯರನ್ನಾಗುವ ಹೊಸ ಪ್ರಯೋಗವದು. " "ಚಿಂತನೆಯ ಮಳೆಹರಿಸಿ ಜನಶಕ್ತಿಯ ಬೆಳೆ ತೆಗೆವ ಓದುಗರ ಒಡೆತನದ ಪತ್ರಿಕೆ" ಎಂದು ಶೆಟ್ರು ಮುಂಗಾರು ಪತ್ರಿಕೆಯನ್ನು ಬಣ್ಣಿಸಿದ್ದರು. ಓದುಗರು-ನೋಡುಗರು-ಕೇಳುಗರು ಒಡೆಯರನ್ನಾಗಿಸುವ ಇಂತಹ ಪ್ರಯೋಗಶೀಲ ಪ್ರಯತ್ನದಿಂದ ಮಾತ್ರ ಮಾತ್ರ ಮಾಧ್ಯಮ ಕ್ಷೇತ್ರ ಆ ಮೂಲಕ ಪ್ರಜಾಪ್ರಭುತ್ವದ ರಕ್ಷಣೆ ಸಾಧ್ಯ



**(ಲೇಖಕರು ಕನ್ನಡದ ಹಿರಿಯ ಪತ್ರಕರ್ತರು ಮತ್ತು ಸಾಮಾಜಿಕ ಚಿಂತಕರು).**

ಒಂದು ಕಥಾ ಪ್ರಬಂಧ

# ತೊರೆಯೊಂದರ ಆತ್ಮ ನಿವೇದನೆ

-ಮಹಾಂತೇಶ ಓಶಿಮಠ


ಚಿತ್ರ: ಗುಜ್ಜಾರ್

**ಒಂ**ಬೈನೂರು ವರುಷಗಳ ಹಿಂದಿನ ಮಾತಿದು. ಅದೊಂದು ದಿನ, ಮೊದಲ ಬಾರಿಗೆ ನನಗೆ ಮಾನವನ ದರುಶನವಾಗಿತ್ತು. ಸುಡು ಸುಡು ಬಿಸಿಲಿಗೆ ಬಳಲಿ ಬೆಂಡಾದ ಯೋಗಿಗಳ ಗುಂಪೊಂದು ನನ್ನನ್ನೇ ಅರಸಿ ಬಂದಂತೆ ಬಂದಿತು. ನನ್ನ ಮಡಿಲಲ್ಲಿ ತುಸು ವಿಶ್ರಾಂತಿ ಪಡೆದಾದ ಬಳಿಕ ಸತ್ಸಂಗ ನಡೆಸಿತು. ಘಟ್ಟದ ಮೇಲಿನ ಬಯಲು ನಾಡಿನ ಕಡೆಯಿಂದ ಬಂದಂಥ ಮಹಾನುಭಾವರ ಆ ಗುಂಪಿನಲ್ಲಿ ತೇಜೋಮಯರಾದ ಓರ್ವರು ನನ್ನಲ್ಲಿರುವ ಜೀವಕಳೆಯ ಆಹ್ಲಾದ ವಾತಾವರಣಕ್ಕೆ ಹರುಷಗೊಂಡು ತಮ್ಮ ಸಂಗಾತಿಗಳನ್ನ ಉದ್ದೇಶಿಸಿ "ನಾವೆಲ್ಲ ಕೆಲದಿನಗಳ ಕಾಲ ಈ ತೊರೆಯ ಸಾನಿಧ್ಯದಲ್ಲಿಯೇ ನೆಲಸಬಹುದಲ್ಲವೆ"? ಎಂದು ಅರುಹಿದಾಗ, ಅವರೆಲ್ಲರೂ ಗುರುಗಳ ನಿರ್ಧಾರವನ್ನು ಒಮ್ಮನದಿಂದ ಒಪ್ಪಿ ನನ್ನಲ್ಲಿಯೆ ತಂಗಿದರು. ಆ ಯೋಗಿಯ ಹೆಸರು ಸಿದ್ಧರಾಮ ಶರಣರೆಂದೂ ಅವರು ದೂರದ ಕಲ್ಯಾಣದಿಂದ ಬಂದವರೆಂದು ನಂತರದ ದಿನಗಳಲ್ಲಿ ಅವರು ನಡೆಸುತ್ತಿದ್ದ ಶಿವಾನುಭವಗಳಿಂದ ನನಗೆ ತಿಳಿಯಿತು. ಬಂದಂತಹ ಸಂತರ ಜೋಳಿಗೆಗಳಲ್ಲಿದ್ದ ತಾಡೋಲೆಗಳಲ್ಲಿ ಅಮೂರ್ತ ಅನುಭಾವಗಳನ್ನು ಮೂರ್ತ ರೂಪಕ್ಕೆ ಇಳಿಸಿರುವ ಸಾಹಿತ್ಯದ ನುಡಿಗಟ್ಟುಗಳಿದ್ದವು. ಅವುಗಳನ್ನು ಅವರು ವಚನಗಳೆಂದು ಕರೆಯುತ್ತಿದ್ದರು. ಈ ಶರಣರು ಉಳವಿಯ ಗೊಂಡಾರಣ್ಯದಲ್ಲಿ ಉಳಿದುಕೊಂಡಿದ್ದ ಚೆನ್ನಬಸವಣ್ಣ ಹಾಗೂ ಅಕ್ಕನಾಗಾಯಿಯನ್ನು ಭೇಟಿಯಾಗಲು ಹೊರಟಿದ್ದರು. ಅನುಭಾವಿಗಳ ತಂಡ ನನ್ನ ಪರಿಸರದಲ್ಲಿದ್ದಷ್ಟು ದಿನಗಳ ಕಾಲ ಅತ್ಯಂತ ಆನಂದದಿಂದ ಇತ್ತು. ಅವರು ನಡೆಸುತ್ತಿದ್ದ ಸತ್ಸಂಗಗಳಲ್ಲಿ ನಾನೂ ಭಾಗಿಯಾಗಿರುತ್ತಿದ್ದೆ. ಪ್ರತಿಗೋಷ್ಠಿಯಲ್ಲೂ ನಾಲ್ಕಾರು ವಚನಗಳ ಕುರಿತು ಚರ್ಚೆ ನಡೆಯುತ್ತಿತ್ತು. ಒಂದು ಮುಂಜಾನೆ ನನ್ನಲ್ಲಿದ್ದ ನಯನಮನೋಹರ ತಡಸಿಲಿನ ಪಕ್ಕದಲ್ಲಿದ್ದ ವಿಶಾಲವಾದ ಏಕಶಿಲೆಯ ವೇದಿಕೆಯಲ್ಲಿ ಚರ್ಚೆಗೆ ಎಲ್ಲರೂ ಸೇರಿದ್ದಾಗ ಸಿದ್ಧರಾಮಶರಣರು ಶ್ರೀಶೈಲದೆಡೆಗೆ ಹೋದಂತಹ ಶರಣೆ ಮಹಾದೇವಿಯಕ್ಕನ ವಚನವೊಂದನ್ನು ಹಾಡಿ ತಮ್ಮ ಸಂಗಾತಿಗಳಿಗಾಗಿ ವಾಚಿಸಿದರು. ವಚನ ಹೀಗಿತ್ತು. "ಚಿಲಿಮಿಲಿ ಎಂದೋಡುವ ಗಿಳಿಗಳಿರಾ! ಸರವೆತ್ತಿ ಪಾಡುವ ಕೋಗಿಲೆಗಳಿರಾ! ಎರಗಿ ಬಂದಾಡುವ ತುಂಬಿಗಳಿರಾ! ಕೊಳನ ತಡಿಯಾಡುವ ಹಂಸಗಳಿರಾ! ಗಿರಿಗಹ್ವರದೊಳಗಾಡುವ ನವಿಲುಗಳಿರಾ! ನೀವು ಕಾಣಿರೆ? ನೀವು ಕಾಣಿರೆ? ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂಬುದು ಬಲ್ಲಡೆ ನೀವು ಹೇಳಿರೇ! "

ನಿಸರ್ಗದ ಜೊತೆ ತಾದಾತ್ಮ್ಯತೆಯನ್ನು ಹೊಂದುತ್ತಾ ಶಿವಾನುಭವದ ಸಾಧನೆಗೆ ಅನುವು ಮಾಡುಕೊಡುತ್ತಿದ್ದ ವಚನಗಾಯನವು ಸಿದ್ದರಾಮರ ಕಂಠಸಿರಿಯಿಂದ ಸುಶ್ರಾವ್ಯವಾಗಿ ಮೂಡಿ ಬಂದಿತ್ತು. ಭಕ್ತಿಭರಿತ ಹಾಡುಗಾರಿಕೆ ಅಲ್ಲಿ ನೆರೆದಿದ್ದ ಇತರ ಶರಣರನ್ನು ಅನುಭಾವ ಲೋಕದೊಳಗೆ ತೇಲಿಸಿತ್ತು. ಆ ವಚನವು ಇಂದಿಗೂ ಅನೇಕ ಶತಮಾನಗಳು ಉರುಳಿದರೂ ಈ ಚಣವೂ ನನ್ನ ಹೃದಯಕಮಲದಲ್ಲಿ ನಲಿದಾಡುತ್ತಿದೆ.

#####

ಇದಾದ ನಂತರ ನಾಲ್ಕು ಶತಮಾನಗಳವರೆಗೆ ನಾನು ಮಾನಿಸರ ಒಂದು ನೆರಳನ್ನೂ ಕಂಡಿರಲಿಲ್ಲ. ಒಂದು ನಸುಕಿನಲ್ಲಿ ವೈಭವಪೋಷಿತ ವಸ್ತ್ರಗಳನ್ನು ಧರಿಸಿದ್ದ ದೊರೆಸಾನಿಯೊಬ್ಬಳು ಪರಿಜನರೊಂದಿಗೆ ನನ್ನ ತಟಾಕಿನಲ್ಲಿ ಮಿಂದು, ಹಿಂದೆ ಸಿದ್ದರಾಮ ಶರಣರು ವಿರಾಜಮಾನರಾಗಿದ್ದ ಅದೇ ಕಲ್ಲುಹಾಸಿನ ಮೇಲೆ ಕೆಲಹೊತ್ತು ವಿಶ್ರಮಿಸಿದಳು. ಅವಳು ಹಿಂದಿರುಗುವಾಗ ದಡದ ಇಕ್ಕೆಲ್ಲಗಳಲ್ಲಿ ಅಗಾಧವಾಗಿ ಬೆಳೆದ ಮರಗಳನ್ನು ತಬ್ಬಿಕೊಂಡಿದ್ದ ಅಪೂರ್ವ ರುಚಿಯ ಕಾಳುಮೆಣಸಿನ ಬಳ್ಳಿಗಳ ಕೆಲ ತುಂಡುಗಳನ್ನು ಹೊತ್ತೊಯ್ದುಳು. ಪರಿಚಾರಿಕೆಯರ ಮಾತುಗಳನ್ನು ಆಲಿಸಿದಾಗ ಸೌಂದರ್ಯವತಿಯೂ, ಧೈರ್ಯಗಿತ್ತಿಯೂ ಆದ ಆ ಮಹಿಳೆ ಗೇರುಸೊಪ್ಪೆ ಪ್ರಾಂತ್ಯದ ಕಾಳುಮೆಣಸಿನ ರಾಣಿ ಚೆನ್ನಭೈರಾದೇವಿಯೆಂದು ತಿಳಿಯಿತು. ರಾಣಿ ಪರಿವಾರ ಇಲ್ಲಿಂದ ಕರಾವಳಿಯ ಹೊನ್ನೂರಿನ ಬಸದಿಗಳತ್ತ ತೆರಳಿತು.

**ಹೀಗಿರಲು ಬರಬರುತ್ತಾ ಬಡಾವಣೆಯ ನಾಗರಿಕರಿಗೆ ಏನಾಯ್ತೋ ಏನೋ, ಅವರ ಜೀವನಕ್ರಮಗಳಲ್ಲಿ ನನ್ನ ಅರಿವಿಗೇ ತಾಗದತಹ ತುಂಬಾ ಬದಲಾವಣೆಗಳು ಪ್ರಾರಂಭವಾದವು. ಅವರ ಬದುಕಿನಲ್ಲಿ ಒಂದು ಮಿತಿ ಮೀರಿದ ಸಮೃದ್ಧಿ ಬಂದಿತಿತ್ತು. ಅವರ ವರ್ತನೆಯಲ್ಲಿ ಒಂದು ತರನ ಸೊಕ್ಕು ಕಾಣಿಸತೊಡಗಿತ್ತು.. ಇದರ ಸಾಂಕೇತಿಕ ಆರಂಭದಂತೆ ಒಂದು ದಿನ ನನ್ನೊಳಗೆ ಒಂದು ಸ್ಫೋಟಕವನ್ನು ಸಿಡಿಸಲಾಯಿತು..**

ಮತ್ತೆ ನೂರಾರು ವರುಷಗಳು ಗತಿಸಿರಬಹುದು, ದೊರೆಯೊಬ್ಬ ತನ್ನ ಕೆಲ ಸೈನಿಕರೊಂದಿಗೆ ಒಂದೊತ್ತು ಕಲ್ಲುಹಾಸಿನ ಮೇಲೆ ನಿದ್ರಿಸಿ ಆಯಾಸ ಪರಿಹರಿಸಿಕೊಂಡು ಹೊರಟ. ಆತನು ಸೋಂದೆಯ ರಾಜ ಸದಾಶಿವಲಿಂಗ ನಾಯಕನಿದ್ದ, ತನ್ನ ರಾಜ್ಯದ ವಾಯುವ್ಯ ಗಡಿಯಲ್ಲಿ ಕಾಳಿನದಿಯು ಶರಧಿಯನ್ನು ಸೇರುವಲ್ಲಿರುವ ಚಿತ್ತಾಕುಲಾ ಬೆಟ್ಟದ ಮೇಲೆ ಕೋಟೆ ಕಟ್ಟಿಸಿ ತನ್ನ ಪ್ರಾಂತ್ಯದ ರಾಜಧಾನಿ ಸೋಂದೆಗೆ ವಾಪಸಾಗುವ ಮುನ್ನ ಉಳವಿ ಚೆನ್ನಬಸವಣ್ಣನ ಗದ್ದುಗೆಗೆ ನಮಿಸುವ ಬಯಕೆ ಅವನದಾಗಿತ್ತು. ಹೋಗುವ ಮುಂಚೆ ನಾನಿರುವ ಸ್ಥಳದಲ್ಲೂ ತನ್ನ ಪ್ರಾಂತ್ಯದ ಗಡಿ ಗುರುತುಗಳನ್ನು ಹಾಕಿಸಿದ.

. ಹೀಗೇ ಕೆಲ ವರ್ಷಗಳಿರಲು, ಒಂದು ಮಧ್ಯಾಹ್ನ ಬಿಳಿ ಬಣ್ಣದ ವ್ಯಕ್ತಿಯೊಬ್ಬ ಬಂದ. ಅವನ ವೇಷಭೂಷಣವು ಚಿತ್ರವಿಚಿತ್ರವಾಗಿತ್ತು. ಕಾಲಿಗೆ ಉದ್ದನೆಯ ಬೂಟುಗಳನ್ನು ಧರಿಸಿ, ತಲೆಗೆ ವರ್ತುಳಾಕಾರದ ಟೊಪ್ಪಿಗೆ ಹಾಕಿಕೊಂಡು, ಕೈಯಲ್ಲಿ ಮಸೂರ ಹಾಗೂ ಇನ್ನಿತರ ಲೇಖನಿ ಸಾಮಗ್ರಿಗಳನ್ನು ಹಿಡಿದುಕೊಂಡಿದ್ದ. ಅವನೊಂದಿಗೆ ನಾಲ್ಕಾರು ಸೇವಕರೂ ಇದ್ದರು. ಆತನ ಹೆಸರು ಫ್ರಾನ್ಸಿಸ್ ಬುಕಾನನ್ ಎಂದು ತಿಳಿಯಿತು. ಜನಜೀವನ, ಕಾಡು, ನದಿ, ಬೆಟ್ಟಗುಡ್ಡ, ಸಮುದ್ರ ತೀರ, ಸಸ್ಯಗಳನ್ನು ಮೋಜಣಿ ಮಾಡುತ್ತಾ ದೂರದ ಮದ್ರಾಸಿನಿಂದ ಕಾಲ್ನಡಿಗೆಯಿಂದಲೇ ಬುಕಾನನ್ ಬಂದಿದ್ದ. ಆತನ ತಂಡವು ನನ್ನಲ್ಲಿರುವ ಸಸ್ಯರಾಶಿಯ ಮಾಹಿತಿ ಕಲೆಹಾಕಲು ತೊಡಗಿತು. ಈತ ಬಹುಸಾಹಸಿ ಎನ್ನುವುದು ನನ್ನಲ್ಲಿನ ಬಹು ಜಲಪಾತವನ್ನು ಆತ ನೋಡಿ, "ಓಹೋ…" ಎಂದವನೇ ಅದರ ತುದಿಯಿಂದ ಒಂದೇ ಸಾರಿಗೆ 'ದುಡುಂ' ಎಂದು ಮಡುವಿನ ಆಳಕ್ಕೆ ಧುಮುಕಿದಾಗ ನನಗೆ ಅರಿವಾಯಿತು. ಜಲಧಾರೆಯ ತುತ್ತತುದಿಯಿಂದ ಪ್ರಾಣಿಯೊಂದು ಹೀಗೆ ಧುಮುಕಿದ್ದನ್ನು ಮೊದಲ ಬಾರಿಗೆ ಕಂಡು ನಾಬು ಮೂಕಸ್ಮಿತನಾದೆ. ಬುಕಾನನ್ ಮಡುವಿನಲ್ಲಿ ಮನಸೋಯಿಚ್ಛೆ ಈಜಾಡಿ, ಜಲಪಾತದ ದಬದಬೆಗೆ ಮೈಯೊಡ್ಡಿ ಮೈಮನಗಳನ್ನು ಹಗುರಮಾಡಿಕೊಂಡು ಕವಳಾ ಗುಹೆಗಳ ಸಮೀಪದ ನಾಗಝುರಿ ಕೊಳ್ಳದಲ್ಲಿ ಧುಮುಕುವ ಜಲಪಾತಗಳತ್ತ ತನ್ನ ಸಹಚರರೊಡನೆ ನಡೆದ.

ಇದಾದ ಕೆಲದಶಕಗಳೇ ಸರಿದು ಹೋದ ದಿನಗಳವು.. ಸೂರ್ಯ ನೆತ್ತಿ ಸುಡುವ ಮಧ್ಯಾಹ್ನವೊಂದರಲ್ಲಿ ತಂಪಾಗಿ ಮೌನದಿಂದ ಹರಿಯುತ್ತಿದ್ದ ನನ್ನ ಬಳಿಗೆ ತಂಬೂರಿ ಮೀಟುತ್ತಾ ಹಾಡುತ್ತಾ ಕುಣಿಯುತ್ತಾ ಮಹಾನುಭಾವರೊಬ್ಬರು ಹತ್ತಾರು ಶಿಷ್ಯಬಳಗದೊಂದಿಗೆ ಬಂದು, ಮತ್ತೆ ಅದೇ ಕಲ್ಲುಹಾಸಿನ ಮೇಲೆ ವಿಶ್ರಾಂತಿಗಾಗಿ ತಂಗಿದರು. ಉದ್ದನೆಯ ಗಡ್ಡ ಬಿಟ್ಟು ಹಸಿರು ಹೊದಿಕೆ ತೊಟ್ಟಿದ್ದ ಆ ಸಂತ ಅಪೂರ್ವ ತತ್ವಪದಕಾರ ಶಿಶುನಾಳ ಶರೀಫರಾಗಿದ್ದರು. ಶರೀಫರು ಕುಂದಗೋಳದಿಂದ ಉಳವಿಯತ್ತ ಜಾತ್ರೆಗೆ ಹೊರಟಿದ್ದರು. ಹೊರಗೆ ಚಳಿಗಾಲ ಮುಗಿದ ದಿನನಾನದ ಬಿರು ಬಿಸಿಲೇರಿದ್ದರೂ, ನನ್ನ ಮಡಿಲಿನಲ್ಲಿನ ನೆರಳಿನ ತಂಪು ಅವರ ತುಂಬಾ ಹಿಡಿಸಿ, ಆ ಆನಂದದಲ್ಲಿಯೇ "ಉಳವೀ ಜಾತ್ರೆಗೆ ಹೋಗೋಣೂ…… ತಿಳಿದು ಬ್ರಹ್ಮದ ಬಯಲೊಳಗಾಡೋಣೂ… ನಮ್ಮಾ …ಉಳವೀ ಜಾತ್ರೆಗೆ ಹೋಗೋಣೂ ಒಮ್ಮನದಿಂದಲಿ… ಶ್ರೀಚೆನ್ನಬಸವನ ರಮ್ಯದ ವನವನವ ಗಮ್ಯನೆ ನೋಡುತಾ ಉಳವೀ ಜಾತ್ರೆಗೆ ಹೋಗೋಣೂ" ಎನ್ನುವ ಪದವನ್ನು ಅಲ್ಲಿಯೇ ರಚಿಸಿ, ತಂಬೂರಿಯೊಡನೆ, ಕುಣಿಯುತ್ತಾ ನಲಿಯುತ್ತಾ ಉಳವೀಶನತ್ತ ತೆರಳಿದರು.

ಶರೀಫಜ್ಜನ ಭೇಟಿಯ ತರುವಾಯ ಮನುಷ್ಯರ ಒಡನಾಟ ನನ್ನೊಂದಿಗೆ ಹೆಚ್ಚಾಗುತ್ತಾ ಹೋಯಿತು. ಶರೀಫಜ್ಜನಿಗೆ ದಾರಿ ತೋರಿಸಲು ಬಂದಿದ್ದ ಸಮೀಪದ 'ಕೊಡ್ತಹಳ್ಳಿ' ಎಂಬ ಗ್ರಾಮದ ರೈತರಲ್ಲಿನ ಕೆಲವರು ಮುಂದಿನ ವರುಷಗಳಲ್ಲಿ ನನ್ನ ಸುತ್ತ ಭೂಮಿಯನ್ನು ಆರಿಸಿ ಉಳುಮೆ ಮಾಡತೊಡಗಿದರು. ಮಳೆಗಾಲದಲ್ಲಿ ವೇಗದಿಂದ ಹರಿದು ಹೋಗುತ್ತಿದ್ದ ಹೆಚ್ಚಿನ ನೀರನ್ನು ತಮ್ಮ ಜಮೀನುಗಳಿಗೆ ಹಾಯಿಸಿ ಭತ್ತ ಬೆಳೆಯತೊಡಗಿದರು. ಕುಟುಂಬಗಳು ಹೆಚ್ಚಾದಂತೆ ಇಲ್ಲಿಯೂ ಚಿಕ್ಕ ಗ್ರಾಮವೇ ಹುಟ್ಟಿಕೊಂಡಿತು. .ಇಲ್ಲಿಹುಲಿಗಳು ನೀರು ಕುಡಿಯಲು ಹಾಗೂ ವಿಶ್ರಮಿಸಲು ಬರುತ್ತಿದ್ದರಿಂದ ಈ ಗ್ರಾಮಕ್ಕೆ 'ಹುಲಿಬೈಲು' ಎಂದು ಹೆಸರಾಯಿತು. ಈ ಹಿಂದೆ ಇಲ್ಲಿಗೆ ಬಂದಿದ್ದ ಸಿದ್ದರಾಮ ಶರಣ ಮಗ್ಗುಲಲ್ಲಿರುವ ಬೆಟ್ಟದ ತುದಿಯಲ್ಲಿ ತುಸುದಿನಗಳ ಕಾಲ ತಂಗಿದ್ದನೆಂಬ ಪ್ರತೀತಿ ಇದ್ದುದರಿಂದ ಬೆಟ್ಟವನ್ನು ಗ್ರಾಮಸ್ಥರು 'ಅಡವಿಸಿದ್ದೇಶ್ವರ' ಬೆಟ್ಟವೆಂದು ಕರೆಯಹತ್ತಿದರು. ಈ ಬೆಟ್ಟದ ಒಂದು ಕೊರಕಲಿನಲ್ಲಿ ಝರಿಯ ರೂಪದಲ್ಲಿ ಹುಟ್ಟಿ ಅನೇಕ ತಡಸಲುಗಳಾಗಿ ಕೆಳಕ್ಕೆ ಧುಮುಕಿ, ಹರಿದು ಬೆಟ್ಟದ ತಪ್ಪಲಿನಲ್ಲಿರುವ ಹುಲಿಬೈಲು ಗ್ರಾಮದ ಮೂಲಕ ನಾಲ್ಕೈದು ಕಿ.ಮೀ. ಬಳುಕಿ ಹರಿದು ಮುಂದೆ ಕಪ್ಪು ಸುಂದರಿ ಎಂದೇ ಖ್ಯಾತಳಾದ ಕಾಳಿಯ ಒಡಲು ಸೇರುವ ತೊರೆಯಾದ ನನ್ನನ್ನು ಗ್ರಾಮಸ್ಥರು 'ಅಳಶ್ಯಾ ಹೊಳೆ' ಎಂದು ಕರೆದರು. ಗ್ರಾಮದ ಜನರು ನನ್ನ ಜೊತೆ ಬಹಳ ಹೊಂದಿಕೊಂಡು ಅನ್ಯೋನ್ಯತೆಯಿಂದ ಬಾಳುತ್ತಿದ್ದರು.

ಹುಲಿಬೈಲಿನ ರೈತರೆಲ್ಲ ಒಂದು ಬಾರಿ ಘಟ್ಟದ ಮೇಲಿನ ಶಿರಸಿ ಪಟ್ಟಣಕ್ಕೆ ಗಾಂಧೀಜಿಯ ಭಾಷಣ ಕೇಳಲು ಹೋಗಿ ಬಂದಿದ್ದರು. ಭಾಷಣವನ್ನು ಆಲಿಸಿದ್ದ ಅವರೆಲ್ಲ ತುಂಬಾ ಹರುಷದಿಂದ ಇನ್ನೇನು ಕೆಲ ಕಾಲದಲ್ಲೇ ತಮಗೆಲ್ಲ ಕುಂಪಣಿ ಸರ್ಕಾರದ ಬಾಧೆಗಿಂದ ಸ್ವಾತ್ರಂತ್ರ್ಯ ಸಿಕ್ಕಿ ಭರತ ಭೂಮಿ ಮತ್ತೆ ಒಂದಾಗಿ. ನಮ್ಮದೇ ಸ್ವರಾಜ್ಯವನ್ನು ರಚಿಸಿಕೊಂಡು ನಮ್ಮ ಬದುಕನ್ನು ಶಿರಸಿ ಪಟ್ಟಣದ ಬದುಕಿನಂತೆಯೇ ಹಲವೊಂದು ಅನುಕೂಲತೆಗಳಿಂದ ಹಸನುಗೊಳಿಸಿಕೊಂಡು ನೆಮ್ಮದಿಯಿಂದ ಜೀವಿಸಬಹುದೆಂದು ವಿಚಾರ ಮಾಡುತ್ತಿದ್ದರು.

#####

ಗಾಂಧೀಜಿಯ ಭಾಷಣವಾಗಿ ಒಂದೆರೆಡು ದಶಕಗಳು ಕಳೆದಾದ ನಂತರ ಸ್ವಾತಂತ್ರ್ಯ ಘೋಷಣೆ ಆಯ್ತು. ಅದು ಆಗುವುದೆ ತಡ, ಹುಲಿಬೈಲಿನ ಗ್ರಾಮದ ಚಾವಡಿಯ ಮೇಲೆ ತ್ರಿವರ್ಣ ಧ್ವಜವು ಹಾರಾಡಿತು. ಎಲ್ಲರೂ "ಭಾರತ ಮಾತಾಕಿ ಜೈ" ಅಂದು ಕೂಗಿದರು. ಗ್ರಾಮದಲ್ಲಿ ಅನೇಕ ಬದಲಾವಣೆಗಳು ಆಗತೊಡಗಿದವು. ಶಾಲೆ, ಗ್ರಂಥಾಲಯ, ಆಸ್ಪತ್ರೆಗ ಸ್ಥಾಪನೆಗೊಂಡವು. ಅಧಿಕಾರಿಗಳು ಕುಡಿಯುವ ನೀರಿಗಾಗಿ ಬಾವಿ ತೋಡಲು ಬಂದಾಗ ಗ್ರಾಮಸ್ಥರು, "ನಮಗೆ ಅಳಶ್ಯಾ ಹೊಳೆ ಇದೆ ಅದರ ಸಿಹಿಯಾದ ಶುದ್ಧ ನೀರು ಸರ್ವಕಾಲಕ್ಕೂ ಸಿಗುತ್ತದೆ ಆದ್ದರಿಂದ ಬಾವಿಯು ಗ್ರಾಮಕ್ಕೆ ಬೇಡ" ವೆಂದು ಅಧಿಕಾರಿಗಳನ್ನು ವಾಪಸ್ ಕಳಿಸಿದರು. ಈ ಕಾಲದಲ್ಲಿ ಮತ್ತೊಬ್ಬ ಪ್ರಸಿದ್ಧ ವ್ಯಕ್ತಿ ಹುಲಿಬೈಲಿಗೆ ಭೇಟಿಕೊಟ್ಟಿದ್ದರು. ಆ ಭೇಟಿ ಬಹು ರೋಚಕವಾದದ್ದಾಗಿತ್ತು. ಇನ್ನೇನೂ ಮಳೆಗಾಲ ಮುಗಿದು ಕಾರ್ತಿಕ ಮಾಸ ಶುರುವಾಗುವುದರಲ್ಲಿತ್ತು. ಗ್ರಾಮದ ಹಿರಿಯರೊಬ್ಬರು ನನ್ನ ಮಡಿಲಿನ ಅದೇ ವಿಶಾಲವಾದ ಕಲ್ಲುಹಾಸನ್ನು ತಮ್ಮೊಡನೆ ಬಂದಂಥ ಅತಿಥಿ ಮಹಾಜನರಿಗೆ ತೋರಿಸಿದರು. ಅವರೊಂದಿಗೆ ಬಂದ ತಂಡವು ಬಹು ಸಂತೋಷದಿಂದ ಹಾಸಿನ ಮೇಲೆ ಗುಡಾರಗಳನ್ನು ಹಾಕಿ ಠಿಕಾಣಿ ಹೂಡಿತು. ತಂಡದ ಮುಖ್ಯಸ್ಥರು ಸಣಕಲು ದೇಹದ ಕೋಲು ಮುಖದ ಕನ್ನಡಕಧಾರಿಯಾಗಿದ್ದರು. ಅವರ ಬಳಿಯಲ್ಲಿ ದುರ್ಬಿನು ಹಾಗೂ ಕ್ಯಾಮರಾಗಳಿದ್ದವು. ಈ ಮಹಾನುಭಾವರ ಹೆಸರು ಸಲೀಂ ಅಲಿ ಎಂದೂ, ಭರತಖಂಡದ ಶ್ರೇಷ್ಠ ಪಕ್ಷಿತಜ್ಞರೆಂದೂ ನಂತರ ಗೊತ್ತಾಯಿತು. ಸಲೀಂ ಅಲಿ ಬಂದ ಕೂಡಲೆ ಒಂಚೂರೂ ವಿಶ್ರಮಿಸದೆ ಹಕ್ಕಿಗಳನ್ನು ಗುರುತಿಸುತ್ತಾ, ಅವುಗಳ ಕೊಕ್ಕು, ಗರಿ, ಬಣ್ಣ, ಕಣ್ಣು, ಕಾಲು, ಕೂಗು ಹಾಗೂ ಇನ್ನಿತರ ವಿವರಗಳನ್ನು ಹೇಳುತ್ತಾ ಸಹಾಯಕರಿಗೆ ದಾಖಲಿಸಿಕೊಳ್ಳಲು ಸೂಚಿಸುತ್ತಿದ್ದರು. ನನ್ನ ಪರಿಸರದ ಜೀವ ವೈವಿದ್ಯತೆಯ ವಿಶಿಷ್ಟತೆಗೆ ಬೆರೆಗುಗೊಂಡ ಸಲೀಂ ಅಲಿ ತಾನು ನೋಡಿದ ಅಪೂರ್ವ ತಾಣಗಳಲ್ಲಿ ಇದು ಕೂಡ ಒಂದೂ ಎಂದು ತಮ್ಮ ಸಂಗಾತಿಗಳಿಗೆ ಮಾಡುತ್ತಿದ್ದ ನನ್ನ ವೈಭವದ ವರ್ಣನೆಯನ್ನು ಕೇಳಿ ನನಗೆ ನಾನೆ ಸಂಭ್ರಮಿಸಿದೆ. ಸಲೀಂ ಅಲಿ ಬಂದಾಗ ಹುಣ್ಣಿಮೆಯ ದಿನಗಳಾಗಿದ್ದವು. ಇರುಳಿನಲ್ಲಿಯೂ ಹಕ್ಕಿಗಳನ್ನು ಗುರುತಿಸಿ ವಿವರಗಳನ್ನು ದಾಖಲಿಸುತ್ತಿದ್ದರು. 'ಜ್ಞರ ತಂಡ ಹೊರಡುವ ಕೊನೆಯ ದಿನದ ನಸುಕಿನ ಹೊತ್ತಲ್ಲಿ, ಅಡವಿಯಲ್ಲಿ ಇನ್ನೂ ಸೂರ್ಯನ ಪ್ರಥಮ ಚುಂಬನದ ಸ್ಪರ್ಶವೂ ಆಗಿರಲಿಲ್ಲ. ಬಾಲರವಿಯನ್ನು ಸ್ವಾಗತಿಸಲು ಬಿದಿಗೆ ಚಂದ್ರಮನು ಆಗಸದಲ್ಲಿ ಇನ್ನೂ ನಗುತ್ತಾ ತೇಲುತ್ತಿದ್ದ. ಬೆಳ್ಳಿ ಚುಕ್ಕಿ ಇನ್ನೂಪ್ರಕಾಶಮಾನವಾಗಿ ಮಿನುಗುತ್ತಿತ್ತು. ಅಂತಹ ಆಹ್ಲಾದಕರ ವಾತಾವರಣದಲ್ಲಿ ದಂಡೆಯ ಮೇಲಿದ್ದ ಹೊಳೆಮತ್ತಿ ಮರದಿಂದ ಸುಮಧುರವಾದ ಸಿಳ್ಳೆಯ ಧ್ವನಿಯು ಕೇಳಲಾರಂಭಿಸಿತು. ಪಕ್ಷಿತಜ್ಞರೆಲ್ಲರೂ ಅಚ್ಚರಿಯಿಂದ ಕಿವಿಗಳನ್ನು ನಿಮಿರಿಸಿಕೊಂಡು, ಕಣ್ಣುಗಳನ್ನು ಅಗಲಿಸಿ ಆ ಇನಿದನಿಯ ಹೊಮ್ಮುತ್ತಿದ್ದ ಜಾಗದತ್ತ ನೋಡಿದರು. ಅವರಿಗೆ ಅಲ್ಲಿ ಏನೂ ಕಾಣಲಿಲ್ಲ. ದನಿ ಮತ್ತೆ ಮತ್ತೆ ಅಲೆ ಅಲೆಯಾಗಿ ಮಾರ್ದನಿಸತೊಡಗಿತು. ಈ ಸಿಳ್ಳನ್ನು ನಾನು ಹುಟ್ಟಿದಾಗಿನಿಂದ ಕೇಳುತ್ತಿದ್ದ ಕಾರಣ ನನಗೇನು ಅದು ವಿಶೇಷವೆನಿಸದಿದ್ದರೂ, ಹಕ್ಕಿಯ ಹಾಡುಗಾರಿಕೆಯ ವಿಶಿಷ್ಟತೆಯು ನನ್ನ ಈ ಮನೆಯ ಹೆಮ್ಮೆಯ ಗರಿ ಎಂದಂತೂ ನಾನು ಭಾವಿಸಿದ್ದೆ. ಆ ಹಕ್ಕಿಯ ಸಾಕಷ್ಟು ಕುಟುಂಬಗಳು ನನ್ನ ಒಡಲಿನಲ್ಲಿಯೇ ವಾಸವಾಗಿದ್ದರಿಂದ ಅವುಗಳ ಪರಸ್ಪರ ಪ್ರೀತಿ ಪ್ರಣಯ, ಗೂಡು ಕಟ್ಟುವುದು ಹಾಗೂ ಬಾಣಂತನಗಳನ್ನು ನಾನು ಚಿಕ್ಕಂದಿನಿಂದ ನೋಡುತ್ತಲೆ ಬಂದಿದ್ದೆ. ತುಸು ಹೊತ್ತಿನ ನಂತರ ಟೊಂಗೆಯೊಂದರಲ್ಲಿ ಉಲಿಯುತ್ತಿರುವ ಹಕ್ಕಿಯು ಅಸ್ಪಷ್ಟವಾಗಿ ಸಲೀಂ ಅಲಿಗೆ ಮೊದಲು ಗೋಚರಿಸಿದಾಗ ಅವರ ಪುಟ್ಟ ಮುಖ ಮೊರದಗಲದಂತಾಗಿ ಪಿಸುವದನಿಯಲ್ಲಿ ಇತರರಿಗೆ ಸನ್ನೆ ಮಾಡಿ, ಹತ್ತಿರ ಕರೆದು "ನೋಡಿ...ಅತ್ತ... ಆ... ಟಿಸಿಲೊಡೆದ ಟೊಂಗೆಯ ಮೇಲೆ" ಎಂದು ತೋರಿಸಿದರು. ಅವರೆಲ್ಲ "ಹೋ, ಗ್ರೇಟ್..ಗ್ರೇಟ್" ಎಂದು ಉದ್ಗಾರ ತೆಗೆದು ಅದು ಕಂಡ ಭಾಗ್ಯಕ್ಕೆ ಸಂತೋಷಗೊಂಡು ಕುಣಿದಾಡತೊಡಗಿದರು. ಸಲೀಂ "ಶೂ.. ಹಕ್ಕಿ ಹಾರಿಹೋಗುತ್ತದೆ ಸುಮ್ಮನಿದ್ದು ನೋಡಿ" ಎಂದು ಸಣ್ಣದಾಗಿ ಗದರಿಸಿ ತುಂಬಾ ಚುರುಕಿನಿಂದ ಬೆಳಕಾಗುವವರೆಗೆ ಅದನ್ನು ಹಿಂಬಾಲಿಸುತ್ತಾ ಕ್ಯಾಮರಾ ಕ್ಲಿಕ್ಕಿಸುತ್ತಾ ವಿವರಗಳನ್ನು ಸಂಗ್ರಹಿಸಿದರು. ಸುಶ್ರಾವ್ಯವಾಗಿ ಹಾಡುತ್ತಿದ್ದ ನೇರಳೆಮಿಶ್ರಿತ ಬಣ್ಣದ ಹಾಡುಗಾರ ಹಕ್ಕಿಗೆ ಸಲೀಂಮ ಇತರರೊಂದಿಗೆ ಸಮಾಲೋಚಿಸಿ, 'ವಿಷಲಿಂಗ್ ತ್ರಷ್' ಎಂದು ಕರೆದರೆ ಅವರ ಜೊತೆಗಿದ್ದ ಸ್ಥಳೀಯರೊಬ್ಬರು ಅಚ್ಚಕನ್ನಡದಲ್ಲಿ "ಅಯ್ಯೋ, ಅದು ಮಲೆನಾಡ ಸಿಳ್ಳಾರ!"ವೆಂದು ಉದ್ಗರಿಸಿದರು.

ಸಲೀಂ ಅಲಿ ಭೇಟಿ ನೀಡಿ ಒಂದೆರೆಡು ದಶಕಗಳಾಗಿದ್ದವೇನೋ? ಅದೊಂದು ದಿನ ಆಷಾಢದ ಕಾರ್ಮೋಡಗಳು ಒಟ್ಟಾಗಿ ಹುಲಿಬೈಲಿನ ಮೇಲೆ ಮುಗಿದುಬೀಳುವಂತೆ ಘರ್ಜಿಸುತ್ತಿದ್ದವು. ಮಧ್ಯಾಹ್ನವೇ ಸಂಜೆಯ ಮಬ್ಬುಗತ್ತಲು ಕವಿದಿತ್ತು. ಸಮಾನಾಂತರದಲ್ಲಿ ಆಕಾಶದಲ್ಲಿ ನೆಗೆಯುತ್ತಿದ್ದ ಮಿಂಚುಗಳೇ ತುಸು ಬೆಳಕನ್ನು ಹರಡುತ್ತಿದ್ದವು. ಊರ ಗೌಡರು ರಾಮಲಿಂಗೇಶ್ವರ ಗುಡಿಯ ಮುಂದುಗಡೆಯಿರುವ ಗ್ರಾಮಚಾವಡಿಯ ಅಂಗಳದಲ್ಲಿ ಗ್ರಾಮಸ್ಥರ ಸಭೆಯೊಂದನ್ನ ಕರೆದಿದ್ದರು. ಅಲ್ಲಿ ನೆರೆದಿದ್ದವರು ಕೂಡ ಮುಖಗಳಲ್ಲಿ ದುಗುಡವನ್ನು ತುಂಬಿಕೊಂಡೆ ಕುಳಿತ್ತಿದ್ದರು. ಮ್ಲಾನವದನರಾಗಿದ್ದ ಗೌಡರು ಮಾತನಾಡುತ್ತಾ, "ನೋಡಿ ಶಿರಸಿಯಿಂದ ಬಂದ ಸರಕಾರದ ನೋಟಿಸು ಇದು... ಕಣಿವೆಯ ಆ ತುದಿಯಲ್ಲಿರುವ 'ಅಮಗೆ' ಮಜಿರೆಯಲ್ಲಿ ವಿದ್ಯುತ್ ಯೋಜನೆಯನ್ನು ಸರಕಾರವು ಪ್ರಾರಂಭಿಸಲಿದೆಯಂತೆ. ಈ ಯೋಜನೆಯಲ್ಲಿ ಕಾರ್ಯ ನಿರ್ವಹಿಸಲು ಬರುವ ನೌಕರಸ್ತರಿಗೆ ವಸತಿಗಳು ಹಾಗೂ ಇತರ ಕಚೇರಿಗಳಿಗಾಗಿ ನಮ್ಮ ಗ್ರಾಮವನ್ನು ಆರಿಸಿದ್ದಾರೆ. ಇದರಿಂದಾಗಿ ಹುಲಿಬೈಲನ್ನು ನಾವು ದೇಶದ ಒಳಿತಿಗಾಗಿ ತೆರವುಗೊಳಿಸಬೇಕಿದೆ. ನಮಗೆ ಸರಕಾರವು ಕಣಿವೆಯ ಕೆಳತುದಿಯಲ್ಲಿರುವ 'ಜಮಗೆ' ಮಜಿರೆಯಲ್ಲಿ ಪುನರ್ವಸತಿ ಕಲ್ಪಿಸಲಿದೆಯಂತೆ" ಎಂದು ನೋಟಿಸನ್ನು ಓದಿ ಹೇಳೀದರು. ಬರಸಿಡಿಲಿನಂತೆ ಬಂದೆರಗಿದ ಸರಕಾರದ ಆದೇಕ್ಕೆ ಗ್ರಾಮಸ್ಥರು ಸ್ತಬ್ಧರಾಗಿಹೌಹಾರಿ ತಮ್ಮ ತಲೆಯಮೇಲೆ ಕೈಯಿಟ್ಟುಕೊಂಡರು. ನಂತರದ ದಿನಗಳಲ್ಲಿ ಈ ವಿದ್ಯುತ್ ಯೋಜನೆ ನಾಡಿನ ಎಲ್ಲ ಜನರ ಒಳಿತಿಗಾಶಗಿ ಎಂಬ ಸರ್ಕಾರದ ಸಂದೇಶ ಈ ಗ್ರಾಮದವರೆಗೂ ತಲುಪಿ, ನಾಲ್ಕಾರು ತಿಂಗಳುಗಳ ನಂತರ ತಮ್ಮ ಆರಾಧ್ಯ ದೈವ ಹುಲಿಬೈಲಿನ ರಾಮಲಿಂಗೇಶ್ವರನಿಗೆ ಕೊನೆಯ ಪೂಜೆ ಸಲ್ಲಿಸಿ ಗಂಟು ಮೂಟೆ, ಜಾನುವಾರುಗಳೊಂದಿಗೆ ಭಾರವಾದ ಹೃದಯಗಳಿಂದ ಜಮಗೆ ಮಜಿರೆಗೆ ತೆರಳಿದರು. ಊರಿಗೆ ಊರೇ ಖಾಲಿಯಾಯಿತು.

#####

ಹುಲಿಬೈಲಿನ ನಿವಾಸಿಗಳು ಜಮಗೆ ಮಜಿರೆಗೆ ಸ್ಥಳಾಂತರಗೊಂಡ ಕೆಲ ವರುಷಗಳಲ್ಲೆ ಯೋಜನೆಯ ಕಾಮಗಾರಿ ಇಲ್ಲಿ ಪ್ರಾರಂಭವಾಯಿತು. ದೇಶದ ವಿವಿದೆಡೆಯಿಂದ ಸಾವಿರಾರು ಕಾರ್ಮಿಕರು ಹಾಗೂ ಅಧಿಕಾರಿಗಳು ಬಂದು ನಾನು ಹರಿಯುವ ಸುತ್ತಮುತ್ತಲೂ ನಾಗರಿಕ ಸೌಲಭ್ಯಗಳಿಂದ ಸುಸಜ್ಜಿತವಾದ ಬಡಾವಣೆಯೊಂದನ್ನು ಕಟ್ಟಿಕೊಂಡು ವಾಸಮಾಡತಿಡಗಿದರು. ಹುಲಿಬೈಲಿಗೆ 'ನಿಸರ್ಗಮನೆ' ಎಂಬ ಆಕರ್ಷಕ ಹೆಸರಿಟ್ಟು ಮರುನಾಮಕರಣ ಮಾಡಿಕೊಂಡು ಹುಲಿಗಳ ಸಂಚಾರವನ್ನು ನಿರ್ಬಂಸಲು ಬಡಾವಣೆಯ ಸುತ್ತ ಪಾಗಾರ ಕಟ್ಟಿಕೊಂಡರು. ರಾಮಲಿಂಗೇಶ್ವರನ ಪ್ರಾಚೀನ ಶಿಲೆಉ ಲಿಂಗವನ್ನು ಬದಲಿಸಿ ಹೊಸ ಕೆತ್ತನೆಯ ಲಿಂಗವನ್ನು ಪಟ್ಟಣದಿಂದ ಕರೆತಂದ ಪುರೋಹಿತರ ಮಂತ್ರಘೋಷಗಳ ನಡುವೆಪ್ರತಿಷ್ಠಾಪಿಸಿದರು. ಪೂಜೆಗಾಗಿ ಈ ಪುರೋಹಿತರು ಶಿಫಾರ್ಸು ಮಾಡಿದ ಹೊಸ ಅರ್ಚಕರನು ್ನೇಮಿಸಿದರು.

ನ್ನ ಸುತ್ತಮುತ್ತ ಬರೀ ಹೊಸಬರನ್ನು ನೋಡಿ ನಾನು ತುಸು ಹೆದರಿದ್ದೆ. ಮುಗ್ಧ ಗ್ರಾಮಸ್ಥರಿಲ್ಲದ ಮೊದ ಮೊದಲಿನ ದಿನಗಳು ನನಗೂ ಬೇಸರ ತಂದವು. ಆಗಾಗ ಗುಡಿಯ ಭಜನೆಯಲ್ಲಿ ಬಾರಿಸುತ್ತಿದ್ದ ಗುಮಟೆಪಾಂಗ್ ವಾದನದ ಧ್ವನಿ ಕೇಳಿಸಿದಂತಾಯಿತು.. ರೈತರಿದ್ದಾಗ ಹೊಲಗಳಲ್ಲಿನ ಭತ್ತದ ತೆನೆಗಳು ಒಡೆದು ಮಂದ ಗಾಳಿಗೆ ಓಲಾಡಿದಾಗ ಬರುತ್ತಿದ್ದ ಸಜೀವ ಸಸ್ಯ ಪರಿಮಳ ಇಲ್ಲವಾಗಿತ್ತು. ನನ್ನ ಪಾಡಿಗೆ ಹರಿಯುತ್ತಿದ್ದ ನನ್ನ ಸಹಜ ಲಯ ದಬಿಗಳನ್ನು ಹಾಳುಗೆಡವದೆ ತಮ್ಮ ಕೃಷಿ ಕಾಯಕವನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಅವರ ಶಾಂತಚಿತ್ತ ಮುಖಗಳ ನೆನೆಪುಗಳು ಹೃದಯದ ಆಳದಿಂದ ಒತ್ತರಿಸಿ ಬರತೊಡಗಿದ್ದವು. ದಿನಗಳು ಕಳೆದಂತೆ ದೇಶಕ್ಕೆ ಬೆಳಕನ್ನು ನೀಡಬಂದ ನಿಸರ್ಗಮನೆಯ ಹೊಸ ಹೊಸ ಮುಖಗಳಿಗೆ ಹೊಂದಿಕೊಂಡು ಅವರ ಓಡಾಟ, ನಲಿದಾಟ ಹಾಗೂ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾ ಖುಷಿಪಡಲು ಪ್ರಯತ್ನಿಸತೊಡಗಿದೆ. ನೌಕರರೂ ಕೂಡಾ ನನ್ನ ಸೌಂದರ್ಯಕ್ಕೆ ಮಾರುಹೋಗಿ ನನ್ನನ್ನು ಹೆಚ್ಚಿಗೆ ಲಾಡದೆ, ತಾವು ಹಾದಾಡಲು ಬೇಕಾದಷ್ಟೆ ಸೇತುವೆಗಳನ್ನು ಕಟ್ಟಿಕೊಂಡರು. ನನ್ನಲ್ಲಿರುವ ಸಸ್ಯರಾಶಿ, ಪ್ರಾಚೀನ ಶಿಲೆಗಳಿಗೆ ಕೈಹಾಕದೆ ನನ್ನ ರೂಪಕ್ಕೆ ಯಾವುದೇ ಚ್ಯುತಿ ತರಲಿಲ್ಲ. ಪಕ್ಕದಲ್ಲಿ ಉದ್ಯಾನವನಗಳನ್ನು ನಿರ್ಮಿಸಿದರು. ಅಲ್ಲಿ ಆಟವಾಡುತ್ತಿದ್ದ ಪುಟ್ಟ ಮಕ್ಕಳ ಕಲವರದೊಂದಿಗೆ ನಾನು ನಲಿದೆ.

ನಾನೊಂದು ಮಧ್ಯಮಗಾತ್ರದ ತೊರೆಯಾದರೂ ಹುಲಿಬೈಲಿನ ಜೀವವೈವಿಧ್ಯತೆಯ ತೊಟ್ಟಿಲಾಗಿ ಅಸಂಖ್ಯಾತ ಜೀವಿಗಳಿಗೆ ತವರಾಗಿದ್ದೆ. ಮೀನು, ಏಡಿ, ಹಾವು, ಕಪ್ಪೆಗಳು ನನ್ನಲ್ಲಿರುವ ಜಲರಾಶಿ, ಕಲ್ಲುಚಪ್ಪಡಿ ಹಾಗೂ ಮರಳಿನಲ್ಲಿ ನೆಲಸಿದ್ದವು. ನನ್ನ ಎರಡೂ ಬದಿಗಳಲ್ಲಿ ಹೊಳೆ ಮತ್ತಿ, ಕರಿ ಮತ್ತಿ, ಬಿಳಿ ಮತ್ತಿ, ಹೊಳೆ ದಾಸವಾಳ, ಕವಲು, ಕದಂಬ, ಹೊನ್ನೆ, ಬೀಟೆ, ನಂದಿ, ಶಿವಣೆ, ಅರಳಿ, ಅತ್ತಿ, ಆಲ, ಅರಿಷಿಣ, ಬೆತ್ತ, ಬಿದಿರು, ಕಣಗಲೆ, ಕಾಸರಕ, ಮುರಗಲು, ಅಪ್ಪೆ ಮುಂತಾದ ಗಿಡಮರಗಳಲ್ಲಿ ಹೂವು ಹಣ್ಣುಗಳು ತುಂಬಿರುತ್ತಿದ್ದವು. ಸಿಳ್ಳಾರ, ಹರಟೆಮಲ್ಲ, ಕುಟ್ರ, ಪಿಕಳಾರ, ಬೇಲಿಚಟಕ, ಕೆಂಬೂತ, ಬೆಳವ, ಕಾಜಾಣ, ಬದನಿಕೆ, ನೊಣಹಿಡುಕ, ಮಂಗಟ್ಟೆ, ಮಧುರಕಂಠ, ಮಿಂಚುಳ್ಳಿ, ಕೈರಾತ, ಎಲೆಹಕ್ಕಿ, ರಾಜಹಕ್ಕಿ, ಮರಗುಬ್ಬಿ, ಗೂಬೆ, ಹಾಲಕ್ಕಿ, ನವರಂಗ ಮುಂತಾದ ಹಕ್ಕಿಗಳ ಇಂಚರ ಎಲ್ಲೆಡೆ ಮಾರ್ದನಿಸುತ್ತಿತ್ತು. ಮೀನು ಹಿಡಿಯುವ, ಹಣ್ಣುಗಳನ್ನು ತಿನ್ನುವ ಹಾಗೂ ಹುಳು ಹುಪ್ಪಟ್ಟೆಗಳನ್ನು ನುಂಗುವ ಹಕ್ಕಿಗಳ ಚಟುವಟಿಕೆಗಳು ಎಡಬಿಡದೆ ಸಾಗುತ್ತಿದ್ದವು. ಅವುಗಳು ಗೂಡು ಕಟ್ಟುವುದು, ಬಾಣಂತನ ಮಾಡುವುದು ಎಲ್ಲವೂ ನನ್ನ ನಿಸರ್ಗದಲ್ಲಿ, ಯಾವುದೇ ತೊಂದರೆಗಳಿಲ್ಲದೆ ನಡೆಯುತ್ತಿತ್ತು. ಚಳಿಗಾಲದಲ್ಲಿ

# ನವಿಲುಗರಿ

## ಎಲ್ಲಿ ಹುಡುಕಲಿ ತಾಯಿ ನಿನ್ನ......

**(ಧಾರವಾಡದ ಹಾಲ್ಗೆರೆಯನ್ನು ಬತ್ತಿಸಿದ ನೋವಿಗಾಗಿ)**



ಊರ ಚೆಲುವಿನ ಹಾಡು ನೀನವ್ವ,
ಹಕ್ಕಿ ಕೊರಳಿನ ಕೂಗು ನೀನು,
ಮೀನೀಗೆ ಬಣ್ಣ ಕೊಟ್ಟ ತಾಯಿ,
ಎಲ್ಲಿಗೆ ಹೋದಿ ಹಾಲ್ಗೆರೆ ಗಂಗವ್ವ!

ಬ್ಯಾಸಗಿ ಬಿಸಿಲಿಗೆ ಬೀಸಣಿಕೆ ನೀನು,
ನನ್ನ ಕಾಗದ ನಾವಿಗೆ ನದಿಯು,
ಬೆಳ್ಳಕ್ಕಿ ದಿಬ್ಬಣಕ ಹಡದಿ ಹಾಸುವವಳೇ,
ಎಲ್ಲಿ ಹೊಂಟೊದಿ ಯಾ ಊರಿಗೆ!

ಚವತಿ ಗಣಪಗೆ ನೀನೆ ಒಡಲು,
ಬಾಗ್ವಾನರ ಡೋಲೀಗೆ ಕಡಲು,
ದೀಪಾವಳಿಗೆ ನೀ ಹೊನ್ನಿನ ಮಡಿಲು,
ಹೋದದ್ದು ಯಾಕೆ ಕಾರಣ ಹೇಳವ್ವ!

ವಾಯುವಿಹಾರಿಗೆ ನೀ ಜೋಡು,
ಬಿಂದಿಗಿ ತಂದವಳ ಗೋಳ ಕೇಳುವವ,
ವಿರಹಿಯ ಎದೆಗೆ ಆನುವವಳು,
ಆಸರೆ ನಮಗಾರು ಹೇಳವ್ವ ತಾಯಿ!

ನೀನಲ್ದ ಊರು ಎಂಥಾ ಕಾವು,
ಜೀವವಿಲ್ಲದ ಬರೀ ಶವವು,
ಊರ ಚೆಲುವೆಲ್ಲ ಹಾಳಾಗಿ ಹೋತು
ನಮ್ಮೂರ ಬದುಕೆ ನಿನ್ನೆಲ್ಲಿ ಹುಡುಕಲಿ!

**–ಮಾಲತಿ ಪಟ್ಟಣಶೆಟ್ಟಿ**




## ಮಾಟಗಾತಿಯ ಮಿಥ್ಯೆ

ವಾಸ್ತವದ ಮಿಥ್ಯೆಯಾಗಿ
ಮನಸಿಗೆ ಮುದವಾಗಿ
ಕಲ್ಪನೆಯ ಕೂಸಾದ ಮತ್ಸ್ಯಕನ್ಯೆಯೇ,
ನೀನೊಂದು ಕನಸು;
ಆದರೂ ಮನಸಿಗೆ ಸೊಗಸು.
ಕನಸುಗಳೇ ಹೀಗೆ,
ಸವಿಯಲು ಹಿತ.

ಧೂಮವಿಲ್ಲದ ಬೀದಿಗಳು
ದೊಂಬಿಯಿಲ್ಲದ ಕೇರಿಗಳು
ಗುಡಿಗಳಲ್ಲಿ ನಮಾಜಿನ ದೃಶ್ಯಗಳು
ನಡುರಾತ್ರಿಯ ನಿರ್ಭೀತಿ
ಇವೆಲ್ಲವೂ
ಸತ್ಯಕ್ಕೆ ಮಿಥ್ಯೆಯ ಲೇಪಿಸಿದಂತೆ
ರೆಪ್ಪೆ ಮುಚ್ಚಿದ ಅಕ್ಷಿಪಟಲದಲ್ಲಿ
ಕಂಡ ಛಾಪುಗಳು.
ಮಾಟಗಾತಿ ಮತ್ಸ್ಯಕನ್ಯೆಯ
ಮಾಯದ ಮೋಹಕ ಛಾಯೆಯಂತೆ.



**–ಕೆ.ಎಸ್. ಗಂಗಾಧರ್**



---

ಹಿಮಾಲಯದ ತಪ್ಪಲಿನಿಂದಲೂ ಅನೇಕ ಬಗೆಯ ವಲಸೆ ಹಕ್ಕಿಗಳು ಬಂದು ನೆಲೆಸುತ್ತಿದ್ದವು. ನನ್ನ ಇಕ್ಕೆಲಗಳಲ್ಲಿನ ಬೃಹತ್ ಮರಗಳಲ್ಲಿ ಹಾಗೂ ಬದುಗಳಲ್ಲಿ ವಿಸ್ಮಯಕಾರಕ ಅಸಂಖ್ಯಾತ ಜೇಡಗಳು ಬಲೆ ನೇಯ್ದು ಚಿಟ್ಟೆ–ಪತಂಗಗಳನ್ನು ಹೀರಲು ಕಾಯುತ್ತಿದ್ದವು. . ಹುಲಿಗಳು ನೀರು ಕುಡಿಯಲು ಹಾಗೂ ವಿಶ್ರಮಿಸಲು ಬರುತ್ತಿದ್ದರಿಂದ

ಹೀಗೆ ಹತ್ತಾರು ವರುಷಗಳು ಸಾಂಗವಾಗಿಯೇ ಸಾಗಿದವು ಎನ್ನಿ. ನೀರು ಹಾಗೂ ವಿಶ್ರಾಂತಿಗಾಗಿ ಬರುತ್ತಿದ್ದ ಜಿಂಕೆ, ಚಿರತೆ, ಹುಲಿ ಇತ್ಯಾದಿ ಕಾಡು ಪ್ರಾಣಿಗಳು ಬಡಾವಣೆಯ ಸುತ್ತ ಕಟ್ಟಿದ್ದ ಆವರಣದ ಕಾರಣ ಬರುವುದನ್ನು ನಿಲ್ಲಿಸಿದ್ದು ಬಿಟ್ಟರೆ ಇನ್ನಿತರ ವನ್ಯಮೃಗಗಳು ಹಾಗೂ ಇತರ ಸೂಕ್ಷ್ಮ ಜೀವ ಸಂಕುಲಕ್ಕೆ ನಾನು ಅಲ್ಲಿಯವರೆಗೆ ಸಂಪೂರ್ಣವಾಗಿ ತೆರೆದುಕೊಂಡಿದ್ದೆ. ನನ್ನಲ್ಲಿನ ಜೀವಸೆಲೆಯಲ್ಲಿ ಅಪೂರ್ವ ಜೀವಿಗಳಾದ ಹಾರುವ ಅಳಿಲು, ಹಾರುವ ಓತಿ, ಖಗಸಂಕುಲದ ದೊಡ್ಡ ದಾಸಮಂಗಟ್ಟೆ, ಕಾಕರಣೆ ಹಾಗೂ ಕಪ್ಪೆಬಾಯಿ ಹಕ್ಕಿಗಳು ಇದ್ದವು. ನಾನು ಹರಿಯುವ ದಾರಿಯಲ್ಲಿ ನೌಕರರು ಒಡ್ಡನ್ನು ಕಟ್ಟಿ ಚಿಕ್ಕ ಈಜುಕೊಳ ನಿರ್ಮಿಸಿ ಮನಸ್ಸೋ ಇಚ್ಛೆ ಆಡಿ ನಲಿದಾಡುತ್ತಿದ್ದರು. ಪುಟಾಣಿ ಮಕ್ಕಳು ನನ್ನ ಬಗು ಬಳಕುಗಳನ್ನು, ಪುಟಿದೇಳುವ ಚಿಕ್ಕ ಚಿಕ್ಕ ತಡಸಲುಗಳನ್ನು ನೋಡಿ ಸಂತೋಷ ಪಡುತ್ತಿದ್ದರು. ಹರಿಯುವ ನೀರಿನಲ್ಲಿ ಅವರು ಅತ್ತಿಂದಿತ್ತ ಓಡಾಡಿ ನಲಿದಾಡುತ್ತಿದ್ದರು. ಕೆಲ ನಿವಾಸಿಗಳು ನನ್ನ ಒಡಲಲ್ಲಿರುವ ಸ್ವಾದಿಷ್ಟ ಏಡಿ ಹಾಗೂ ಮೀನುಗಳನ್ನು ಹಿಡಿದು ಸುಟ್ಟು ತಿಂದು ಖುಷಿಪಡುತ್ತಿದ್ದರು. ಇನ್ನೂ ಕೆಲವರು ಕಳಲೆ, ಮರಕೆಸು, ಅಪ್ಪೆಮಿಡಿ ಹಾಗೂ ಇನ್ನಿತರ ಕಾಡುಹಣ್ಣುಗಳನ್ನು ತಿಂದು ಸಂತೃಪ್ತರಾಗಿ ಹೋಗುತ್ತಿದ್ದರು.

ಹೀಗಿರಲು ಬರಬರುತ್ತಾ ಬಡಾವಣೆಯ ನಾಗರಿಕರಿಗೆ ಏನಾಯ್ತೋ ಏನೋ, ಅವರ ಜೀವನಕ್ರಮಗಳಲ್ಲಿ ನನ್ನ ಅರಿವಿಗೇ ತಾಗದತಹ ತುಂಬಾ ಬದಲಾವಣೆಗಳು ಪ್ರಾರಂಭವಾದವು. ಅವರ ಬದುಕಿನಲ್ಲಿ ಒಂದು ಮಿತಿ ಮೀರಿದ ಸಮೃದ್ಧಿ ಬಂದತಿತ್ತು. ಅವರ ವರ್ತನೆಯಲ್ಲಿ ಒಂದು ತರನ ಸೊಕ್ಕು ಕಾಣಿಸತೊಡಗಿತ್ತು.. ಇದರ ಸಾಂಕೇತಿಕ ಆರಂಭದಂತೆ ಒಂದು ದಿನ ನನ್ನೊಳಗೆ ಒಂದು ಸ್ಫೋಟಕವನ್ನು ಸಿಡಿಸಲಾಯಿತು.. ಅದು ಮೀನು ಏಡಿಗಳನ್ನು ದೊಡ್ಡ ಪ್ರಮಾಣದಲ್ಲಿ ಹಿಡಿದು ಸಂಗ್ರಹಿಸುವ ಹೊ ವಿಧಾನವಂತೆ. ನಂತರದಲ್ಲಿ ತಿಂದುಳಿದ ಆಹಾರವನ್ನು ಪ್ಲಾಸ್ಟಿಕ್ ಕೈಚೀಲಗಳ ಸಮೇತ ನನ್ನ ಒಡಲಿಗೆ ಹಾಕುವ ಪರಿಪಾಟ ಆರಂಭವಾಯಿತು. ತಮಗೆ ಬೇಡವಾದ ಹಳೆಯ ದೇವರಪಟಗಳನ್ನು, ಬಲ್ಬು, ಟ್ಯೂಬು, ಗಾಜು, ಪ್ಲಾಸ್ಟಿಕ್ ಇತ್ಯಾದಿ ತ್ಯಾಜ್ಯವಸ್ತುಗಳನ್ನು ನನ್ನೊಳಕ್ಕೆ ಬಿಸಾಕಲು ಪ್ರಾರಂಭಿಸಿದರು. ಮನೆಗಳ ಕೊಳಚೆಯ ಕೊಳವೆಗಳು ಅನೇಕ ಕಡೆ ಒಡೆದು, ಸೋರಿ ನಾನು ಮಲಿನಳಾದೆ. ಆದರೂ ನನ್ನನ್ನು ನೋಡಲು ಹೊಸ ಜನ ಬರತೊಡಗಿದರು, ಅದೂ ದೂರದೂರದ ಊರುಗಳಿಂದ, ಕ್ರಮೇಣ ಅವರಿಗಾಗಿ ಉಳ್ಳವರು ಬಾಡಿಗೆ ಕುಟಿರಗಳನ್ನು ಕಟ್ಟತೊಡಗಿದರು. ಈ ಸಂದರ್ಭದಲ್ಲಿ ಅಪೂರ್ವ ಸಸ್ಯರಾಶಿಯನ್ನು ಹಾಗೂ ಗಿಡಮೂಲಿಕೆಗಳನ್ನು ಕಸವೆಂದು ತಿಳಿದು ಕಿತ್ತರು. ಇಷ್ಟು ಸಾಲದೆಂಬಂತೆ ಕಲ್ಲು ಚಪ್ಪಟೆಗಳನ್ನು ಹಾಗೂ ಮರಳನ್ನು ಸಿಕ್ಕ ಸಿಕ್ಕ ಹಾಗೆ ನನ್ನಿಂದ ಕಿತ್ತೊಯ್ದರು. ನನ್ನ ಹೆಸರಿನಲ್ಲಿಖಂ ಹಬ್ಬ ಆಚರಿಸುವ ನೆಪದಲ್ಲಿ ಭಾರಿ ಸದ್ದಿನ ಪಟಾಕಿಗಳನ್ನು ಹಾರಿಸಿ ನನ್ನೊಡಲಿನ ಸೂಕ್ಷ್ಮ ಜೀ ಸಂಕಲು ಬೆದರಿ ಚೆಲ್ಲಾಪಿಲ್ಲಿಯಾಗತೊಡಗಿತು.

ಇದೆಲ್ಲದರ ಪರಿಣಾಮವಾಗಿ ನಾನು ಈವರೆಗೆ ಒಳಗಾಗದ, ನನ್ನ ಜೀವವನ್ನೇ ಬುಡಸಮೇತ ಅಲುಗಾಡಿಸಿದ ಅಸ್ವಸ್ಥತೆಯೊಂದು ನನ್ನನು ಕಾಡತೊಡಗಿತು. ನನ್ನ ಹರಿವಿನ ಓಘ ವಿಚಲಿತಗೊಂಡು ಬೇಸಿಗೆಯಲ್ಲಿ ಬೇಗ ಬತ್ತತೊಡಗಿದೆ. ಕೆಂದಳಿಲು, ಮಂಗಟ್ಟೆಗಳು ಹಾಗೂ ಕೋತಿಗಳು ಹಣ್ಣುಗಳನ್ನು ತಿಂದು ಮಾಡಿದ ಬೀಜ ಪ್ರಸರಣದ ಫಲವಾಗಿ ಚಿಗಿತ ಚಿಕ್ಕಪುಟ್ಟ ಸಸಿಗಳು ಕಾಡುಹಣ್ಣುಗಳ ಗಿಡಬಳ್ಳಿಗಳು ವ್ಯಾಪಾರದ ಕತ್ತಿಗಳಿಗೆ ನಿರಂತರವಾಗಿ ಬಲಿಯಾದ ಕಾರಣ ನಾನು ಸದಾ ಕಾಲಕ್ಕೂ ಕೃಶಳಾಗುತ್ತಾ ಹೋಗಿ ಅನೇಕ ಪಕ್ಷಿಗಳು, ಸಸ್ತನಿಗಳು, ಸರಿಸೃಪಗಳು, ಚಿಟ್ಟೆ, ಪತಂಗಗಳು, ಜೇಡಗಳು ಎಲ್ಲವೂ ನನ್ನಿಂದ ದೂರ ಸರಿಯುತ್ತಿವೆ. ಮರಗಳ ದಟ್ಟಣೆ ಕಡಿಮೆಯಾಗಿ ಹಾರುವ ಓತಿ ಹಾಗೂ ಹಾರುವ ಹಾವುಗಳು ಅಳಿದುಹೋಗುವ ಹಂತಕ್ಕೆ ಬಂದು ನಿಂತಿವೆ. ಮಾಲಿನ್ಯವು ಹಕ್ಕಿಗಳ ವಂಶಾಭಿವೃದ್ಧಿಯನ್ನು ಕುಂಠಿತಗೊಳಿಸಿದೆ. ಸುತ್ತಲಿದ್ದ ಬೃಹತ ಗಾತ್ರದ ಮರಗಳು ಅಕಾಲ ಮರಣವನ್ನಪ್ಪಿವೆ. ಹೀಗೆ ಎಲ್ಲ ಸಂಪತ್ತನ್ನೂ ಕಳೆದುಕೊಂಡು ಒಣಗುತ್ತಿರುವ ನನ್ನ ಬಳಿ ಈಜಲು ಕೂಡ ಜನ ಬರುತ್ತಿಲ್ಲ. ಜೀವ ಸಂಸರ್ಗವೇ ಇಲ್ಲದೆ ನನಗೆ ಹುಚ್ಚು ಹಿಡಿದಂತಾಗಿದೆ.

ಈ ಸ್ಮಶಾನ ಮೌನದ ನಡುವೆ ಎಲ್ಲಿಂದಲೋ ನನ್ನ ಪುನರುಜ್ಜೀವನಕ್ಕಾಗಿ ಕೋಟ್ಯಾಂತರ ರೂಪಾಯಿಗಳ ವೆಚ್ಚದ ಯೋಜನೆಯೊಂದು ಸಿದ್ಧವಾಗುತ್ತಿದೆ ಎಂದು ಕೇಳಿದೆ. ಮನುಷ್ಯರು ನಾನು ಮೌನವಾಗಿ ಸಾಯಲೂ ಬಿಲೊಲ್ಲರಲ್ಲ, ಇವರಿಗೆ ಹತ್ತಿರುವ ರೋಗವಾದರೀ ಯಾವಿದೆಂದು ನಾನು ಆಶ್ಚರ್ಯಪಡುತ್ತಿದ್ದೇನೆ.



**(ಲೇಖಕರು ಕೈಗಾದ ಪರಮಾಣು ವಿದ್ಯುಚ್ಛಕ್ತಿ ಕೇಂದ್ರದ ಉದ್ಯೋಗಿಯಾಗಿದ್ದು ಹವ್ಯಾಸಿ ಪತ್ರಕರ್ತರೂ ಆಗಿದ್ದಾರೆ.)**

**ಫೆಬ್ರುವರಿ, ೧೮, ಶ್ರೀರಾಮಕೃಷ್ಣ ಪರಮಹಂಸರ ಜನ್ಮದಿನ**

# ಪರಮಹಂಸ ಶ್ರೀರಾಮಕೃಷ್ಣರೆಂಬ ಬೆಳಕಿನ ಪುತ್ಥಳಿ

-ಲಕ್ಷ್ಮೀಶ ತೋಳ್ಪಾಡಿ



ಪರಮಹಂಸ ಶ್ರೀ ರಾಮಕೃಷ್ಣರು ಜನಿಸಿದ್ದು ೧೮೩೬ರ ಫೆಬ್ರುವರಿ ೧೮ರಂದು. ಈಗ ಹಿಂತಿರುಗಿ ನೋಡುವಾಗ ಆ ಕಾಲ-ದೇಶಗಳು ವಿಶಿಷ್ಟವಾಗಿ ಕಾಣಿಸುತ್ತದೆ. ಬಂಗಾಳ ಎಂಬ ನಾಡು ಪರಾಧೀನ ಭಾರತದಲ್ಲಿ ಪುನರುಜ್ಜೀವನದ ಕನಸೊಂದು ಚಿಗುರೊಡೆದ ಮೊದಲ ನೆಲವಾಗಿತ್ತು. ರಾಜಾರಾಮ ಮೋಹನ್‌ರಾಯ್ ಈ ಕನಸನ್ನು ಕಂಡ ಮೊದ ಮೊದಲಿಗರಲ್ಲಿ ಓರ್ವ ರಾಗಿದ್ದರು. ರಾಯ್ ೧೮೨೮ರಲ್ಲಿ 'ಬ್ರಹ್ಮ ಸಮಾಜ'ವನ್ನು ಸ್ಥಾಪಿಸಿದ್ದರು. 'ಬ್ರಹ್ಮ ಸಮಾಜ'ವು ವಿಗ್ರಹಾರಾಧನೆಯನ್ನು ಮಾನ್ಯ ಮಾಡುತ್ತಿರಲಿಲ್ಲ. ಅದು ನಿರಾಕಾರವಾದಿಯಾಗಿತ್ತು. ಉಪನಿಷತ್ತುಗಳ ವಿಚಾರಮಾರ್ಗವನ್ನು ಮಾತ್ರ ಒಪ್ಪುವಂಥದಾಗಿತ್ತು. ಧಾರ್ಮಿಕ-ಸಾಮಾಜಿಕ ವಿಷಯಗಳಲ್ಲಿ ಸುಧಾರಣಾವಾದಿಯಾಗಿತ್ತು. ಈ ಚಿಂತನೆಗಳು; ಉಪಕ್ರಮಗಳು ತೀರ ಜಡ ಸಂಪ್ರದಾಯವಾದಿಗಳನ್ನುಳಿದು ಯೋಚಿಸಬಲ್ಲ ಎಲ್ಲರೂ ಒಪ್ಪುವಂಥವೇ ಆಗಿದ್ದವು. ಎಲ್ಲವೂ ನಿಜ. ಆದರೆ ಸಮಾಜ ಶರೀರದಲ್ಲಿ ಹೊಸ ರಕ್ತವನ್ನು ಹರಿಸುವ ಇಂಥ ಆಲೋಚನೆಗಳ ಹಿಂದೆ ಇತಿಹಾಸದ ವ್ಯಂಗ್ಯ ನಗುವೊಂದು ಅಡಗಿದೆ ಎನ್ನುವುದೂ ಅಷ್ಟೇ ನಿಜ.

ವ್ಯಂಗ್ಯವೇನೆಂದರೆ ಈ ಎಲ್ಲ ಉಪಕ್ರಮಗಳು ನಮ್ಮನ್ನಾಳುವ ವರ್ಗವಾಗಿದ್ದ ಬ್ರಿಟಿಷರ ಮಾನಸಿಕತೆಗೆ ಹತ್ತಿರವಿದ್ದವು ಮತ್ತು ಪೋಷಕವಾಗಿದ್ದವು. ಹೊಸತಾಗಿ ತನ್ನ ಅಧೀನರಾದ, ಭಿನ್ನ ಸಂಸ್ಕೃತಿಯೊಂದಕ್ಕೆ ಸೇರಿದ ಪ್ರಜೆಗಳನ್ನು ಅವರ ಹಳೆಯ ಮಾನಸಿಕತೆಯಿಂದ ಹೊರತರುವುದೇ ಆಳುವ ಮೇಧಾವಿಗಳ ಉದ್ದೇಶವಾಗಿರುತ್ತದಲ್ಲವೇ? ಹಾಗಲ್ಲದೆ, ನಿಮ್ಮ ಬಿಡುಗಡೆಗಾಗಿಯೇ ನಾವು ನಿಮ್ಮನ್ನು ಆಳಬೇಕಾಗಿ ಬಂದಿದೆ. ನಮ್ಮ ಅಧೀನರಾಗಿರುವುದೇ ನಿಮ್ಮ ನಿಮ್ಮ ಬಿಡುಗಡೆಯ ದಾರಿಯೂ ಆಗಿದೆ ಎಂಬ ಚಾಣಾಕ್ಷ ವಾದವನ್ನು ಸಾಧಿಸುವುದು ಹೇಗೆ?

ಇದು ಇನ್ನಷ್ಟು ಸ್ಪಷ್ಟವಾಗಬೇಕಾದರೆ ಇದೇ ಕಾಲಮಾನದ ಲಾರ್ಡ್ ಮೆಕಾಲೆಯ ಚಿಂತನೆಯ ಕ್ರಮಗಳನ್ನು ನೋಡಬೇಕು. ೧೮೩೬ ರಲ್ಲಿ ಮೆಕಾಲೆ ತನ್ನ ತಂದೆಗೆ ಬರೆದಿದ್ದ ಪತ್ರದ ಸಾಲುಗಳು ಹೀಗಿದೆ.

"Our English Schools are flourishing wonderfully. It's my firm belief that if our plans of education are followed up, there will not be a single idolator (Hindu) among the respectable classes in Bengal thirty years hence"

Idolater, ಅಂದರೆ ವಿಗ್ರಹಾರಾಧಕ ಜನ. ಹುಸಿ ದೇವರನ್ನು(ಫಾಲ್ಸ್ ಗಾಡ್ಸ್) ನಂಬುವ ಮಂದಿ ಎಂದರ್ಥ. ಆಳುವ ವರ್ಗದ ಉದ್ದೇಶ ಸಾಧನೆಗೆ ನೆರವಾಗುವುದು 'ಬ್ರಹ್ಮಸಮಾಜ'ದ ಅಥವಾ ಇತರ ಆಧುನಿಕ ಚಿಂತಕರ ಉದ್ದೇಶವಲ್ಲ ಎನ್ನುವುದು ಸುವಿದಿತವೇ ಆಗಿದ್ದರೂ ಈ ಆಲೋಚನೆಗಳ ಹಿನ್ನೆಲೆಯಲ್ಲಿ ಇತಿಹಾಸವು ವ್ಯಂಗ್ಯ ನಗುವೊಂದನ್ನು ನಗುತ್ತಿದೆ ಎನ್ನುವುದೂ ಅಷ್ಟರ ಮಟ್ಟಿಗೆ ವಿದಿತವೇ ಆಗಿದೆ.

ಆದರೆ ಸ್ವಾರ್ಥಸಾಧನೆಯ ತಂತ್ರಗಾರಿಕೆಗಳಿಂದ ಕೂಡಿದ ಮನುಷ್ಯ ಇತಿಹಾಸದ ವ್ಯಂಗ್ಯ ನಗುವಿನ ಹಿಂದೆ ವ್ಯಂಗ್ಯದ ಲವಲೇಶವಿಲ್ಲದ ಮುಗ್ಧ ನಗುವೊಂದನ್ನು ದೇವರು ನಗುತ್ತಿದ್ದಾನೆ! ಅದೇ ೧೮೩೬ರಲ್ಲಿ, ಅದೇ ಬಂಗಾಳದ ಮಣ್ಣಿನಲ್ಲಿ ಎಲ್ಲ ಮೇಧಾವಿಗಳೂ ಹೀಗಳೆಯುವ, ಅದೇ ವಿಗ್ರಹಾರಾಧನೆಯ ಮೂಲಕವೇ. ಭಿನ್ನ ಸಂಸ್ಕೃತಿಯ ಸಂಪರ್ಕದ ಮೂಲಕ ಮಾನವ ಪ್ರಜ್ಞೆಯಲ್ಲಿ ಹೊಸ ವಿಕಾಸವೊಂದು ಉಂಟಾಗುತ್ತದೆ ಎಂದು ಹೆಚ್ಚಿನೆಲ್ಲ ಬುದ್ಧಿವಂತರೂ ನಂಬಿರುವ ಹೊತ್ತಿನಲ್ಲಿ-ಅಂಥ ಭಿನ್ನ ಸಂಸ್ಕೃತಿಯ ಪರಿಚಯವೇ ಇಲ್ಲದೆ-ತನ್ನದೇ ಸ್ವಧರ್ಮದಲ್ಲಿ ಆಳವಾಗಿ ಮುಳುಗಿಯೇ-ಮಾನವ ಪ್ರಜ್ಞೆ ಪಡೆಯಬಹುದಾದ ಪರಮ ಸಿದ್ಧಿಯನ್ನು ಪಡೆದ ಶ್ರೀರಾಮಕೃಷ್ಣರು ಈ ಭೂಮಿಯಲ್ಲಿ ಹುಟ್ಟಿ ಬಂದರೆಂಬುದೇ ಈ ಮಾತಿಗೆ ಸಾಕ್ಷಿಯಾಗಿದೆ.

ವಿಗ್ರಹಾರಾಧನೆಯ ಬಗೆಗೆ ಎರಡು ಮಾತು. ವಿಗ್ರಹಾರಾಧನೆ ಎಂದರೇನು ?

ಅದು ಜಡವೆಂದು ನಮಗೆ ಮೇಲ್ನೋಟಕ್ಕೆ ಭಾಸವಾಗುವ ವಸ್ತುವಿನಲ್ಲಿ ಇರುವ ಚೈತನ್ಯದ ಅಂಶವನ್ನು ಗುರುತಿಸುವ ಭಾವ ಸೂಕ್ಷ್ಮ.

ಮರದೊಳಗಣ ಮಂದಾಗ್ನಿ ಎಂದರು ವಚನಕಾರರು.

ಶಿಲೆಯೊಳಗಣ ಪಾವಕ ಎಂದರು.

ಉದಕದೊಳಗಣ ಪ್ರತಿಬಿಂಬ ಎಂದರು.

ಶಬ್ದದೊಳಗಣ ನಿ :ಶ್ಯಬ್ದ ಎಂದರು.

ಉಪನಿಷತ್ತುಗಳಲ್ಲಿ-ಭಗವದ್ಗೀತೆಯಲ್ಲಿ-ಎಲ್ಲೆಡೆಯ ಸಂತರ ಉಕ್ತಿಗಳಲ್ಲಿ ಇಂಥ ಉದಾಹರಣೆಗಳನ್ನು ಹೇರಳವಾಗಿ ಕಾಣಬಹುದಾಗಿದೆ. ಈ ಉದಾಹರಣೆಗಳು ಏನನ್ನು ಸೂಚಿಸುತ್ತವೆ. ಅಂದರೆ ನಮ್ಮ ಇಂದ್ರಿಯಗಳಿಗೆ ಒದಗುವ ಅನುಭವಗಳಲ್ಲಿಯೆ, ಆ ಅನುಭವಗಳನ್ನು ಕೆಡಿಸದೆ ಅದನ್ನು ಮೀರಿರುವ ಇನ್ನೊಂದು ಇದೆ ಎಂದು ಅರಿಯಬಲ್ಲ ಸೂಕ್ಷ್ಮತೆ.

ಇದು ನಮ್ಮ ಸಂವೇದನೆಯ ಭಾಗವಾದಾಗ ಅಂಥ ದೇಹವೇ ವಿಗ್ರಹದಂತೆ ಆಗುವುದು. ಆ ಅರಿವಿನಲ್ಲಿ ಮೈ ಮರೆಯುವುದು. ಮೈಮರೆತ, ತನ್ನನ್ನು ತಾನೇ ಮರೆತ ಮೈ ವಿಗ್ರಹ ಸದೃಶವಾಗಿ ಜೀವಂತ ವಸ್ತುವಿನ ಪ್ರತೀಕವಾಗುವುದು. ಅಲೌಕಿಕ ದೃಷ್ಟಿಗೆ ಜಡವೆಂದು ಕಂಡದ್ದು ಆಧ್ಯಾತ್ಮಿಕ ದೃಷ್ಟಿಗೆ ಜೀವಂತ ವಸ್ತುವಿನ ಪ್ರತೀಕವಾಗಿ ಬಿಡುವುದು. ಪರಮಹಂಸ ಶ್ರೀರಾಮಕೃಷ್ಣರ ಚರಿತ್ರೆಯೆಂದರೆ ಹುಟ್ಟಿ ಬೆಳೆದು ಮಣ್ಣಲ್ಲಿ ಮಣ್ಣಾಗಿ ಹೋಗುವ ಮನುಷ್ಯರ ದೇವರ ವಿಗ್ರಹ ವಾಗಬಲ್ಲರು ಎಂಬ ಅತ್ಯಪೂರ್ವ ತಥ್ಯವನ್ನು ತೋರಿಸಿದ ಚರಿತ್ರೆ. ಮತ್ತು ಇದೆಲ್ಲವೂ ಕಾಳಿಯ ವಿಗ್ರಹದೆದುರು, ತಾಯಿಯನ್ನು ಕಾಣದೆ ಕಂಗೆಟ್ಟ ಮಗುವಿನ ಅಸದಳ ವ್ಯಾಕುಲತೆಯನ್ನು ಹೊತ್ತು ನಿಂತು ಅಷ್ಟು ಕರೆದ ಫಲ! ಅನ್ಯಥಾ ವ್ಯಾಕುಲತೆಯ ಗೂಡಾಗಿರುವ ಮಾನವರ ಮನಸ್ಸಿಗೆ ತಮ್ಮ ವ್ಯಾಕುಲತೆಯ ಶಕ್ತಿಯೇನು ಎಂಬ ಅರಿವನ್ನೇ ಇನ್ನೊಂದು ರೀತಿಯಲ್ಲಿ ಸೂಚಿಸಿದ ಚರಿತ್ರೆ ಶ್ರೀರಾಮಕೃಷ್ಣರದು! ಇದು ಬುದ್ಧನ ದುಃಖ ಮೂಲವಾದ ತತ್ವಜ್ಞಾನದ ಇನ್ನೊಂದು ರೂಪವೇ ಸರಿ.

ಶ್ರೀರಾಮಕೃಷ್ಣರ ಬದುಕು ಅತ್ಯುತ್ಕಟವಾದ ಭಾವ ಸಮೃದ್ಧಿಯ ಬದುಕು. ಅವರ ಸಕಲ ಜೀವಕೋಶಗಳು ಒಮ್ಮುಖವಾಗಿ ಒಂದು ಭಾವದೆಡೆಗೆ ತುಡಿಯುವುದನ್ನು ಕಾಣುತ್ತೇವೆ. ಅಂತರ್ ವಿರೋಧ ಎನ್ನುವ ಮಾತೇ ರಾಮಕೃಷ್ಣರ ಮನೋದೈಹಿಕ ವ್ಯವಸ್ಥೆಯಲ್ಲಿ ಇದ್ದಿಲ್ಲ ಎನ್ನಬೇಕು. ಮಗುವೊಂದು ಸ್ವ-ಪ್ರಜ್ಞೆ ಮೂಡುವ ಮುನ್ನ ಬದುಕನ್ನು ಹೇಗೆ ನೋಡುತ್ತದೆ. ಹಾಗೆ ತಮ್ಮ ಐವತ್ತು ವರ್ಷಗಳ ಬದುಕಿನುದ್ದಕ್ಕೆ ಅವರು ಬಾಳಿದರು!

ಬಾಲ್ಯದಲ್ಲಿ ಬಂಗಾಳದ ಸಂತ ಚೈತನ್ಯದೇವನ -ಕೃಷ್ಣ- ರಾಧಾ ಭಾವದ ಪರವಶತೆಯ ಕಥೆಗಳು ರಾಮಕೃಷ್ಣರ ಕಿವಿ ತುಂಬಿದ್ದವು. ಜೀವದ ಅಹಂಕಾರವು ತನ್ನಲ್ಲಿ ತಾನೇ ಕೃತಾರ್ಥವಾಗುವಂತಹುದಲ್ಲ, ಅದು ಭಗವಂತನನ್ನು ಕುರಿತ ಅನನ್ಯ ಹಂಬಲವಾಗಿ ಮಾರ್ಪಡಬಲ್ಲ ಭಾವ ದ್ರವ್ಯ ಎಂಬ ಸಾರವೊಂದು ಅವರಲ್ಲಿ ಮಿಂಚಿತು!

ಪರವಶಗೊಳ್ಳುವ ಸಾಮರ್ಥ್ಯ ರಾಮಕೃಷ್ಣರಲ್ಲಿ ಬೆಳೆಯುತ್ತಲೇ ಹೋಯಿತು. ಆಗಸದಲ್ಲಿ ಬೆಳ್ಳಕ್ಕಿಗಳ ಹಿಂಡು ಹಾರಿಬಂದುದನ್ನು ಕಂಡು ಭಾವ ಸಮಾಧಿಯನ್ನೇ ಅನುಭವಿಸಿದವರವರು. ಭಾವಸಮಾಧಿ ಎಂದರೆ ಮನಸ್ಸು ತನ್ನನ್ನೇ ತೆತ್ತುಕೊಂಡ ಸ್ಥಿತಿ. ಎಲ್ಲ ಪೂರ್ವಾಗ್ರಹಗಳೂ ತೆರವಾದ ಸ್ಥಿತಿ. ಕುವೆಂಪು ಅವರ -ದೇವರು ರುಜು ಮಾಡಿದನು- ಎಂಬ ಕವನ ಈ ಅನುಭವವನ್ನೇ ಕವನಿಸಿದಂತಿದೆ. ಇಂಥ ಮನೋಧರ್ಮಕ್ಕೆ ಸರ್ವಧರ್ಮ ಸಮಭಾವ ಎಂಬ ದರ್ಶನವು ಎಷ್ಟು ಹತ್ತಿರವಿದೆ ಎಂದು ಬೇರೆ ಹೇಳಬೇಕಿಲ್ಲ.

ಆಧ್ಯಾತ್ಮಿಕತೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಬುದ್ಧದೇವ ಉಪದೇಶಿಸಿದ -ದುಃಖ ವಿಮೋಚನೆಯ ಮಾರ್ಗವನ್ನು ತಿಳಿಸಲೆಂದು ಭಿಕ್ಕುಗಳು ವಿದೇಶಗಳಿಗೆ ತೆರಳಿದ್ದರು. ಇದಾಗಿ ೨೫೦೦ ವರ್ಷಗಳ ಅನಂತರ ಇನ್ನೊಮ್ಮೆ ಲೋಕಕ್ಕೆ ಸರ್ವಧರ್ಮ ಸಮಭಾವದ ಸಂದೇಶವನ್ನು ಹೊತ್ತು ಸ್ವಾಮಿ ವಿವೇಕಾನಂದರು ವಿದೇಶಕ್ಕೆ ತೆರಳಿದರು. ಭಿಕ್ಕುಗಳ ಹಿಂದೆ ಇದ್ದದ್ದು ಬುದ್ಧದೇವ ವಿವೇಕಾನಂದರ ಹಿಂದೆ ಇದ್ದದ್ದು ಶ್ರೀರಾಮಕೃಷ್ಣ..



**(ಲೇಖಕರು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿನ ಬಹುಶ್ರುತ ವಿದ್ವಾಂಸರು ಮತ್ತು ಹಿರಿಯ ಚಿಂತಕರು)**

**ನಮ್ಮ ಮುಂದಿನ (ಮಾರ್ಚ್) ಸಂಚಿಕೆ:**

**ಮಹಿಳಾ ವಿಶೇಷ ಸಂಚಿಕೆ**

# ಸಿನಿಮಾ, ಸಾಹಿತ್ಯ, ಸಮ್ಮೇಳನ ಇತ್ಯಾದಿ : ಕೆಲ ಬಿಡಿ ಟಿಪ್ಪಣಿಗಳು

## ಹಳೆಯ ಕನ್ನಡ ಚಿತ್ರಗಳ ಸಂರಕ್ಷಣೆ: ಸಂಸ್ಕೃತಿ ರಕ್ಷಣೆಯ ಕೆಲಸ




ಇತ್ತೀಚೆಗೆ, ಓದಿ ಬೇಸರವಾದಾಗ ಸಂಗೀತ ಕೇಳಲು, ಸಿನಿಮಾ ನೋಡಲು ನಾನು ಯೂ-ಟ್ಯೂಬ್ ಮೊರೆ ಹೋಗುತ್ತೇನೆ, ಬೇಸರವಾದಾಗ ಎಂದು ಹೇಳಿದೆನಲ್ಲ, ಹಾಗಾಗಿ ನಾನು ಸಿನಿಮಾ ಅಂದರೆ ತಥಾಕಥಿತ ಕಲಾತ್ಮಕ ಸಿನಿಮಾಗಳನ್ನೇನೂ ನೋಡಹೋಗುವುದಿಲ್ಲ. ಹೆಚ್ಚಿನಮಟ್ಟಿಗೆ ನನ್ನ ಆಯ್ಕೆ ಹಳೆಯ ಕಪ್ಪು ಬಿಳುಪು ಕನ್ನಡ ಚಿತ್ರಗಳು. ಹೀಗೆ ಮೊನ್ನೆ ಕನ್ನಡದ ಮೊದಲ ಕಾದಂಬರಿ ಆಧಾರಿತ (ಕೃಷ್ಣಮೂರ್ತಿ ಪುರಾಣಿಕರ 'ಧರ್ಮದೇವತೆ') ಚಲನಚಿತ್ರ 'ಕರುಣೆಯೇ ಕುಟುಂಬದ ಕಣ್ಣು' ನೋಡಿದೆ.. ರಾಜ್‌ಕುಮಾರ್ ತೆರೆಯ ಮೇಲೆ ಸಿಗರೇಟ್ ಸೇದುವ 'ಕೆಟ್ಟವ'ನಾಗಿ ನಟಿಸಿದ ಮೊದಲ ಮತ್ತು ಕೊನೆಯ ಚಿತ್ರವಿದು. ಜೊತೆಗೆ ಮುಂದೆ ಒಳ್ಳೆಯ 'ಅಮ್ಮ'ನಾಗಿ ಮಾತ್ರ ತೆರೆಯ ಮೇಲೆ ಕಂಡ ಜಯಶ್ರೀ ಖಳರಾಗಿ ಕಾಣಿಸಿಕೊಂಡ ಚಿತ್ರ. ಕೃಷ್ಣಮೂರ್ತಿ ಪುರಾಣಿಕರ ಭಾವನಾಮಯ ಸಾಂಸಾರಿಕ ಕತೆ, ಜಿ.ಕೆ. ವೆಂಕಟೇಶ್ ಅವರಿಗೆ ವಿಶಿಷ್ಟವಾದ ಸರಳ ಮಾಧುರ್ಯದ ಹಲವು ('ಬಾರಮ್ಮ ಗುರುಸೇವೆ ಮಾಡುವಾ...', 'ಪ್ರೇಮಗಾನಾ ತಂದಾ ಯೌವ್ವನಾ...', 'ನಿಜವೋ ಸುಳ್ಳೋ ನಿರ್ಧರಿಸಿ...': ಕನ್ನಡದ ಮೊದಲ ಕವ್ವಾಲಿ ಇತ್ಯಾದಿ) ಹಾಡುಗಳು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಟಿ.ವಿ. ಸಿಂಗ್ ಠಾಕೂರ್ ಅವರ (ಅರವತ್ತರ ದಶಕದ ಹಲವು ಪ್ರಶಸ್ತಿ ಪುರಸ್ಕೃತ ಕನ್ನಡ ಚಿತ್ರಗಳ ನಿರ್ದೇಶಕರಾದ ಇವರನ್ನು ಕನ್ನಡಿಗರು ಮರೆತೇ ಹೋಗಿರುವಂತಿದೆ. ತಿಳಿದವರು ಯಾರಾದರೂ ಇವರ ಬಗ್ಗೆ ಬರೆದು ಇವರಿಗೆ ನ್ಯಾಯ ಸಲ್ಲಿಸಬೇಕು.) ಐವತ್ತು ವರ್ಷಗಳ ನಂತರ ಮತ್ತೆ ಈ ಚಿತ್ರ ನೋಡಿ ಸಂತೋಷಪಟ್ಟೆ.

ಆದರೆ ನೋಡಿ ಸಂತೋಷಪಡಲು ಇಂದು ಇಂತಹ ಎಷ್ಟು ಚಿತ್ರಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ? ಹೀಗೆ ಲಭ್ಯವಾಗುವ ಅತ್ಯಂತ ಹಳೆಯ ಚಿತ್ರವೆಂದರೆ ಸುಬ್ಬಯ್ಯ ನಾಯ್ಡು ಅವರ 'ವಸಂತಸೇನಾ' ಎಂದು ಕಾಣುತ್ತದೆ. ನಾನೇ ನನ್ನ ಅರವತ್ತರ ದಶಕದ ಆರಂಭದ ಬಾಲ್ಯದಲ್ಲಿ ನೋಡಿದ ಹಲವು ಚಿತ್ರಗಳು ಸೂಕ್ತ ಸಂರಕ್ಷಣೆ ಇಲ್ಲದೆ ಕಾಣೆಯಾಗಿವೆ, ಉದಾಹರಣೆಗೆ ಕೆಂಪರಾಜ ಅರಸು ಅವರ ಸಾಹಸಮಯ ಚಿತ್ರ 'ಜಲದುರ್ಗ' ಹಾಗೂ ತೆಲುಗಿನ ಖ್ಯಾತ ನಟಿ ನಟಿಸಿ ಗೀತೆಗಳನ್ನೂ ಹಾಡಿರುವ 'ನಳದಮಯಂತಿ' ಬಿ.ಎಸ್. ರಂಗಾ ಅವರ 'ಭಕ್ತ ಮಾರ್ಕಂಡೇಯ', ಪಂತಲು ಅವರ 'ಮೊದಲ ತೇದಿ', ಆರ್. ನಾಗೇಂದ್ರ ರಾವ್ ನಿರ್ದೇಶನದ 'ಪ್ರೇಮದ ಪುತ್ರಿ', ಏವಿಎಂ ನವರ 'ಆದರ್ಶ ಸತಿ', ಗುಬ್ಬಿ ವೀರಣ್ಣನವರ 'ಸದಾರಮೆ, ಎಂ.ವಿ. ರಾಜಮ್ಮನವರು ನಿರ್ಮಿಸಿದ ಮೊದಲ ಮಕ್ಕಳ (ಮತ್ತು ಒಂದು ರೀಲ್ ಬಣ್ಣದಲ್ಲಿದ್ದ) 'ಮಕ್ಕಳ ರಾಜ್ಯ', ಕನ್ನಡದ ಮೊದಲ ಪ್ರಾಯೋಗಿಕ ಚಿತ್ರವೆಂದು ಹೇಳಲಾಗಿದ್ದ ಎಂ.ಆರ್. ವಿಠಲ್ ನಿರ್ದೇಶನದ 'ಮಂಗಳ ಮುಹೂರ್ತ', ರಾಜಾಶಂಕರ್ ನಾಯಕರಾಗಿದ್ದ ಮತ್ತು ಈಗಲೂ ಜನಪ್ರಿಯವಾಗಿರುವ ಪಿಬಿಎಸ್ ಹಾಡಿರುವ 'ಹಳ್ಳಿಯೂರ ಹಮ್ಮೀರ' ಗೀತೆಯ 'ಅಮರಜೀವಿ', ಬಾಲಕೃಷ್ಣರಿಗೆ ಬಹುಕಾಲ 'ದಲ್ಲಾಳಿ ಸೀತಾರಾಮಯ್ಯ' ಎಂಬ ಅಡ್ಡ ಹೆಸರು ನೀಡಿದ್ದ ಮತ್ತು 'ಕನಸಲ್ಲಿ ಒಬ್ಬ ಕಳ್ಳ ಬಂದ, ಏನೇನೋ ಕತೆಯ ಹೇಳಿ ಹೋದ' ಎಂಬ ಬಹುಕಾಲ ಚಿತ್ರ ರಸಿಕರ ತುಟಿಗಳ ಮೇಲೆ ನಲಿದಿದ್ದ ಸುಕೋಮಲ ಪ್ರೇಮಗೀತೆಯಿದ್ದ 'ಕನ್ಯಾದಾನ', ಬಾಲಕೃಷ್ಣರ ನಿರ್ಮಾಣದ 'ಕಲಿತರೂ ಹೆಣ್ಣೆ'ಗಳಲ್ಲದೆ, ಕಲ್ಯಾಣ ಕುಮಾರ್ ಅಭಿನಯಿಸಿದ ಪ್ರಸಿದ್ಧ ಚಿತ್ರ 'ಬೆಟ್ಟದ ಕಳ್ಳ', ವಿವರಗಳು ಮರೆತು ಹೋ', 'ಸತಿ ನಳಾಯಿನಿ' ಇತ್ಯಾದಿ.

ನಾನು ಕೇಳಿ ತಿಳಿದಂತೆ ಹಿಂದಿ, ತಮಿಳು ತೆಲುಗು ಚಿತ್ರರಂಗದವರು ತಮ್ಮ ಭಾಷೆಗಳ ಎಲ್ಲ ಚಿತ್ರಗಳನ್ನೂ ಸಂರಕ್ಷಿಸಿ ಇಟ್ಟುಕೊಂಡಿದ್ದಾರೆ. ಆದರೆ ಕನ್ನಡಿಗರ ದೌರ್ಭಾಗ್ಯವೆಂದರೆ, ಅಂತಹ ಪ್ರಯತ್ನಕ್ಕೆ ಬೇಕಾದ ಶ್ರದ್ಧೆ ಯಾರಲ್ಲೂ ಕಂಡುಬರಲಿಲ್ಲ. ಎಷ್ಟಾದರೂ ಕನ್ನಡಿಗರು ಎಂದಿನಿಂದಲೂ ತಮ್ಮ ಭಾಷಾ ನಿರಭಿಮಾನಕ್ಕೆ ಕುಪ್ರಸಿದ್ಧರಲ್ಲವೆ? ಇದರ ಪರಿಣಾಮವೆಂದರೆ, ದ. ಭಾರತದ ಮೊದಲ ಸಾಮಾಜಿಕ ಚಿತ್ರವೆಂಬ ಹೆಗ್ಗಳಿಕೆ ಇರುವ ಎಚ್‌ಎಲ್‌ಎನ್ ಸಿಂಹ ಅವರ 'ಸಂಸಾರ ನೌಕೆ'ಯಾಗಲೀ, ಐವತ್ತರ ದಶಕದಲ್ಲಿ ದಾವಣಗೆರೆಯಲ್ಲಿ ಇಪ್ಪತ್ತೈದು ವಾರ ಓಡಿ ದ. ಭಾರತದಲ್ಲೇ ಗಲ್ಲಾಪೆಟ್ಟಿಗೆ ದಾಖಲೆ ನಿರ್ಮಿಸಿದ 'ಜಗನ್ಮೋಹಿನಿ' ಚಿತ್ರಗಳ ಅವಶೇಷಗಳಾಗಲೀ ಇಂದು ಲಭ್ಯವಿಲ್ಲದಾಗಿವೆ. ಇವುಗಳ ಕೆಲವುದರ ಪ್ರಿಂಟ್‌ಗಳು ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್ ಮತ್ತು ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯ ಭಂಡಾರದಲ್ಲಿ ಇವೆಯೆಂದು ಹೇಳಲಾಗುತ್ತದೆ. ಕನಿಷ್ಠ ಇವನ್ನಾದರೂ ಸೂಕ್ತವಾಗಿ ಸಂರಕ್ಷಿಸಿ ಅವುಗಳನ್ನು ಸಾರ್ವಜನಿಕ ವೀಕ್ಷಣೆಗೆ ಬಿಡುಗಡೆ ಮಾಡುವುದು ಸರ್ಕಾರದ ಸಾಂಸ್ಕೃತಿಕ ನೀತಿಯ ಭಾಗವಾಗಬೇಕು. ಮೊದಲಿಂದಲೂ ಏರುಹುಬ್ಬಿನ ವರ್ಗವಾಗಿರುವ ಕನ್ನಡ ಬುದ್ಧಿಜೀವಿ ವರ್ಗ ತಾನು 'ಕಲಾತ್ಮಕ' ಎಂದು ಗುರುತಿಸುವ ಚಿತ್ರಗಳನ್ನಷ್ಟೇ ಅಲ್ಲದೆ ಎಲ್ಲ ಕನ್ನಡ ಚಲನಚಿತ್ರಗಳ ಸಂರಕ್ಷಣೆಯನ್ನೂ ಕನ್ನಡ ಸಂಸ್ಕೃತಿಯ ಸಂರಕ್ಷಣೆಯ ಭಾಗವೆಂದು ಪರಿಗಣಿಸಿ ಈ ಸಂಬಂಧ ಸರ್ಕಾರದ ಮೇಲೆ ಒತ್ತಡ ತರಬೇಕು.



ಈಗ ಸರ್ಕಾರದ್ದೇ ಆದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ, ಚಲನಚಿತ್ರ ಅಕಾಡೆಮಿಯ ಮಾಜಿ ಅಧ್ಯಕ್ಷರೂ ಆಗಿರುವ ಟಿ.ಎಸ್. ನಾಗಾಭರಣ ಅವರು ನುರಿತ ಚಲನಚಿತ್ರ ನಿರ್ದೇಶಕರಲ್ಲದೆ ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಉತ್ತಮ ಅಭಿರುಚಿ ಹೊಂದಿದವರಾಗಿದ್ದು, ಉದ್ಯಮದ ಒಳಹೊರಗನ್ನು ಅರಿತವರು. ಕನ್ನಡಾಭಿಮಾನಿಗಳು ಕೂಡ. ಅವರು ಕನ್ನಡ ಚಲಚಿತ್ರ ಜಗತ್ತಿನ ಉತ್ಖನನದ ಈ ಯೋಜನೆಯನ್ನು ಕೈಗೆತ್ತಿಕೊಂಡರೆ ಅದೊಂದು ಐತಿಹಾಸಿಕ ಕೆಲಸವಾದೀತು ಮತ್ತು ಅವರ ಹೆಸರು ಈ ಇತಿಹಾಸದ ಪುಟಗಳಲ್ಲಿ ದಾಖಲೆಯಾದೀತು.

## ಹಾವೇರಿ ಜಾತ್ರೆಯಲ್ಲಿ ಗೌಡರ ಮೆರವಣಿಗೆ!



**ದೊ**ಡ್ಡರಂಗೇಗೌಡರು ಹಾವೇರಿಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಸಾಹಿತ್ಯ ಪರಿಷತ್ತು, ಸಮ್ಮೇಳನ ಅವುಗಳ ಅಧ್ಯಕ್ಷತೆ ಇತ್ಯಾದಿಗಳು ತಮ್ಮ ಮಹತ್ವ ಮತ್ತು ಗೌರವಗಳನ್ನು ಕಳೆದುಕೊಂಡು ಹಲವು ವರ್ಷಗಳೇ ಆಗಿರುವ ಕಾರಣ, ನಾನು ಈ ಬಗ್ಗೆ ಬರೆಯುವ ಮನಸ್ಸಿಲ್ಲವಾದರೂ, ಗೌಡರು ಒಂದು ಕಾಲದ ನನ್ನ ಗೆಳೆಯರಾಗಿದ್ದುದರಿಂದ ಅವರನ್ನು ಇಲ್ಲಿ ಔಪಚಾರಿಕತೆಗಾದರೂ ಅಭಿನಂದಿಸಬೇಕಿದೆ. ದೊರಂಗೌ ಎಂದೇ ನಮ್ಮ ಮಧ್ಯೆ ಪರಿಚಿತರಾಗಿದ್ದ ಗೌಡರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ನಾನು ಎಂಎಸ್‌ಸಿ ಮಾಡುತ್ತಿದ್ದಾಗ ಅವರು ಕನ್ನಡ ಎಂಎ. ವಿದ್ಯಾರ್ಥಿ. ಬಿಡುವಿನ ವೇಳೆಯಲ್ಲಿ ಅರೆಕಾಲಿಕ ಉದ್ಯೋಗ ಮಾಡುತ್ತಾ ಶಿಕ್ಷಣ ಮುಂದುವರೆಸಿದ್ದ ಅವರು ಬಡತನದ ಹಿನ್ನೆಲೆಯಿಂದ ಬಂದ ನಮ್ರ ಮತ್ತು ಸಾತ್ವಿಕ ವ್ಯಕ್ತಿಯೆಂದು ಗುರುತಿಸಲ್ಪಟ್ಟವರಾಗಿದ್ದರೂ, ಆ ಕಾಲದಲ್ಲಿ ಮಹಾ ಬಂಡಾಯವೆನಿಸಿದ್ದ ಅಂತರ್ಜಾತಿ ಮದುವೆ ಮಾಡಿಕೊಂಡು ನಮ್ಮೆಲ್ಲರ ಕುತೂಹಲ ಕೆರಳಿಸಿದ್ದರು. ಜೊತೆಯಲ್ಲೇ, ಆ ಕಾಲದ ಸಾಹಿತ್ಯ ಸಂಭ್ರದ ಸುಳಿಗೆ ಸಿಕ್ಕಿ ಅವರು ಕಾವ್ಯ ಬರೆಯಲಾರಂಭಿಸಿದರೂ, ಆ ರಂಗದಲ್ಲಿ ಅವರು ಹೆಚ್ಚಿನ ಸಾಧನೆಯನ್ನೇನೂ ಮಾಡಲಾಗದಾದರು. ಆಗ ಇವರ ಬಗ್ಗೆಡ , ಲಂಕೇಶ್ ರಚಿಸಿದ್ದ ಒಂದು ಚುಟಕ ಹೀಗಿತ್ತು :'ದೊಡ್ಡರಂಗೇಗೌಡ್ರು, ಮುಖದ ತುಂಬ ಪೌಡ್ರು! ಇದು ಅವರ ಕಾವ್ಯದ ಬಗೆಗೂ ಮಾಡಿದ ವ್ಯಾಖ್ಯಾನವೆಂದು ಕೆಲವರ ಅಂಬೋಣ (ಲಂಕೇಶರ ಆಗಿನ ಕಾಲದ ಇಂತಹುದೇ ಖಯಾಲಿಯ ಚುಟಕ : ಕವೆಂ ರಾಜಗೋಪಾಲ, ನವ್ಯ ಕಾವ್ಯದ ಬಾಲ!)

ಬಹುಶಃ ಇದರಿಂದ ಕಂಗೆಟ್ಟ ಗೌಡರು ತಮ್ಮ ಕುಲದೇವತಾ ಪ್ರಸನ್ನತೆಗಾಗಿ ಆದಿಚುಂಚನಗಿರಿ ಸಂಸ್ಥಾನದ ಮೊರೆಹಕ್ಕು ಅಲ್ಲಿ ಸುಪ್ರಭಾತ, ಮಠ ಮತ್ತು ಸ್ವಾಮೀಜಿ ಕುರಿತ ಸ್ತುತಿಸ್ತೋತ್ರಗಳನ್ನು ಬರೆದು ನೆಮ್ಮದಿ ಪಡೆಯಲಾರಂಭಿಸಿದರು. ಜೊತೆಗೇ ಸಿನಿಮಾ ಗೀತೆಗಳ ರಚನೆಯ ಅವಕಾಶಗಳು ತೆರೆದುಕೊಂಡು ಆಕಡೆ ಹೆಚ್ಚು ಆಸಕ್ತಿ ತೋರಿ ಅದರಲ್ಲಿ ನಿಜವಾಗಿಯೂ ದೊಡ್ಡ ಸಾಧನೆ ಮಾಡಿದರು. ನಿಜವಾಗಿಯೂ ಅವರು ಕೆಲವು ತುಂಬ ಒಳ್ಳೆಯ ಸಿನಿಮಾ ಗೀತೆಗಳನ್ನು ಬರೆದಿದ್ದಾರೆ ಎಂಬುದಂತೂ ನಿಜ.

ಆದಿಚುಂಚನಗಿರಿ ಮಠಾಧೀಶರ ಮೂಲಕ ಸಂಘ ಪರಿವಾರ ಮಡಿಲು ಸೇರಿದ ದೊರಂಗೌ ಈಗ ಅದರ ಸಾಹಿತ್ಯ ಆಸ್ಥಾನದ ಎರಡು ಅನರ್ಘ್ಯ ರತ್ನಗಳಲ್ಲಿ ಒಬ್ಬರಾಗಿ (ಇನ್ನೊಬ್ಬರು ಸುಪ್ರಸಿದ್ಧ ದಲಿತ್ ಕಾರ್ಡ್ ಹೋಲ್ಡರ್ ಮಲ್ಲೇಪುರಂ ಜಿ. ವೆಂಕಟೇಶ್!) ಪದ್ಮಶ್ರೀ ರಾರಾಜಿತರೂ ಆದ ಮೇಲೆ ಹಾವೇರಿ ಜಾತ್ರೆಯ ರಥ ಏರುವ ಸೌಭಾಗ್ಯ ದೊರೆಯದೇ ಇದ್ದೀತೆ? ಹಾಗೇ, ನವರಾಷ್ಟ್ರವಾದಿಗಳಿಂದ ಹೇರಲ್ಪಟ್ಟ ಇಷ್ಟೊಂದು ಭಾರ, ಮೊದಲೇ ನಮ್ರರಾದ ಅವರನ್ನು ಈಗ ಇನ್ನಷ್ಟು ವಿನಮ್ರರನ್ನಾಗಿ ಮಾಡಿ ಹಿಂದಿ ಪರ ವಕ್ತಾರಿಕೆಗೆ ದೂಡದಿದ್ದೀತೆ? ಗೌಡರೇ ನಿಮಗೆ ನನ್ನ ಸಹಾನುಭೂತಿಯ ಅಭಿನಂದನೆಗಳು.

**-ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: **ಚಿಂತಾಮಣಿ** ಲೇ: **ಸಿದ್ಧಲಿಂಗ ಪಟ್ಟಣಶೆಟ್ಟಿ** ಪ್ರ: **ಅನನ್ಯ ಪ್ರಕಾಶನ, ಧಾರವಾಡ-೪** (೯೪೪೮೬೩೦೬೩೭) ಪು: ೧೫೬ ಬೆ: ರೂ. ೧೪೦/-

### ಮಾಗಿದ ಬದುಕಿನ ಸಮಗ್ರ ನೋಟದ ಸಾಲುಗಳು




**ಕ**ನ್ನಡದ ಹಿರಿಯ ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿವರ ಈ ಸಂಕಲನ ಬಡತನದಿಂದ ಮಧ್ಯಮ ವರ್ಗಕ್ಕೆ ಚಲಿಸಿದ ಮಾಗಿದ ವ್ಯಕ್ತಿಯ ಜೀವನಾನುಭವಗಳ ಸಂಕಥನ. ಒಂದು ಸಮ ಇರದ ಒಂದೆ ಕೈಯ ಹಲವು ಬೆರಳುಗಳಂತೆ ಇಲ್ಲಿನ ಕವಿತೆಗಳಿವೆ.

ಇಲ್ಲಿನವು ಬಹುಪಾಲು ಸ್ವಕೇಂದ್ರಿತ ರಚನೆಗಳು. ನಾನು, ನನ್ನವಳು, ನನ್ನವರು, ನಾಕಂಡ ಬದುಕು ಇದು ಇಲ್ಲಿನ ಜಗತ್ತು. ತಾನು ಕಂಡುಂಡ ಅನುಭವ, ಪಡೆದ ಒಳನೋಟಗಳು ಮತ್ತು ಸಿದ್ಧಿಸಿಕೊಂಡ ಅರಿವುಗಳಿಗೆ ಕವಿ ಇಲ್ಲಿ ಕಾವ್ಯದ ಬಟ್ಟೆ ತೊಡಿಸಿದ್ದಾರೆ. ಕೆಲವೊಮ್ಮೆ ಇಲ್ಲಿ ಬದುಕಿನ ಒಂದು ನಿರ್ದಿಷ್ಟ ಕಾಲಘಟ್ಟದ ಚಿತ್ರ ಇದ್ದರೆ ಕೆಲವೊಮ್ಮೆ ಸಾಕಷ್ಟು ಸಿಹಿ, ಕಹಿ, ಹುಳಿ, ಒಗರುಗಳನ್ನು ಅನುಭವಿಸಿದ ಜೀವವು ಹಿಂದಕ್ಕೆ ತಿರುಗಿ ನೋಡುವ ಆತ್ಮಾವಲೋಕನದ ಚಿತ್ರಗಳಿವೆ. ಅವೆಲ್ಲವು ವರ್ತಮಾನದಲ್ಲಿ ನಿಂತು ನೆನಪನ್ನು ಬಗೆಯುತ್ತವೆ.

**ಈಗ ತಿಳಿವು ಜೊತೆಗೂಡಿದೆ/ಬದುಕಿನ ಮಸಿ ಕದಡಿದೆ, ತೀರುತಿದೆ ಆರುತಿದೆ...**
**ಬದುಕು ಹೊರೆಯಾಗದ ಹಾಗೆ / ಹೊರುವುದು ಹೇಗೆ ಹೋರುವುದು**
**ಇದು ನನಗೇ ಪ್ರಶ್ನೆ** (ಪು೩೫)

ಬದುಕನ್ನು ಹೊರುವುದು ಮತ್ತು ಹೋರುವುದು ಹೇಗೆ; ನನ್ನತನವನ್ನು ಉಳಿಸಿಕೊಳ್ಳುವುದು ಹೇಗೆ ಎಂಬ ಪ್ರಶ್ನೆಗಳು ಇಲ್ಲಿ ಮತ್ತೆ ಮತ್ತೆ ಬರುತ್ತವೆ. ಇಲ್ಲಿನ ಬಹುತೇಕ ಕವಿತೆಗಳಲ್ಲಿ ನೈತಿಕತೆಯ ಜಿಜ್ಞಾಸೆಗಳಿವೆ. ಇದು ಹೀಗೇ ಹೌದು ಎಂಬ ಮೌಲ್ಯಾತ್ಮಕವಾದ ಹೇಳಿಕೆಗಳಿಗಿಂತ ಇಲ್ಲಿ ಇಡಿಬಾಳಿನ ಅರಿವಿನ ಮಂಡನೆಗಳು ಬದುಕಿನ ಮೌಲ್ಯಮಾಪನವಾಗಿ ಚಲನೆ ಪಡೆದಿವೆ:

**ಹೆದರಿದ್ದೆ,/ಇದು ಸಾಗರ ಆಳ ಭಯಾನಕ ಎಂದು ಭಾವಿಸಿದ್ದೆ...**
**ಅರಿವಾಗಿದೆ ಈಗ ಬದುಕು ಕೇವಲ ಉರುಳು...**
**ಉರುಳು ಜಾರು ತಿಳಿದತ್ತ ಹೊರಳು...** (ಪು೬೧)

ಮೊದಮೊದಲು ಕೆಸರು ಸಾಕಷ್ಟು ಮೆತ್ತಿಕೊಂಡೆ, ಕೊನೆಗೆ ಹೆಸರು ಹೊತ್ತುಕೊಂಡೆ, ಮೌನ ಕಾಪಾಡಿತು, ಈಗ ಕಾಯುತ್ತಿದೆ ವಯೋಧರ್ಮ ಕಾದಿಟ್ಟ ಮಾನಧನ (ಪು೯೪), ಒಳಿತೇ ಆಯಿತು ಹರಿವ ದಾರಿ ದಿಸೆ ಗೊತ್ತಾಯಿತು (ಪು೧೨೭), ಕಾಲ ಮಾಗಿದೆ, ಈಗ, ತನು ಬಾಗಿದೆ (ಪು೩೭), ಹಿಂದೆ ಸರಿಯಲಾರೆ ಸುಖದಿ ಸುರಿಯಲಾರೆ ಹರಡಿ ಹರಿಯಲಾರೆ (ಪು೧೨೫), ಇದು ನನ್ನ ಸ್ವಂತದ್ದೆ ಮುಖವಾಡವೆ (ಪು೧೧೫), ಅವ್ವಾ ಹಾಡು ಮುಗಿಯುತ್ತ ಬಂದಿದೆ (ಪು೧೨೩), ಇಂತಹ ಹಲವು ಮಾತುಗಳು ಇಲ್ಲಿನ ಹಲವು ಪದ್ಯಗಳಲ್ಲಿ ಬದುಕಿನ ಅರಿವನ್ನು ಮಥಿಸಿ ನೀಡಿವೆ.

ಇಲ್ಲಿನ ಕಾಲಮುಖ ಕವಿತೆ ಅವ್ವನ ಜೊತೆಗಿನ ನೇರ ಸಂವಾದವಾದರೆ, ಸಖೀಸಂವಾದ ಅರ್ಜುನ ದ್ರೌಪದಿಯರ ಪಾತ್ರಪ್ರತೀಕಗಳ ಮೂಲಕ ನಡೆಯುವ ಸಂಗಾತಿಗಳ ಸಂವಾದವಾಗಿದೆ. ಹೀಗೆ ಇಲ್ಲಿ ಅವ್ವನ ಜೊತೆಗಿನ, ಸಂಗಾತಿಗಳ ಜೊತೆಗಿನ, ಮಗಳ ಜೊತೆಗಿನ ಸಂವಾದಗಳು, ಗುರುವಿನ ಜೊತೆಗಿನ ಸಂವಾದ, ಆತ್ಮಸಂವಾದದಂತಹ ಹಲವು ಬಗೆಯ ಸಂವಾದ ಮಾರ್ಗದ ಕವಿತೆಗಳಿವೆ.

ವೈಯುಕ್ತಿಕತೆ ಎನ್ನುವುದು ಸಾಮುದಾಯಿಕತೆಯಾಗಿ ಜಿಗಿತ ಪಡೆಯಲು ಸಾಧ್ಯ ಆಗುವುದು ಕವಿತೆಯು ದೇಶಕಾಲಗಳಿಂದ ಜಿಗಿಯಬಲ್ಲ ರೂಪಕ ಆದಾಗ. ಇಲ್ಲಿನ ಸಖೀಸಂವಾದ ಹಾಗೂ ಹರಿಗೀತ ಹಾಗೆ ರೂಪಕ ಆಗಬಲ್ಲ ಸಾಧ್ಯತೆ ಇರುವ ಕವಿತೆಗಳು. ಲಯಗಾರಿಕೆ ಮತ್ತು ಕಟ್ಟಾಣಿಕೆಯ ದೃಷ್ಟಿಯಿಂದ ಇಲ್ಲಿ ಹಲವು ಬಗೆಯ ಪ್ರಯೋಗಗಳಿವೆ. ಹರಿಗೀತದ (ಪು೭೭) ಒಂದೊಂದು ಕಂಡಿಕೆಗಳೂ ಭಿನ್ನ ಲಯಗಳಲ್ಲಿ ರಚನೆಯಾಗಿವೆ. ಇದು ಹೆಣ್ಣಿನ ಮೂಲಕ ಮಂಡಿಸಿದ ನಿರೂಪಣೆಯಾದರೆ ಅವ್ವ ಹಚ್ಚಿಕೊಟ್ಟ ತಾಬಂಡಿ (ಪು೯೬) ಗಂಡಿನ ಮೂಲಕ ಮಂಡಿಸಿರುವ ನಿರೂಪಣೆ. ಬೆಳ್ಳಿತಾಯಿ (ಪು೧೦೬) ತಂದೆ ಮಗಳ ಸಂವಾದ ಆದರೂ ಅದು ಅವ್ವ ಮಗನ ಸಂವಾದವೆ ಹೌದು. ತಾಯಿ ಮತ್ತು ಸಂಗಾತಿ ಗಂಡಿನ ಜೀವನದಲ್ಲಿ ನಿರಂತರ ಒದಗಿಬರುವ ಕನ್ನಡಿ, ಆಸರೆ ಮತ್ತು ದಾರಿದೀಪಗಳು ಎಂಬ ತಿಳಿವು ಈ ಸಂಕಲನದ ಉದ್ದಕ್ಕು ಮಂಡನೆಯಾಗಿದೆ. ಇವು ಹೊರಗಿಲ್ಲ; ಗಂಡಿನೊಳಗೇ ಇವೆ.

ಗಾಂಧಿ ಪದ್ಯ ಎರಡು ಕಾಲಗಳ ನಡುವಣ ತುಲನೆಯನ್ನು ನೀಡಿದರೆ ಮಹಾನಗೆ ಎರಡು ಸ್ಥಳಗಳ ತುಲನೆಯ ಮೂಲಕ ವಿಚಾರವನ್ನು ಮಂಡಿಸುತ್ತದೆ. ಹೀಗೆ ವರ್ತಮಾನ ಮತ್ತು ಭೂತ ಹೀಗೆ ಎರಡು ಕಾಲಗಳ ತುಲನೆ, ಅಲ್ಲಿ-ಇಲ್ಲಿ, ಊರು-ಪೇಟೆ ಹೀಗೆ ಎರಡು ಸ್ಥಳಗಳ ತುಲನೆ, ಅಂತರಂಗ ಮತ್ತು ಬಹಿರಂಗ ಹೀಗೆ ಎರಡು ಸ್ಥಿತಿಗಳ ತುಲನೆ ಇರುವ ತೌಲನಿಕ ಮಾರ್ಗದ ಕವಿತೆಗಳೂ ಇಲ್ಲಿವೆ. ಗಿರಡ್ಡಿ, ನೀಲವ್ವಕ್ಕ, ಬೆಳ್ಳಿ, ಬುದ್ಧ, ಗಾಂಧಿ, ಹೇಮ ಇತ್ಯಾದಿ ವ್ಯಕ್ತಿಚಿತ್ರಗಳ ಕವಿತೆಗಳೂ ಇಲ್ಲಿವೆ.

**ಅತ್ತಿತ್ತ ಸುತ್ತಿದೆ ಅಲೆದೆ/ ಮಾಯಾಮೃಗದ ಕಾಟ ಸುತ್ತ ಅನುಭವಿಸಿದೆ.**
**ಈ ವಯಸ್ಸಿನಲ್ಲಿ ಮನೆ ತುಂಬಿ ನಿಂತಿದ್ದಾರೆ**
**ಗದ್ದಲದ ಪೇಟೆಯ ಮಂದಿ** (ಪು೧೨೧)

ಗದ್ದಲದ ಪೇಟೆ, ಹಣ್ಣು, ಹೊಲ, ನದಿ, ಲಡಾಯಿ, ಹೀಗೆ ಇಲ್ಲಿ ಬಿಡಿ ಅನ್ಯೋಕ್ತಿಗಳು ಇರುವಂತೆಯೆ ಕೆಲವು ಇಡಿ ಪದ್ಯಗಳೇ ಅನ್ಯೋಕ್ತಿಯಂತೆ ರಚನೆಯಾಗಿವೆ. ಅನ್ಯೋಕ್ತಿ ಮತ್ತು ರೂಪಕ ಮಾರ್ಗದ ಕವಿತೆಗಳು ಯಾವಾಗಲೂ ಅನುಭವವನ್ನು ವಾಚಾಳಿಯಂತೆ ಬಣ್ಣಿಸುವುದಿಲ್ಲ; ಅವು ಓದುಗನನ್ನು ಸಾಕಷ್ಟು ಕಲ್ಪನೆ ಮತ್ತು ಚಿಂತನೆಗಳಿಗೆ ಹಚ್ಚುತ್ತವೆ. ಬೀಡಾಡಿ ದನ, ಪುಂಡಿಕಟಿಗೆ, ಒಳಿತೆ ಆಯಿತು, ಮಾಟದ ತಾಟು, ಕಾಲಮುಖ, ಕೊನೆಯ ಅಂಕ ಮೊದಲಾದುವು ಅಂತಹ ಅನ್ಯೋಕ್ತಿ ಮಾರ್ಗದ ಕವಿತೆಗಳು.

ನಮ್ಮ ಶಿಷ್ಟ ಕಾವ್ಯ ಪರಂಪರೆಗಳನ್ನು ನೋಡಿದರೆ ರಾಚನಿಕತೆಯಲ್ಲಿ ಹಲವು ಚಲನೆಗಳು ಕಾಣುತ್ತವೆ. ಕಟ್ಟುನಿಟ್ಟಾದ ನಿಯಮಗಳಿಂದ ಮುಕ್ತತೆಯ ಕಡೆಗೆ; ಆ ಮೂಲಕ ಯಾದೃಚ್ಛಿಕತೆಯ ಕಡೆಗೆ ನಾವೆಲ್ಲ ಚಲಿಸಿದ್ದೇವೆ. ಸಾಲುಗಳನ್ನು ಮುರಿದು ಬರೆಯುವ ಕ್ರಮದಲ್ಲಿಯಂತು ನಾವಿಂದು ಯಾವ ಕಟ್ಟಳೆಗಳನ್ನೂ ಪಾಲಿಸುತ್ತಿಲ್ಲ. ಕವಿಯ ಯಾದೃಚ್ಛಿಕತೆಗೇ ಅಲ್ಲಿ ಅಗ್ರಪಟ್ಟ, ಚಿಂತಾಮಣಿಯಲ್ಲಿನ ಅರ್ಥದ, ಭಾವದ, ಓದಿನ ಲಯದ ನಿಲ್ದಾಣಗಳಿಗು ಸಾಲಿನ ಅಂತ್ಯಕ್ಕು ಯಾವ ಸಂಬಂಧವೂ ಇಲ್ಲ. ಆ ನಿಲ್ದಾಣಗಳು ಸಾಲಿನ ಆದಿ, ಮಧ್ಯ ಅಂತ್ಯ ಎಲ್ಲಾದರೂ ಬರಬಹುದು. ಇದು ವಿಶೇಷವಾಗಿ ನವ್ಯದ ಕಟ್ಟಾಣಿಕೆಯ ಒಂದು ತಂತ್ರ. ಇದನ್ನು ಸಾಕಷ್ಟು ಇವರು ಬಳಸಿದ್ದಾರೆ.

ಬದುಕಿನಲ್ಲಿ ಎಲ್ಲರಿಗೂ ದಟ್ಟವಾದ ಅನುಭವಗಳು ಇರುತ್ತವೆ. ಆದರೆ ಎಲ್ಲರಿಗು ತೀವ್ರವಾದ ಅಭಿವ್ಯಕ್ತಿ ಕ್ರಮಗಳು ಸಿದ್ಧಿಸಿರುವುದಿಲ್ಲ. ಅದು ಅವರವರ ಸಾಧನೆ-ಸಿದ್ಧಿ. ಆತ್ಮಕೇಂದ್ರಿತ ಜಗತ್ತಿನ ಅಭಿವ್ಯಕ್ತಿಯಾದ ಈ ಸಂಕಲನದಲ್ಲಿ ಅಂತಹ ಸಿದ್ಧಿ ಕಾಣುತ್ತದೆ.

**-ರಾಮಲಿಂಗಪ್ಪ ಟಿ. ಬೇಗೂರು**

ಪು: **ಹಾಡು ಕಲಿಸಿದ ಹರ** (ಜನಪದ ಮಹಾಕಾವ್ಯಗಳು: ಸಂಸ್ಕೃತಿ ಅಧ್ಯಯನ) ಲೇ: ಸುರೇಶ್ ನಾಗಲಮಡಿಕೆ ಪ್ರ: **ದೀಪಂಕರ ಪುಸ್ತಕ,** ನಾಗಲಮಡಿಕೆ(೯೮೮೬೨೭೯೪೪೧) ಪು: ೩೩೦ ಬೆ: ರೂ. ೩೦೦/-

### ಸಾಂಸ್ಕೃತಿಕ ಅಧ್ಯಯನದ ಹೊಸ ಮಾದರಿ




**ಈ** ಹೊತ್ತಿಗೆಯು ಮಂಟೇಸ್ವಾಮಿ, ಮಾದಪ್ಪ, ಜುಂಜಪ್ಪ, ಹಾಲುಮತ, ಜನಪದ ಮಹಾಭಾರತ ಮೊದಲಾದ ಐದು ಜನಪದ ಮಹಾಕಾವ್ಯಗಳನ್ನು ನೆಲೆಯಾಗಿಸಿಕೊಂಡು, ಐದು ಪ್ರಮುಖ ಅಧ್ಯಾಯಗಳಲ್ಲಿ ಸಂಸ್ಕೃತಿ ಸಂಕಥನವನ್ನು ಕಟ್ಟುವ ಮಹತ್ವದ ಅಧ್ಯಯನವಾಗಿದೆ. ಈ ಪುಸ್ತಕದ ಎಲ್ಲಾ ಸಂಗತಿಗಳನ್ನು ಕುರಿತು ಈ ಚಿಕ್ಕ ಬರಹದಲ್ಲಿ ಚರ್ಚಿಸುವುದು ದುಸ್ತರವೇ ಸರಿ. ಹಾಗಾಗಿ ಇದರ ಒಟ್ಟು ಆಶಯವನ್ನು ತಾತ್ವಿಕವಾಗಿ ವಿವರಿಸಲು ಯತ್ನಿಸುತ್ತೇನೆ. ಅಂದರೆ ಈ ಅಧ್ಯಯನದ ಒಟ್ಟು ತಾತ್ವಿಕತೆ ಏನು? ಇದನ್ನು ಹೇಗೆ ಇಲ್ಲಿ ಮಂಡಿಸಲಾಗಿದೆ ಮತ್ತು ಇಂತಹ ವೈಚಾರಿಕ ಚೌಕಟ್ಟನ್ನು ನೆಲೆಗೊಳಿಸುವಲ್ಲಿ ಅನುಸರಿಸಿದ ವಿಧಿ-ವಿಧಾನಗಳು ಎಂತಹವು? ಈ ಅಧ್ಯಯನದ ವಿಶ್ಲೇಷಣೆಗೆ ಬಳಸಿಕೊಂಡ ಆಕರಗಳು ಹಾಗೂ ಪರಿಕರಗಳು ಯಾವವು? ಎಂಬಿತ್ಯಾದಿ ನೆಲೆಗಳನ್ನು ಸ್ಥೂಲವಾಗಿ ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ. ಕ್ಷೇತ್ರಕಾರ್ಯ ಮತ್ತು ವ್ಯಾಪಕವಾದ ಅಧ್ಯಯನಗಳ ಪರಿಣಾಮವಾಗಿ ಈ ಸಂಶೋಧನೆಯನ್ನು ನಾಗಲಮಡಿಕೆ ಅವರು ಕೈಗೊಂಡಿದ್ದಾರೆ. ಯುವತಲೆಮಾರಿನ ಈಗಿನ ಬಹುತೇಕ ವಿದ್ವಾಂಸರು ತುಳಿಯದ ದಾರಿಯನ್ನು ಈ ಲೇಖಕರು ಆಯ್ಕೆ ಮಾಡಿಕೊಂಡಿದ್ದಾರೆ.

ಜನಪದ ಮಹಾಕಾವ್ಯಗಳ ಮೂಲಕ ಜ್ಞಾನಪರಂಪರೆ, ಸಾಹಿತ್ಯ ಮೀಮಾಂಸೆ ಮತ್ತು ಸಾಹಿತ್ಯ ಚರಿತ್ರೆಯ ವಿಭಿನ್ನ ಮಾದರಿಗಳನ್ನು ಶೋಧಿಸುವ ಗುರಿಯನ್ನು ಇಲ್ಲಿ ಕಾಣುತ್ತೇವೆ. ಯಾವುದೇ ಅಧ್ಯಯನಶಿಸ್ತು, ತತ್ವಶಾಸ್ತ್ರ ಹಾಗೂ ದರ್ಶನಶಾಸ್ತ್ರಗಳ ಮೂಲಭೂತ ಗುರಿಯೇ ಸಮೂಹಗಳ ಬದುಕಿನ ಅಸ್ಮಿತೆ, ಅಸ್ತಿತ್ವ, ಜ್ಞಾನಮೀಮಾಂಸೆಗಳನ್ನು ಕುರಿತ ಪ್ರಶ್ನೆಗಳನ್ನು ಮುಂಚೂಣಿಗೆ ತರುವುದಾಗಿರುತ್ತದೆ. ಆದರೆ ಸಾಂಸ್ಕೃತಿಕ ರಾಜಕಾರಣದಿಂದ ಜನಬದುಕಿನಲ್ಲಿ ಹಾಸುಹೊಕ್ಕಾಗಿರುವ ಜನಪದ ಕಥನ, ಪುರಾಣ ಮತ್ತು ಮಹಾಕಾವ್ಯಗಳು ಅಲಕ್ಷ್ಯಕ್ಕೆ ಒಳಗಾಗಿರುತ್ತವೆ. ಇಂತಹ ಅಲಕ್ಷ್ಯಕ್ಕೆ ವಸಾಹತುಶಾಹಿ, ಮಾರ್ಗ ಪರಂಪರೆಗಳು ಕಾರಣವಾಗಿರುವುದನ್ನು ಈ ಪುಸ್ತಕದ ಚರ್ಚೆಯುದ್ದಕ್ಕೂ ನೋಡುತ್ತೇವೆ. ಧರ್ಮದ ಪ್ರಶ್ನೆಗಳು, ಭಾಷೆಯ ಪ್ರಶ್ನೆಗಳು ಹೇಗೆ ಒಂದು ಪ್ರದೇಶ, ಸಮೂಹ ಮತ್ತು ಜನಾಂಗಗಳ ಕಥನಗಳನ್ನು ರೂಪಿಸುವಲ್ಲಿ ಮಹತ್ವವನ್ನು ಪಡೆದಿವೆ ಎನ್ನುವುದನ್ನು ಅತ್ಯಂತ ಖಚಿತವಾಗಿ ಇಲ್ಲಿ ವಿಶ್ಲೇಷಿಸಲಾಗಿದೆ. ಶಿಷ್ಟ ಸಾಹಿತ್ಯ, ಜನಪದ ಸಾಹಿತ್ಯ, ಮೌಖಿಕ ಸಾಹಿತ್ಯ ಎಂಬಿತ್ಯಾದಿ ವೈರುಧ್ಯಗಳನ್ನು ಪ್ರಶ್ನಿಸುವುದು ಮಾತ್ರವಲ್ಲದೇ, ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ನಿಖರವಾದ ಮಾಹಿತಿಗಳ ಮೂಲಕ ಸಾಹಿತ್ಯ ಚರಿತ್ರೆಯ ಭಿನ್ನ ಮಾದರಿಯನ್ನು ನೆಲೆಗೊಳಿಸುವ ಇರಾದೆಯನ್ನು ಇಲ್ಲಿ ಅತ್ಯಂತ ಸ್ಪಷ್ಟವಾಗಿ ಗುರುತಿಸಬಹುದು.

ಇವತ್ತು ಸಂಸ್ಕೃತಿಯ ಅಧ್ಯಯನದ ವ್ಯಾಪ್ತಿ ಅತ್ಯಂತ ವಿಶಾಲವಾಗಿ ಹರಡಿಕೊಂಡಿದೆ. ಒಂದು ಕಾಲದಲ್ಲಿ ಸಂಸ್ಕೃತಿ ಅಧ್ಯಯನ ಎನ್ನುವುದು ಮಾಹಿತಿಗಳ ವರ್ಣಾತ್ಮಕ ವಿವರಣೆ ಮಾತ್ರವೇ ಆಗಿತ್ತು. ಒಂದು ಆಲೋಚನಾ ಕ್ರಮವನ್ನು ಕಟ್ಟುವ ಇಲ್ಲವೇ ಸಂಕಥವನ್ನಾಗಿ ಅರಿಯುವ ಬದಲಾಗಿ ಕೇವಲ ಮಾಹಿತಿಯನ್ನು ಕ್ರೋಢೀಕರಿಸುವುದಾಗಿತ್ತು. ಸಂಸ್ಕೃತಿ ಓದಿನ ಇಂತಹ ಮಿತಿಗಳನ್ನು ಮೀರುವ ಮಾದರಿ ಪಲ್ಲಟವನ್ನು ಮತ್ತು ನುಡಿಗಟ್ಟುಗಳನ್ನು ಈ ಪುಸ್ತಕದಲ್ಲಿ ಮನಗಾಣುತ್ತೇವೆ. ಈಗಾಗಲೇ ನೆಲೆಗೊಂಡಿರುವ ಜ್ಞಾನಪರಂಪರೆಗಳನ್ನು ಒಡೆದು ಕಟ್ಟುವಲ್ಲಿ ಜನಪದ ಕಥನಗಳು ಹೇಗೆ ಮಹತ್ವವನ್ನು ಪಡೆಯುತ್ತವೆ ಹಾಗೂ ಸಂಸ್ಕೃತಿಯೊಂದರ ಚಹರೆಗಳಾಗಿ ಇವು ಹೇಗೆ ಮೈದಾಳುತ್ತವೆ ಎನ್ನುವುದನ್ನು ಲೇಖಕರು ತಮ್ಮ ಖಚಿತ ವಿಶ್ಲೇಷಣೆಗಳ ಮೂಲಕ ಮಂಡಿಸಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹುದುಗಿದ್ದ ಸಾಂಸ್ಕೃತಿಕ ರಾಜಕಾರಣವನ್ನು ಎದುರಾಗಲು ಬೇಕಾದ ತಾತ್ವಿಕ ಬದ್ಧತೆ ಹಾಗೂ ಸಂಶೋಧನಾ ಪ್ರಾಮಾಣಿಕತೆಯನ್ನು ಲೇಖಕರಲ್ಲಿ ಕಾಣಬಹುದಾಗಿದೆ. ಶಂಬಾ, ಡಿ.ಎಲ್.ಎನ್, ಡಿ.ವಿ.ಜಿ, ಕಲಬುರ್ಗಿ, ಚಿಮೂ, ಶೆಟ್ಟರ್. ಎ.ಕೆ ರಾಮಾನುಜನ್ ಮತ್ತು ಡಿ.ಆರ್ ನಾಗರಾಜ್ ಮೊದಲಾದವರು ರೂಪಿಸಿದ ಮಾದರಿಗಳನ್ನು ನೇರವಾಗಿ ಅನುಸರಿಸದೇ, ತನ್ನದೇ ಅಧ್ಯಯನ ಮಾದರಿಯನ್ನು ರೂಪಿಸಿಕೊಳ್ಳುವ ತುಡಿತವು ಸುರೇಶ್ ಅವರಲ್ಲಿ ಗೋಚರಿಸುತ್ತದೆ. ಅಂದರೆ ಸಾಹಿತ್ಯ ಚರಿತ್ರೆಯನ್ನು ಕಟ್ಟುವ ಪ್ರಕ್ರಿಯೆಯಲ್ಲಿ ಜನಪದ ಕಾವ್ಯಗಳ ಮಹತ್ವವನ್ನು ಗುರುತಿಸುವಲ್ಲಿ ಇಂದಿಗೂ ಎದುರಾಗುವ ವಿದ್ರೋಹತನಗಳನ್ನು ನೋಡಿದರೆ, ನಮ್ಮ ಹಿರಿಯರು ರೂಪಿಸಿದ ಮಾದರಿಗಳನ್ನು ಪಲ್ಲಟಗೊಳಿಸುವ ಜರೂರಿತ್ತು ಅನ್ನುವುದನ್ನು ಇಲ್ಲಿ ಗುರುತಿಸಬಹುದು. ಅಂದರೆ ಒಂದು ಪ್ರಾದೇಶಿಕ ಭಾಷೆಯ ಚರಿತ್ರೆ ಮತ್ತು ಸಾಹಿತ್ಯದ ಚರಿತ್ರೆಯ ಕಟ್ಟೋಣದಲ್ಲಿ ಎದುರಾಗುವ ಸಾಂಸ್ಕೃತಿಕ ಬಿಕ್ಕಟ್ಟುಗಳು ಹಾಗೂ ಪರಿಣಾಮಗಳು ಎಂತಹವು, ಇವುಗಳನ್ನು ವಿಶ್ಲೇಷಿಸಲು ನಾವು ರೂಪಿಸಿಕೊಳ್ಳಬೇಕಾದ ಪರಿಕರಗಳ ಸ್ವರೂಪ ಹೇಗಿರಬೇಕು ಮತ್ತು ಆಕರಗಳನ್ನು ಬಳಸಿಕೊಳ್ಳುವ ವಿನ್ಯಾಸಗಳು ಯಾವವು ಎಂಬುದನ್ನು ಅತ್ಯಂತ ನಿಖರವಾಗಿ ಚರ್ಚಿಸಲಾಗಿದೆ. ಕವಿರಾಜಮಾರ್ಗದಂತಹ ಕಾವ್ಯದಲ್ಲಿಯೂ ಜನಪದ ಆಯಾಮಗಳು ನೆಲೆಗೊಂಡಿರುವುದನ್ನು ಇಲ್ಲಿ ಸರಿಯಾಗಿಯೇ ಗುರುತಿಸಲಾಗಿದೆ.

ಗತವನ್ನು ಕುರಿತು ಚರ್ಚಿಸುವಾಗ ಇಲ್ಲವೇ ಸಮೂಹಗಳ ಮೌಖಿಕ ಕಥನಗಳನ್ನು ವಿಶ್ಲೇಷಿಸುವ ಪ್ರಕ್ರಿಯೆಯಲ್ಲಿ ವರ್ತಮಾನಗೊಳಿಸುವ ಕ್ರಿಯೆ ಅತ್ಯಂತ ಮಹತ್ವದ್ದಾಗಿರುತ್ತದೆ. ಮೌಖಿಕತೆ ಮತ್ತು ಮೌಖಿಕ ಚರಿತ್ರೆಯಲ್ಲಿ ಜನಪದರ ಭಾಷೆ ಹಾಗೂ ಲೋಕದೃಷ್ಟಿಗಳು ಮಹತ್ವದ ಆಕರಗಳಾಗಿವೆ. ಕೆಲವು ಚಾರಿತ್ರಿಕ ಹಾಗೂ ಸಾಹಿತ್ಯಕ ಗ್ರಹಿಕೆಗಳನ್ನು ಒಪ್ಪಿಯೂ ಹಲವು ಮಹತ್ವದ ಪ್ರಶ್ನೆಗಳನ್ನು ಇಲ್ಲಿ ಎತ್ತಲಾಗಿದೆ. ಸಾಹಿತ್ಯ ಚರಿತ್ರೆ ಇಲ್ಲವೇ ಕವಿ ಚರಿತ್ರೆಯನ್ನು ಕಟ್ಟುವಲ್ಲಿ ನಿರ್ದಿಷ್ಟ ತಾತ್ವಿಕತೆ–ವಿಧಿವಿಧಾನಗಳನ್ನು ಪ್ರಶ್ನಿಸುವ ವಿನ್ಯಾಸಗಳೂ ಸರಿಯಾಗಿಯೇ ಇವೆ. ಚರಿತ್ರೆ ಎನ್ನುವುದು ಸಂಸ್ಕೃತಿಗಳ ವಿಕಾಸ ಪಥವೇ ಹೊರತು ಅದೊಂದು ನಿರ್ಮಿತಿಯಲ್ಲ ಎಂಬ ಅಭಿಪ್ರಾಯ ಬಲವಾಗಿಯೇ ಮಂಡಿತವಾಗಿದೆ. ಅಂದರೆ ಚರಿತ್ರೆಯ ಕಟ್ಟೋಣದಲ್ಲಿ ಏರ್ಪಟ್ಟಿರುವ ಅಸಮಾನತೆಯ ಬಗೆಗಿನ ವಿಶ್ಲೇಷಣೆಗಳು ಅತ್ಯಂತ ಪರಿಣಾಮಕಾರಿಯಾಗಿ ಪ್ರಕಟಗೊಂಡಿವೆ. ಸಮೂಹಗಳ ಬದುಕಿನ ಸಾಹಿತ್ಯ, ಚರಿತ್ರೆ, ಪುರಾಣ, ಸಂಸ್ಕೃತಿ ಕುರಿತು ಮಾತ್ನಾಡುವಾಗ ಅವುಗಳಿಗೆ ಖಚಿತ ತಾತ್ವಿಕತೆ ಮತ್ತು ವೈಚಾರಿಕ ಚೌಕಟ್ಟುಗಳನ್ನು ರೂಪಿಸುವುದು ಎಷ್ಟು ಅವಶ್ಯವೆಂಬುದನ್ನು ಈ ಕೃತಿ ಮನವರಿಕೆ ಮಾಡುತ್ತದೆ. ಕೇವಲ ವಿವರಗಳನ್ನು ನಿರೂಪಿಸುತ್ತ ಹೋಗುವುದರಿಂದ ಚರಿತ್ರೆಯ ಅಪಕಲ್ಪನೆಗಳನ್ನು ನಿರ್ನಾಮಮಾಡುವ ಬದಲಾಗಿ ಅವುಗಳನ್ನು ಮುಂದುವರೆಸುವ ಅಪಾಯವೇ ಹೆಚ್ಚಾಗಿರುತ್ತದೆ. ಇಂತಹ ಅಪಾಯಗಳನ್ನು ಮುಖಾಮುಖಿಯಾಗುವ ಮುಖ್ಯ ಇರಾದೆಯೇ ಈ ಪುಸ್ತಕದ ಮೊದಲ ಆದ್ಯತೆಯಾಗಿದೆ. ಆದರೆ ಇಲ್ಲಿಯ ವಿಶ್ಲೇಷಣೆಗಳಿಗೆ ಬಳಸಿರುವ ಮೆಥಡಾಲಜಿಯನ್ನು ಇನ್ನಷ್ಟು ತಾತ್ವಿಕವಾಗಿ ಪಕ್ವಗೊಳಿಸುವ ಅಗತ್ಯವಿದೆ.

**–ಮೇಟಿ ಮಲ್ಲಿಕಾರ್ಜುನ**

ಪು:ಹಿಂಡೆಕುಳ್ಳು (ಕಥಾ ಸಂಕಲನ)ಲೇ: ಅಮರೇಶ ಗಿಣಿವಾರ ಪ್ರ:**ವೈಷ್ಣವಿ ಪ್ರಕಾಶನ,**
ಕೆ.ಗುಡದಿನ್ನಿ ((೯೭೮೨೦೧೭೦೦೨೮) ಪು:**೬೨** ಬೆಲೆ:ರೂ **೮೦/–**

## ದಟ್ಟ ಪ್ರಾದೇಶಿಕ ಸೊಗಡಿನ ಕಥೆಗಳು



ಇದು ಈ ಲೇಖಕನ ಮೊದಲ ಕಥಾಸಂಕಲನವಾಗಿದ್ದು, ಇದರಲ್ಲಿ ಒಟ್ಟು ಹತ್ತು ಕಥೆಗಳಿವೆ. ಲೇಖಕರು ರಾಯಚೂರು ಜಿಲ್ಲೆಯವರಾಗಿದ್ದು ಅಲ್ಲಿಯ ಗ್ರಾಮೀಣ ಭಾಗದ ಕಡುಬಡವರ ಜನಜೀವನವನ್ನು ಅಲ್ಲಿನ ಗ್ರಾಮೀಣರ ಆಡುಭಾಷೆಯಲ್ಲೇ ಕಥೆಗಳಲ್ಲಿ ತೆರೆದಿಟ್ಟಿದ್ದಾರೆ.. ಸಂಕಲನದ ಶೀರ್ಷಿಕೆಯೇ ಸೂಚಿಸುವಂತೆ ಈ ಕಥೆಗಳು ನಾವು ಕಾಣದ ಬೇರಯೇ ಜಗತ್ತಿನ ಚಿತ್ರಣವನ್ನು ನೀಡುತ್ತದೆ.

ಮೊದಲ ಕಥೆ 'ಶಿವನ ಕುದುರೆ' ಯಲ್ಲಿ ನಿರೂಪಕನಾದ ಮಗ ತನ್ನ ಅಪ್ಪ ಎಷ್ಟು ದುಡೀತಿದ್ದನೋ ಅಷ್ಟೇ ಬಡೀತಿದ್ದ ಎಂದನ್ನುತ್ತಾನೆ. ಅಪ್ಪ ಕಾಮ, ದರ್ಪ, ದುಡಿಮೆ ಎಲ್ಲವನ್ನು ಮಿತಿಮೀರಿ ಅನುಭವಿಸಿ, ಕೊನೆಗೆ ಲಕ್ವ ಹೊಡೆದು ಪರಾಧೀನನಾಗುತ್ತಾನೆ. ಇಂತಹ ಅಪ್ಪ ಶೌಚಕ್ಕೆ ಹೋಗಬೇಕಾದಾಗ ಕೂಗಿಕೊಂಡು ರಾಮ ಎಂಬುವವನ ಹೆಗಲೇರುತ್ತಾನೆ. ಆಗ ಅಪ್ಪ 'ಮಿಡತೆ' ಕಂಡಂಗ ಕಾಣ್ತಾನ, ಆಗ ಅಮ್ಮ ಹಿಂದಿನಿಂದ ಬಂದು ನೀರು ತೆಗೊಂಡು ಹೋಗ್ತಾಳ' ಎಂದು ಮಗ ಹೇಳ್ತಾನೆ. ಮಿಡತೆಗೆ 'ಶಿವನ ಕುದುರೆ' ಎಂದು ಹೇಳುವುದರಿಂದ ಈ ಕಥೆಗೆ ಆ ಶೀರ್ಷಿಕೆ ನೀಡಿರುವುದು ಅರ್ಥಪೂರ್ಣ.

'ಹಿಂಡೆಕುಳ್ಳು ಕಥೆಯಲ್ಲಿ 'ಗಂಡ ಅಂದ್ರ ಅವ ಏನಂತ ಪೂರ್ತಿ ತೋರಿಸಿಕೊಟ್ಟಾನ' ಎಂಬಂತೆ ಬದುಕಿದ ಅಪ್ಪ ಸತ್ತಾಗ, ಮಗಳು "ಅಪ್ಪ ಸತ್ತಿದ್ದು ಬೇಸಾಯ್ತು ಅಲಮಾ" ಎಂದು ಕೇಳುತ್ತಾಳೆ. ಅವನನ್ನು ಮಣ್ಣುಮಾಡಿದ ಮೂರುದಿವಸಕ್ಕೆ ಆ ಜಾಗದಲ್ಲಿ ಅವನಿಗೆ ಇಷ್ಟವಾದದ್ದನ್ನು ಇಡಬೇಕೆಂದು ಫಕೀರಪ್ಪ ಮಾವ ಬಡಿಗಿ ಹಿಡಕೊಂಡು ಬಂದು ಹೇಳಿದಾಗ, ಸತ್ತುಹೋದ ಗಂಡ ಸಂದಿಯಲ್ಲಿ ತುರುಕಿಟ್ಟಿದ್ದ 'ಸೂಪರ್ ಪಾಕೀಟ'ನ್ನೇ ಅಲ್ಲಿಡುವುದು ಮತ್ತು "ಇವನು ಮ್ಯಾಕ ಹೋಗ್ಯಾನ, ಅಲ್ಲಿಯೂ ಯಾರಿಗೂ ರೋಗ ಹಚ್ಚಬಾರದು" ಎಂದು ಹೇಳುವುದು ಮಾತ್ರ ಮಾರ್ಮಿಕವಾಗಿದೆ.

ಅಣ್ಣತಮ್ಮಂದಿರ ಹಗೆತನ, ದಿನನಿತ್ಯ ಕಿಟಕಿಯಿಂದ ತೂರಿ ಬರುವ ಜಗಳದ ಮಾತುಗಳು, ಅಣ್ಣನ ಮಗಳ ಮದುವೆಯನ್ನು ತಮ್ಮನ ಹೆಂಡತಿ ಉಪಾಯವಾಗಿ ತಪ್ಪಿಸುವುದು ಇವೆಲ್ಲವನ್ನೂ 'ಗೋಡೆಗಳ ಸೇಡು'ವಿನಲ್ಲಿ ಕಥೆಯಾಗಿಸಿದ್ದಾರೆ. 'ಪಾತ್ರಧಾರಿ' ಕಥೆ ಸಂಕಟ, ವಿಷಾದದ ಕಥೆಗಳನ್ನು ಓದಿದ ನಂತರ ಹಾಸ್ಯದ ಮೂಲಕ ಓದುಗರ ಮನಸ್ಸನ್ನು ಹಗುರ ಮಾಡುವ (ಕಾಮಿಕ್ ರಿಲೀಫ್ ನೀಡುವ) ಕಥೆ. ಪಾತ್ರಧಾರಿಯೊಬ್ಬ ಸಂಭಾಷಣೆಯನ್ನು ತನ್ನ ಬದುಕಿಗೆ ಮತ್ತು ತನ್ನ ಸುತ್ತಮುತ್ತಲಿನವರ ಬದುಕಿಗೆ ಅನ್ವಯಿಸಿಕೊಂಡು ಹೇಳುವ ಮಾತುಗಳು ಸ್ವಾರಸ್ಯಕರವಾಗಿವೆ.

ಜಾಗತೀಕರಣ, ಆಧುನಿಕತೆಗೆ ಆ ಸೀಮೆಯ ಗ್ರಾಮೀಣ ಜನರು ಹೇಗೆ ಒಗ್ಗಿಕೊಳ್ಳುತ್ತಿದ್ದಾರೆ ಎಂಬುದನ್ನು 'ಮನೆ ನಂ.೮೪', 'ನಶೀಪುಡಿ', 'ವಾಪಸ್ಸು ಬಂದ ಪತ್ರ', 'ಹಳ್ಳ ತೋರಿಸಿದರು' ಕಥೆಗಳಲ್ಲಿ ನೋಡಬಹುದು. ನೀರಾವರಿ ಸೌಲಭ್ಯ ಕೊಡ್ತೀವಿ ಎಂದು ಜಮೀನು ಕಿತ್ತುಕೊಳ್ಳುವಂತಹ ಕ್ರೌರ್ಯ, ದಲ್ಲಾಳಿಗಳಿಂದ ಶೋಷಣೆಗೊಳಗಾಗುವ ಉಣ್ಣೆ ನೇಯುವ ಹೆಂಗಸರ ಕಷ್ಟ, ನಕ್ಸಲೈಟ್ ಆಗಿ ಕಾಣದಾಗುವ ಯುವಕನ ಕಥೆ, ಪ್ರೀತಿಪ್ರೇಮ ಇವೆಲ್ಲಾ ಇಲ್ಲಿನ ಪ್ರಾದೇಶಿಕ ಭಾಷೆಯಲ್ಲಿ ಸಶಕ್ತವಾಗಿ, ಸಹಜವಾಗಿ ಮೂಡಿಬಂದಿವೆ. ಪಿತೃಪ್ರಧಾನ ವ್ಯವಸ್ಥೆ ನಮ್ಮ ಸಮಾಜದಲ್ಲಿ ಎಷ್ಟು ಆಳವಾಗಿ ಬೇರುಬಿಟ್ಟಿದೆ ಎಂಬುದು ಬಹುತೇಕ ಎಲ್ಲಾ ಕಥೆಗಳಲ್ಲಿ ಅನಾವರಣಗೊಂಡಿದೆ.

ಈ ಕಥೆಗಳನ್ನು ಹೆಣೆದಿರುವ ಆಡುಭಾಷೆಯ ಪದಗಳು, ನುಡಿಗಟ್ಟುಗಳು ಎಷ್ಟು ದಟ್ಟವಾಗಿವೆಯೆಂದರೆ ಅವು ಆ ನೆಲದ್ದೇ ಕಥೆಗಳೆನ್ನುವಷ್ಟು. ಕನ್ನಡದ ಬೇರೆ ಪ್ರದೇಶಗಳ ಓದುಗರಿಗೆ ಈ ಪದಗಳ ಅರ್ಥ ತಿಳಿಯಲಾರದು. ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದರೆ ಅವರು ಮತ್ತೊಮ್ಮೆ ಓದಬೇಕಾಗಬಹುದು. ಸಂಕಲನದಲ್ಲಿ ಆ ಪದಗಳಿಗೆ ಅರ್ಥವನ್ನು ಕೊನೆಯಲ್ಲಿ ಕೊಡಬಹುದಿತ್ತು. ಪ್ರಾದೇಶಿಕ ಭಾಷೆಯೇ ಈ ಕಥೆಗಳ ಜೀವಾಳವಾದರೆ, ಇದೇ ಅಂಶ ಈ ಕಥೆಗಳ ಮಿತಿಯೂ ಆಗಬಹುದು. ಹಾಗಾಗಿ ಕನ್ನಡದ ಎಲ್ಲಾ ಓದುಗರನ್ನು ಸುಲಭವಾಗಿ ಸೆಳೆಯಲಾರದು. ನಮಗೆ ತಿಳಿಯದ ಭಾಷೆಯನ್ನು ಅರ್ಥಮಾಡಿಕೊಳ್ಳುವ ಹುಡುಕಾಟದ ಮನಸ್ಸುಗಳಿಗೆ ಈ ಕಥೆಗಳು ರುಚಿಸುವುದರಲ್ಲಿ ಸಂಶಯವಿಲ್ಲ.

**–ಕೆ. ಪದ್ಮಾಕ್ಷಿ**

ಹತ್ತು ವರ್ಷಗಳಿಗೆ ಕಾಲಿಡುತ್ತಿರುವ
'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**ಜಿ. ರಾಜಶೇಖರ**
ಮತ್ತು ಕುಟುಂಬ
**ಉಡುಪಿ**

ಹತ್ತು ವರ್ಷಗಳಿಗೆ ಕಾಲಿಡುತ್ತಿರುವ
'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**ಡಾ. ಜೆ.ಕೆ. ರಮೇಶ್**
ಮತ್ತು ಕುಟುಂಬ
**ತೀರ್ಥಹಳ್ಳಿ**

**ಹತ್ತು ವರ್ಷಗಳಿಗೆ ಕಾಲಿಡುತ್ತಿರುವ**
**'ಹೊಸ ಮನುಷ್ಯ'ದ ಓದುಗರೆಲ್ಲರಿಗೂ**
**ಹಾರ್ದಿಕ ಶುಭಾಶಯಗಳು**



**ಭಕ್ತರಾಮೇಗೌಡ**
**ಮತ್ತು ಕುಟುಂಬ**
**ಬೆಂಗಳೂರು**

## ತಿಂಗಳ ಕೊನೆಯ ಸಾಲುಗಳು



ಕುಲ ಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ?

ಆತ್ಮ ಯಾವ ಕುಲ ಜೀವ ಯಾವ ಕುಲ?
ತತ್ವೇಂದ್ರಿಯಗಳ ಕುಲ ಪೇಳಿರಯ್ಯಾ!
ಆತ್ಮಾಂತರಾತ್ಮ ನೆಲೆಯಾದಿ ಕೇಶವ
ಆತನೊಲಿದ ಮೇಲೆ ಯಾತರ ಕುಲವಯ್ಯಾ?

–ಕನಕದಾಸರು

**ಶುಭಾಶಯಗಳೊಂದಿಗೆ,**

**ಅವಿರತ ಪ್ರತಿಷ್ಠಾನ**
# ೨೩, ೩ನೇ ಘಟ್ಟ, ೨ನೇ ಮುಖ್ಯ ರಸ್ತೆ
ವಿನಾಯಕ ನಗರ, ಬೆಂಗಳೂರು-೫೬೦೦೪೦

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2019-21

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)